ಸಂಪುಟ: 05 ಸಂಚಿಕೆ: 63 ಪುಟಗಳು: 08 ಶನಿವಾರ 17 ಮೇ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನೀವು ಇತರರಿಗೆ ಸಹಾಯ ಮಾಡಿದರೆ, ನೀವು ನಿಜವಾದ ಯಶಸ್ಸನ್ನು ಸಾಧಿಸಿದ್ದೀರಿ ಎಂದರ್ಥ. ಹಾಗಾಗಿ ಅಗತ್ಯವಿರುವವರಿಗೆ ಸಹಾಯ ಮಾಡಿ.

## ರಸ್ತೆ ಅಪಘಾತ ಪರಿಹಾರ: ಬಿಬಿಎಂಪಿ ವಿರುದ್ಧ ಕ್ರಮ ಕೈಗೊಳ್ಳಿ

• ಉದಯವಾಹಿನಿ, ಬೆಂಗಳೂರು

ರಸ್ತೆ ಅಪಘಾತಕ್ಕೆ ಚಾಲಕನ ವೇಗ ಮತ್ತು ನಿರ್ಲಕ್ಷ್ಯ ಮಾತ್ರವಲ್ಲ, ರಸ್ತೆ ಗುಂಡಿಯೂ ಕಾರಣ. ಹಾಗಾಗಿ, ಬಿಬಿಎಂಪಿ ಹಾಗೂ ಗುತ್ತಿಗೆದಾರರನ್ನೂ ಪಾರ್ಟಿಯನ್ನಾಗಿ ಮಾಡಬೇಕೆಂದು ಕೋರಿ ಐಸಿಐಸಿಐ ಲೋಂಬರ್ಡ್ ಜನರಲ್ ಇನ್ಶೂರೆನ್ಸ್ ಕಂಪನಿ ಸಲ್ಲಿಸಿದ್ದ ಎರಡು ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ವಿಮಾ ಕಂಪನಿ ಅರ್ಜಿ ವಜಾ

ವಿಮಾ ಕಂಪನಿ ನೀಡಿದ್ದ ಅರ್ಜಿ ಪರಿಶೀಲಿಸಿದ ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, ಈ ಆದೇಶ ನೀಡಿದೆ. ವಾದ -ಪ್ರತಿವಾದದ ನಂತರ ನ್ಯಾಯಪೀಠ, ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿರುವಂತೆ ಅಪಘಾತ ಸಂಭವಿಸಿರುವುದಕ್ಕೆ ಕಾರು ಚಾಲಕನ ವೇಗದ ಮತ್ತು ಅಜಾಗರೂಕ ಚಾಲನೆ ಪ್ರಮುಖ ಕಾರಣ. ಜತೆಗೆ ಅಪಘಾತ ನಡೆದ ಸ್ಥಳದಿಂದ ಕಾರಿನ ಚಾಲಕ ಪರಾರಿಯಾಗಿದ್ದಾನೆ. ಕಾರು ಅಪಘಾತದಲ್ಲಿ ಭಾಗಿಯಾಗಿದೆ. ಅಂತಹ ಸಂದರ್ಭದಲ್ಲಿ ಘಟನೆಗೆ ಕಾರಣರಾದ ಎಲ್ಲಾರನ್ನೂ ಪ್ರತಿವಾದಿಗಳನ್ನು ತೋರಿಸಬೇಕಾಗುತ್ತದೆ,' ಎಂದು ಹೇಳಿದೆ.

ರಸ್ತೆ ಗುಂಡಿಗಳಿಂದಾಗಿಯೇ ಅಪಘಾತ ಎನಲ್ಲ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುವವರು ಎಲ್ಲೂ ರಸ್ತೆ ಗುಂಡಿಗಳಿಂದಾಗಿಯೇ ಅಪಘಾತವಾಗಿದೆ ಎಂದು ಹೇಳಿಲ್ಲ. ಆದರೆ, ಘಟನೆಗೆ ಚಾಲಕನ ವೇಗದ ಮತ್ತು ನಿರ್ಲಕ್ಷ್ಯ ಚಾಲನೆ ಕಾರಣವೆಂದು ಹೇಳಲಾಗಿದೆ. ಆರೋಪಪಟ್ಟಿಯಲ್ಲಿ ಮಾತ್ರ ಘಟನೆಗೆ ರಸ್ತೆ ಗುಂಡಿಯೂ ಕಾರಣವೆಂದು ಉಲ್ಲೇಖಿಸಲಾಗಿದೆ. ಆದರರ್ಥ ಅಪಘಾತದಲ್ಲಿ ಪರಿಹಾರ ಕೋರಿರುವವರದ್ದೂ ತಪ್ಪಿಲ್ಲ ಎಂದಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.




ಸುಪ್ರೀಂಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ''ಕಾನೂನಿನಲ್ಲಿಇಬ್ಬರು ಹೊಣೆಗಾರರನ್ನು ಪರಿಹಾರಕ್ಕೆ ನಿಗದಿಪಡಿಸಲಾಗದು. ನ್ಯಾಯಾಲಯ ಕೂಡ ಕಂಪೋಸಿಟ್ ಮತ್ತು ಕಾಂಟ್ರಿಬ್ಯೂಟರಿ ನಿರ್ಲಕ್ಷ್ಯದ ವ್ಯತ್ಯಾಸ ಗಮನಿಸಿದೆ. ಈ ಪ್ರಕರಣದಲ್ಲಿಅಪಘಾತಕ್ಕೆ ಯಾವ ವ್ಯಕ್ತಿ ಕಾರಣನಾಗಿರುತ್ತಾನೆಯೋ ಆತನೇ ಪರಿಹಾರ ಕೋರಲಾಗದು.

ಘಟನೆಗೆ ಆತನ ನಿರ್ಲಕ್ಷ್ಯದ ಪಾತ್ರವೂ ಇದೆ. ಈ ಪ್ರಕರಣ ಸಮಗ್ರ ನಿರ್ಲಕ್ಷ್ಯದ ಪ್ರಕರಣವೇ ಹೊರತು ಪೂರಕ ನಿರ್ಲಕ್ಷ್ಯದ ಪ್ರಕರಣವಲ್ಲ'' ಎಂದು ಆದೇಶ ನೀಡಿದೆ.

**ಪ್ರಕರಣದ ಹಿನ್ನೆಲೆ ಏನು**

ಕೇರಳದ ಪಟ್ಟಣಂತಿಟ್ಟದ ನಿವಾಸಿ ಆರ್.ಎಂ.ರಾಹುಲ್‌ಗೆ 2022ರ ಅಕ್ಟೋಬರ್ 19 ರಂದು ಬೆಂಗಳೂರಿನಲ್ಲಿ ಮೋಟಾರ್ ಸೈಕಲ್ ಓಡಿಸುತ್ತಿದ್ದಾಗ ಕಾರು ಡಿಕ್ಕಿ ಹೊಡೆಯಿತು. ರಾಹುಲ್ ಹಾಗೂ ಆತನ ಹಿಂಬದಿ ಸವಾರ ಅಲಪ್ಪುಳದ ಅರ್ಷಿದ್ ಅಜೀಶದ್ ಗಾಯಗೊಂಡಿದ್ದರು. ನಂತರ ಅರ್ಷಿದ್ ಸಾವನ್ನಪ್ಪಿದ್ದರು. ಆ ಹಿನ್ನೆಲೆಯಲ್ಲಿ ಅವರ ಕುಟುಂಬದವರು 20 ಲಕ್ಷ ರೂ. ಪರಿಹಾರ ಕೋರಿ ಮೋಟಾರು ವಾಹನ ಅಪಘಾತ ನ್ಯಾಯಮಂಡಳಿ (ಎಂಎಸಿಸಿ)ಯಲ್ಲಿ ಅರ್ಜಿ ಸಲ್ಲಿಸಿದ್ದರು.



• ದೆಹಲಿಯಿಂದ ಬೆಂಗಳೂರಿಗೆ ಪ್ರಯಾಣಿಸುವ ವಿಮಾನದಲ್ಲಿ ಏರ್ ಇಂಡಿಯಾ ಸಿಬ್ಬಂದಿ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರ ಜನ್ಮದಿನವನ್ನು ಮುಂಚಿತವಾಗಿ ಆಚರಿಸಿದರು

## ಪ್ರೇತಾತ್ಮ ಓಡಿಸುವ ನೆಪದಲ್ಲಿ ಕಾನ್ಸ್‌ಟೇಬಲ್‌ಗೆ 5.19 ಲಕ್ಷ ರೂ. ಮೋಸ

• ಉದಯವಾಹಿನಿ, ಬೆಂಗಳೂರು

ದೆವ್ವದ ಆತ್ಮಗಳ ಕಾಟ ಬಿಡಿಸುವ ಹಾಗೂ ವಿವಾಹ ಯೋಗದ ವಿಶೇಷ ಪೂಜೆ ಹೆಸರಲ್ಲಿ ಮಹಿಳಾ ಕಾನ್ಸ್‌ಟೇಬಲ್‌ವೊಬ್ಬರ ಬಳಿ 5.19 ಲಕ್ಷ ರೂ. ಪಡೆದು ವಂಚಿಸಿದ್ದ ಜ್ಯೋತಿಷಿಯೊಬ್ಬನನ್ನು ಆಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಲಬುರಗಿಯ ಹೇಮಂತ್‌ಭಟ್ ಬಂಧಿತ. ನಗರದಲ್ಲಿ ನೆಲೆಸಿರುವ 33 ವರ್ಷದ ಸಂತ್ರಸ್ತೆ ಅನಾರೋಗ್ಯದಿಂದ ಬಳಲುತ್ತಿದ್ದು, ಸ್ನೇಹಿತೆಯೊಬ್ಬರ ಮುಖಾಂತರ ಹೇಮಂತ್ ಭಟ್ ಪರಿಚಿತನಾಗಿದ್ದ. 'ನಿಮ್ಮ ದೇಹದಲ್ಲಿ 15 ಆತ್ಮಗಳಿವೆ. ಅವುಗಳನ್ನು ದೇಹದಿಂದ ಓಡಿಸಬೇಕಾದರೆ ವಿಶೇಷ ಪೂಜೆ ಮಾಡಿಸಬೇಕು' ಎಂದಿದ್ದ. ಜತೆಗೆ, ವಿಶೇಷ ಪೂಜೆ ಮಾಡಲು ಪ್ರತ್ಯೇಕ ಕೊಠಡಿ ಇರಬೇಕು. ವಿಶೇಷ ಪೂಜೆ ಹಾಗೂ ವಶೀಕರಣ ಮಾಡುವುದರಿಂದ ನಿಮ್ಮ ಆರೋಗ್ಯ ಸಮಸ್ಯೆ ಬಗೆಹರಿಯಲಿದೆ. ಜತೆಗೆ, ವಿವಾಹ ಯೋಗ ಕೂಡಿ ಬರಲಿದೆ ಎಂದು ಹೇಮಂತ್ ಭಟ್ ನೀಡಿದ್ದ ಭರವಸೆಯನ್ನು ಸಂತ್ರಸ್ತೆ ನಂಬಿದ್ದರು. ಜತೆಗೆ, ಹೇಮಂತ್ ಸೂಚನೆಯಂತೆ ಹಂತ-ಹಂತವಾಗಿ 5.19 ಲಕ್ಷ ರೂ. ನೀಡಿದ್ದರು. ಸಮಸ್ಯೆಯಿಂದ ಮುಕ್ತಿ ಹೊಂದುವ ಸಲುವಾಗಿ ಸಂತ್ರಸ್ತೆ ಹೇಮಂತ್ ಭಟ್‌ನನ್ನು ನಗರಕ್ಕೆ ಕರೆಸಿದ್ದಳು. ಹೋಟೆಲ್‌ವೊಂದರಲ್ಲಿ ಕೊಠಡಿ ಬುಕ್ ಕಾಯ್ದಿರಿಸಿ ತನ್ನಿಬ್ಬರು ಸ್ನೇಹಿತೆಯರ ಜತೆ ತೆರಳಿದ್ದರು. ಕೊಠಡಿಯಲ್ಲಿ ಧೂಪ ಹಾಕಿ ನಿಂಬೆ ಹಣ್ಣು ಕತ್ತರಿಸಿ ಪೂಜೆ ನೆರವೇರಿಸಿದ್ದ ಹೇಮಂತ್, ಇನ್ನು ಮುಂದೆ ಯಾವುದೇ ಸಮಸ್ಯೆ ಇರುವುದಿಲ್ಲ ಎಂದಿದ್ದ. ಈ ನಡುವೆ, ಪೂಜೆ ನೋಡಿದ್ದ ಸಂತ್ರಸ್ತೆ ಸ್ನೇಹಿತೆಯರಿಬ್ಬರು ತಮ್ಮ ಸಮಸ್ಯೆಗಳನ್ನು ಬಗೆಹರಿಸುವಂತೆ ಹೇಮಂತ್ ಬಳಿ ಕೇಳಿಕೊಂಡಿದ್ದರು. ಅದೇ ದಿನ ಅವರಿಬ್ಬರೂ ಹೇಮಂತ್ ಸೂಚನೆ ಮೇರೆಗೆ 1.30 ಲಕ್ಷ ರೂ. ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದರು. ಆದರೆ, ಹಲವು ತಿಂಗಳು ಉರುಳಿದರೂ ಸಮಸ್ಯೆಗಳಿಗೆ ಪರಿಹಾರ ಸಿಗದ ಸಂತ್ರಸ್ತೆ, ಮಹಿಳಾ ಕಾನ್ಸ್‌ಟೇಬಲ್, ಹೇಮಂತ್‌ಗೆ ದೂರವಾಣಿ ಮುಖಾಂತರ ಕರೆ ಮಾಡಿ ವಿಚಾರ ತಿಳಿಸಿದರೂ ಹಲವು ಸಬೂಬು ಹೇಳುತ್ತಿದ್ದ. ಕಡೆಗೆ ದೂರವಾಣಿ ಕರೆ ಸ್ವೀಕರಿಸುತ್ತಿರಲಿಲ್ಲ. ಅಂತಿಮವಾಗಿ ಮೋಸ ಹೋಗಿರುವುದನ್ನು ಅರಿತ ಸಂತ್ರಸ್ತೆಯರು ಇತ್ತೀಚೆಗೆ ದೂರು ದಾಖಲಿಸಿದ್ದರು.

## ಆಕಸ್ಮಿಕವಾಗಿ ಗಡಿದಾಟಿದ ಯೋಧನಿಗೆ 21 ದಿನ ಪಾಕಿಸ್ತಾನ ಚಿತ್ರಹಿಂಸೆ

• ಉದಯವಾಹಿನಿ, ಹೊಸದಿಲ್ಲಿ

ಪಾಕಿಸ್ತಾನ ಗಡಿಯನ್ನು ಆಕಸ್ಮಿಕವಾಗಿ ದಾಟಿದ್ದ ಭಾರತದ ಯೋಧ ಪೂರ್ಣಂ ಕುಮಾರ್ ಶಾ ಅವರಿಗೆ ಪಾಕಿಸ್ತಾನ 21 ದಿನವೂ ಚಿತ್ರಹಿಂಸೆಯನ್ನು ನೀಡಿದೆ. ಅಂತಾರಾಷ್ಟ್ರೀಯ ಗಡಿಯಲ್ಲಿ ಬಿಎಸ್‌ಎಫ್ ಯೋಧರು ಹಾಗೂ ಅಧಿಕಾರಿಗಳನ್ನು ನಿಯೋಜಿಸಿರುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಪೂರ್ಣ ಕುಮಾರ್ ಶಾಗೆ ಮಾನಸಿಕ ಹಿಂಸೆ ನೀಡಿದೆ. ಎಷ್ಟರಮಟ್ಟಿಗೆ ಎಂದರೆ, ನಿದ್ದೆ ಮಾಡಲು ಬಿಡದೇ, ಬಾತ್‌ರೂಮ್‌ಗೆ ಹೋಗಲು ಬಿಟ್ಟಿಲ್ಲ. ಪಹಲ್ಗಾಮ್ ದಾಳಿ ನಡೆದ ಮರುದಿನವೇ ಅಂದ್ರೇ ಏಪ್ರಿಲ್ 23ರಂದು ಪಂಜಾಬ್‌ನ ಫಿರೋಜ್‌ಪುರ್ ಸೆಕ್ಟರ್‌ನಲ್ಲಿ ಕೆಲಸ ಮಾಡುತ್ತಿದ್ದ ಬಿಎಸ್‌ಎಫ್ ಯೋಧ ಪೂರ್ಣಂ ಕುಮಾರ್ ಶಾ ಆಕಸ್ಮಿಕವಾಗಿ ಗಡಿಯನ್ನು ದಾಟಿದ್ದರು. ಈ ವೇಳೆ ಪಾಕಿಸ್ತಾನದ ಸೇನೆ ಪೂರ್ಣಂ ಕುಮಾರ್ ಶಾ ಅವರನ್ನು ಬಂಧಿಸಿತ್ತು.

# ಫಲಿಸಲಿಲ್ಲ ಪಾಕ್ ಕುತಂತ್ರ

## ಈಗ ಶಾಂತಿ ಮಂತ್ರ...!

• ಪಾಕ್ ಕುತಂತ್ರ ಬುದ್ಧಿ ಶುರು • ಭಾರತಕ್ಕೆ ತಲೆಬಾಗಿದ ಪಾಕ್ • ಪಂಜಾಬ್ ಪ್ರಾಂತ್ಯದಲ್ಲಿರುವ ಕಮ್ರಾ ವಾಯುನೆಲೆಗೆ ಭೇಟಿ • ಯುದ್ಧೋತ್ಸಾಹದಿಂದ ಹಿಂದೆ ಸರಿದ ಪಾಕಿಸ್ತಾನ

• ಭಾರತದೊಂದಿಗೆ 'ಶಾಂತಿ' ಮಾತುಕತೆಗೆ ಸಿದ್ಧ: ಪಾಕ್ ಪ್ರಧಾನಿ


• ಪಾಕ್ ಪ್ರಧಾನಿ ಆಹ್ವಾನ, ಇನ್ನು ನಮಗೆ ಉಳಿಗಾಲ ಇಲ್ಲ

**ಭಾರತದ ಉತ್ತರಕ್ಕೆ ಪಾಕ್ ತತ್ತರ...!**

**ಇಸ್ಲಾಮಾಬಾದ್ :** ಭಾರತದೊಂದಿಗೆ ಶಾಂತಿ ಮಾತುಕತೆಗೆ ಸಿದ್ಧರಿದ್ದೇವೆ ಎಂದು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ. ಪಂಜಾಬ್ ಪ್ರಾಂತ್ಯದ ಕಮ್ರಾ ವಾಯುನೆಲೆಗೆ ಭೇಟಿ ನೀಡಿದ್ದ ಅವರು ಅಧಿಕಾರಿಗಳು ಮತ್ತು ಸೈನಿಕರ ಜೊತೆ ಚರ್ಚೆ ನಡೆಸಿದರು. ಈ ವೇಳೆ ಭಾರತದೊಂದಿಗಿನ ಮಾತುಕತೆಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಪ್ರಧಾನಿ ಶೆಹಬಾಜ್ ಜೊತೆ ಉಪ ಪ್ರಧಾನಿ ಇಶಾಕ್ ದಾರ್, ರಕ್ಷಣಾ ಸಚಿವ ಖವಾಜಾ ಆಸಿಫ್, ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್, ವಾಯುಪಡೆ ಮುಖ್ಯಸ್ಥ ಜಹೀರ್ ಅಹ್ಮದ್ ಬಾಬರ್ ಸಿಧು ವಾಯುನೆಲೆಗೆ ಭೇಟಿ ನೀಡಿದ್ದರು. ನಾಲ್ಕು ದಿನಗಳ ಕಾಲ ತೀವ್ರ ಗಡಿಯಾಚೆಗಿನ ಡ್ರೋನ್ ಮತ್ತು ಕ್ಷಿಪಣಿ ದಾಳಿಯ ಬಳಿಕ ಪರಸ್ಪರ ಸಂಘರ್ಷ ಕೊನೆಗೊಳಿಸಲು ಮೇ.10ರಂದು ಭಾರತ ಮತ್ತು ಪಾಕಿಸ್ತಾನಗಳು ಒಪ್ಪಿದ್ದವು. ಅದಾದ ನಂತರ ಎರಡನೇ ಬಾರಿಗೆ ವಾಯುನೆಲೆಯೊಂದಕ್ಕೆ ಪಾಕ್ ಪ್ರಧಾನಿ ಭೇಟಿ ಕೊಟ್ಟಿದ್ದಾರೆ. ಬುಧವಾರ, ಸಿಯಾಲ್ ಕೋಟ್‌ನ ಪಸ್ರೂರ್ ಕಂಟೋನ್ಮೆಂಟ್‌ಗೆ ಪ್ರಧಾನಿ ಶೆಹಬಾಜ್ ಭೇಟಿ ನೀಡಿ, ಸೈನಿಕರೊಂದಿಗೆ ಮಾತುಕತೆ ನಡೆಸಿದ್ದರು. ಜಮ್ಮು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ 26 ಜನರ ಹತ್ಯೆ ಬಳಿಕ ಭಾರತೀಯ ಸಶಸ್ತ್ರ ಪಡೆಗಳು ಮೇ 7ರ ಮುಂಜಾನೆ ಆಪರೇಷನ್ ಸಿಂಧೂರ ನಡೆಸಿದ್ದವು. ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಅನೇಕ ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿ ನಡೆಸಿದ ವೈಮಾನಿಕ ದಾಳಿಯಲ್ಲಿ ಸುಮಾರು 100ಕ್ಕೂ ಹೆಚ್ಚು ಉಗ್ರರನ್ನು ಕೊಲ್ಲಲಾಗಿತ್ತು. ಪಾಕಿಸ್ತಾನವು ಎಲ್‌ಒಸಿ ಸೇರಿದಂತೆ ಗಡಿಯುದ್ದಕ್ಕೂ ರಾತ್ರಿ ವೇಳೆ ನಿರಂತರ ಡ್ರೋನ್ ಹಾಗೂ ಗುಂಡಿನ ದಾಳಿ ನಡೆಸಿತ್ತು. ಭಾರತೀಯ ಸೇನಾ ನೆಲೆಗಳ ಮೇಲೆಯೂ ದಾಳಿಗೆ ಯತ್ನಿಸಿತ್ತು. ಪ್ರತಿಯಾಗಿ ಭಾರತವೂ ದಾಳಿ ಯಶಸ್ವಿಯಾಗಿ ಹಿಮ್ಮೆಟ್ಟಿಸಿತ್ತು. ಭಾರತೀಯ ಸಶಸ್ತ್ರ ಪಡೆಗಳು ರಫೀಕಿ, ಮುರಿದ್, ಚಕ್ಲಾಲಾ, ರಹೀಂ ಯಾರ್ ಖಾನ್, ಸುಕ್ಕೂರ್ ಮತ್ತು ಚುನಿಯನ್ ಸೇರಿದಂತೆ ಪಾಕಿಸ್ತಾನಿ ಮಿಲಿಟರಿ ನೆಲೆಗಳ ಮೇಲೆ ಪ್ರತಿದಾಳಿ ನಡೆಸಿದ್ದವು.

**ಪಾಕ್ ಆಕ್ರಮಿತ ಕಾಶ್ಮೀರ ಮಾತ್ರ :** ಭಾರತವೂ ಸಹ ಈಚೆಗೆ ಪಾಕಿಸ್ತಾನದೊಂದಿಗೆ ಮಾತನಾಡುವ ವಿಚಾರವಾಗಿ ಅತ್ಯಂತ ಸ್ಪಷ್ಟವಾಗಿ ಹೇಳಿದೆ. ಪಾಕಿಸ್ತಾನದೊಂದಿಗೆ ಮಾತನಾಡುವುದಕ್ಕೆ ಇನ್ನೇನೂ ಉಳಿದಿಲ್ಲ. ಬಾಕಿ ಉಳಿದಿರುವುದು ಪಾಕ್ ಆಕ್ರಮಿತ ಕಾಶ್ಮೀರ ವಿಚಾರ ಮಾತ್ರ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ವಿಚಾರವಾಗಿ ಮಾತ್ರ ನಾವು ಆ ದೇಶದೊಂದಿಗೆ ಮಾತನಾಡಲು ಇಚ್ಛಿಸುತ್ತೇವೆ ಎಂದು ಭಾರತ ಸರ್ಕಾರವು ಸ್ಪಷ್ಟಪಡಿಸಿದೆ.

ಹೀಗಾಗಿ, ಈ ವಿಚಾರವು ಇದೀಗ ಭಾರೀ ಚರ್ಚೆಗೆ ಕಾರಣವಾಗಿದೆ. ಪಾಕಿಸ್ತಾನದ ಶಾಂತಿ ಮಾತುಕತೆಯ ಆಹ್ವಾನಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ಈ ವರೆಗೆ ಯಾವುದೇ ಅಧಿಕೃತ ಹೇಳಿಕೆಯನ್ನು ನೀಡಿಲ್ಲ. ಆಪರೇಷನ್ ಸಿಂಧೂರ ಕಾರ್ಯಾಚರಣೆಯ ನಂತರ ಭಾರತ ಹಾಗೂ ಪಾಕಿಸ್ತಾನದ DGMO ಹಂತದಲ್ಲಿ ಮಾತುಕತೆ ನಡೆದಿತ್ತು. ಇದಾದ ಮೇಲೆ ಕದನ ವಿರಾಮ ಘೋಷಣೆಯಾಗಿತ್ತು. ಆದರೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನನ್ನ ಮಧ್ಯಸ್ಥಿಕೆಯಿಂದಲೇ ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧ ನಿಂತಿತ್ತು ಎಂದು ಹೇಳಿದ್ದರು.




**6 ವಾಯುಪಡೆ ಸಿಬ್ಬಂದಿಯ ಹತ್ಯೆ**

ಆಪರೇಷನ್ ಸಿಂಧೂರ್‌ನಲ್ಲಿ ಭಾರತದ ನಿಲುವನ್ನು ಮೌನವಾಗಿ ಒಪ್ಪಿಕೊಂಡಿರುವ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಮುಖ್ಯಮಂತ್ರಿ, ಭೋಲಾರಿ ವಾಯುನೆಲೆಯನ್ನು ಗುರಿಯಾಗಿಸಿಕೊಂಡು ಭಾರತೀಯ ವಾಯುದಾಳಿಗಳು ನಡೆಸಿವೆ ಎಂದು ದೃಢಪಡಿಸಿದ್ದಾರೆ. ಇದರಿಂದಾಗಿ 6 ವಾಯುಪಡೆಯ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದಿದ್ದಾರೆ. ಭಾರತೀಯ ವಾಯುಪಡೆಗಳು ಪಾಕಿಸ್ತಾನಿ ಮಿಲಿಟರಿ ಸ್ಥಾಪನೆಗಳನ್ನು ಗುರಿಯಾಗಿಸಿಕೊಂಡಿವೆ ಎಂಬ ಭಾರತದ ನಿಲುವನ್ನು ಸಿಂಧ್ ಸಿಎಂ ನೀಡಿದ ಈ ಹೇಳಿಕೆ ದೃಢಪಡಿಸುತ್ತದೆ. ಆ ದಾಳಿಗಳು ನಾಗರಿಕರನ್ನು ಗುರಿಯಾಗಿಸಿಕೊಂಡಿವೆ ಎಂಬ ಪಾಕಿಸ್ತಾನದ ಹೇಳಿಕೆಯನ್ನು ಸಹ ಇದು ನಿರಾಕರಿಸುತ್ತದೆ. ಸಿಂಧ್‌ನಲ್ಲಿ 7 ಜನ ಹುತಾತ್ಮರಾಗಿದ್ದಾರೆ. ಭೋಲಾರಿಯಲ್ಲಿ ನಡೆದ ದಾಳಿಯಲ್ಲಿ ವಾಯುಪಡೆಯ 6 ಅಧಿಕಾರಿಗಳು ಮತ್ತು ತಂತ್ರಜ್ಞರು ಹುತಾತ್ಮರಾದರು'' ಎಂದು ಸಿಂಧ್ ಮುಖ್ಯಮಂತ್ರಿ ಮುರಾದ್ ಅಲಿ ಶಾ ಹೇಳಿದರು.

1 ಭಾರತದ ಮುಂದೆ ಮಂಡಿಯೂರಿದ ಪಾಕಿಸ್ತಾನ

2 ಭಾರತದೊಂದಿಗೆ ಶಾಂತಿಗೆ ಮುಂದಾದ ಪಾಕಿಸ್ತಾನ

3 ಪ್ರಧಾನಿ ಶೆಹಬಾದ್ ಷರೀಫ್ ಶಾಂತಿ ಮಾತುಕತೆಗೆ ಆಹ್ವಾನ

4 ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತದಿಂದ ಆಫರೇಷನ್ ಸಿಂಧೂರ ಕಾರ್ಯಾಚರಣೆ

**ಸಿಂಧು ಜಲ ಒಪ್ಪಂದ ಸ್ಥಗಿತ**

ಪಾಕಿಸ್ತಾನ ಗಡಿಯಾಚೆಗಿನ ಭಯೋತ್ಪಾದನೆಯನ್ನು ನಿಲ್ಲಿಸುವವರೆಗೆ ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸಲಾಗುವುದು ಎಂದು ವಿದೇಶಾಂಗ ಸಚಿವ ಡಾ. ಎಸ್ ಜೈಶಂಕರ್ ಸ್ಪಷ್ಟಪಡಿಸಿದ್ದಾರೆ. ಭಾರತ ಮುಂದಿಟ್ಟಿರುವ ಈ ಹೊಸ ಸವಾಲನ್ನು ಸ್ವೀಕರಿಸಲು ಆಗದೆ ಹಾಗೆ ಸುಮ್ಮನೆ ಇರಲೂ ಆಗದ ಪರಿಸ್ಥಿತಿಗೆ ಪಾಕಿಸ್ತಾನ ಸಿಲುಕಿದೆ, ಸಿಂಧೂ ಜಲ ಒಪ್ಪಂದ ರದ್ದತಿಯಿಂದಾಗಿ ನದಿ ಹರಿಯುತ್ತಿದ್ದ ಭಾಗ ಒಣಗಿ ಹೋಗಿದೆ. ನದಿಯೇ ನೀರನ್ನೇ ಆಶ್ರಯಿಸಿದ್ದ ರೈತರು ಸೇರಿದಂತೆ ಅನೇಕರ ಜನ ಜೀವನದ ಮೇಲೆ ತೀವ್ರ ಪರಿಣಾಮ ಬೀರಿದ್ದು ಪಾಕಿಸ್ತಾನ ಮತ್ತಷ್ಟು ಸಮಸ್ಯೆ ಎದುರಿಸುವಂತಾಗಿದೆ.

## ಇಸ್ಕಾನ್ ದೇಗುಲದ ಬಗ್ಗೆ ಸುಪ್ರೀಂ ಮಹತ್ವದ ತೀರ್ಪು


• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿರುವ ಇಸ್ಕಾನ್‌ನ ಹರೇ ಕೃಷ್ಣ ಮಂದಿರದ ಒಡೆತನ ಸಂಬಂಧ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಜತೆಗೆ ದೇಗುಲದ ಉಸ್ತುವಾರಿಯನ್ನು ಬೆಂಗಳೂರು ಇಸ್ಕಾನ್ ಸೊಸೈಟಿಗೆ ಸೇರಿದ್ದು ಎಂದು ಹೇಳಿದೆ. ಒಡೆತನ ವಿಚಾರವಾಗಿ ಇಸ್ಕಾನ್ ಮುಂಬಯಿ ಪರವಾಗಿ 2011ರ ಮೇ 23ರಂದು ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಬೆಂಗಳೂರು ಇಸ್ಕಾನ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ಆಗಸ್ಟೀನ್ ಜಾರ್ಜ್ ಅವರಿದ್ದ ದ್ವಿಸದಸ್ಯ ಪೀಠವು ಬೆಂಗಳೂರು ಇಸ್ಕಾನ್ ಪರ ತೀರ್ಪು ನೀಡಿದೆ.

**ಮುಂಬೈನಲ್ಲಿ ಏಷ್ಯಾದ ಅತಿ ದೊಡ್ಡ ಇಸ್ಕಾನ್ ದೇಗುಲ**

ಕರ್ನಾಟಕದಲ್ಲಿ ನೋಂದಾಯಿತ ಬೆಂಗಳೂರು ಇಸ್ಕಾನ್ ಸೊಸೈಟಿಯು ದಶಕಗಳಿಂದ ತಾವು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರು ದೇವಾಲಯವನ್ನು ನಿರ್ವಹಿಸುತ್ತಿದ್ದೇವೆ ಎಂದು ಅರ್ಜಿಯಲ್ಲಿಉಲ್ಲೇಖಿಸಲಾಗಿತ್ತು.

**ಏನಿದು ವಿವಾದ?:** ಬೆಂಗಳೂರು ಇಸ್ಕಾನ್ ಮತ್ತು ಮುಂಬೈ ಇಸ್ಕಾನ್ ನಡುವೆ ವಿವಾದ ದೀರ್ಘಕಾಲದಿಂದಲೂ ಇದೆ. ಅದು 25 ವರ್ಷಗಳಿಂದಲೂ ನಡೆಯುತ್ತಾ ಬಂದಿದೆ. ಈ ವಿವಾದವು 1977ರಲ್ಲಿ ಇಸ್ಕಾನ್ ಸಂಸ್ಥಾಪಕರಾದ ಶ್ರೀಪ್ರಭುಪಾದರು ಕೃಷ್ಣೈಕ್ಯರಾದ ನಂತರ ಪ್ರಾರಂಭವಾಯಿತು. ಆಗ ಹುಟ್ಟಿಕೊಂಡಿದ್ದೇ, ಇಸ್ಕಾನ್ ಬೆಂಗಳೂರು ಮತ್ತು ಮುಂಬೈ ಘಟಕಗಳ ನಡುವಿನ ಆಸ್ತಿಯ ಹಕ್ಕುಗಳ ಮೇಲಿನ ತಕರಾರು. ಹಲವಾರು ಸುತ್ತಿನ ಮಾತುಕತೆಗಳು, ಸಂಧಾನಗಳು ವಿಫಲವಾದ ನಂತರ ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು. 25 ವರ್ಷಗಳ ಕೋರ್ಟ್ ಹೋರಾಟದ ನಂತರ ಬೆಂಗಳೂರು ಇಸ್ಕಾನ್ ಸಂಸ್ಥೆಗೆ ಬೆಂಗಳೂರಿನ ಹರೆ ಕೃಷ್ಣ ದೇವಸ್ಥಾನದ ಮಾಲೀಕತ್ವ ಮತ್ತು ನಿರ್ವಹಣೆಯ ಹಕ್ಕನ್ನು ಸುಪ್ರೀಂ ಕೋರ್ಟ್ ನೀಡಿದೆ. ನವೀ ಮುಂಬೈ ಪ್ರಾಂತ್ಯದ ಖಾರ್ಘರ್‌ನಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಇಸ್ಕಾನ್ ದೇಗುಲವನ್ನು ಪ್ರಧಾನಿ ನರೇಂದ್ರ ಮೋದಿಯವರು, ಜ. 15ರಂದು ಲೋಕಾರ್ಪಣೆಗೊಳಿಸಿದರು. ಅಂದಾಜು 9 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿರುವ ಈ ದೇಗುಲವು ಏಷ್ಯಾದಲ್ಲೇ 2ನೇ ಅತಿ ದೊಡ್ಡ ಇಸ್ಕಾನ್ ದೇವಸ್ಥಾನ ಎಂಬ ಹಿರಿಮೆಗೆ ಪಾತ್ರವಾಗಿದೆ. ಭಾರತದ ಪೌರಾಣಿಕ ಹಿನ್ನೆಲೆಯಿರುವ ಹನ್ನೆರಡು ಕಾಡುಗಳಿಂದ ಪ್ರೇರಿತವಾದ ಉದ್ಯಾನವೊಂದನ್ನು ಈ ದೇವಾಲಯದ ಆವರಣದಲ್ಲಿ ನಿರ್ಮಿಸಿರುವುದು ಇಲ್ಲಿನ ವಿಶೇಷ.



# ನಿಮ್ಮನ್ನು ಪಾಕಿಸ್ತಾನಕ್ಕೆ ಕಳಿಸುತ್ತೇವೆ, ನಮ್ಮ ಸೇನೆಯ ಪರಾಕ್ರಮ ಕಣ್ತುಂಬಿಕೊಂಡು ಬನ್ನಿ

■ ಎಚ್‌ಡಿಕೆ ಸವಾಲು ಸ್ವೀಕರಿಸುವರೇ ಕೊತ್ತೂರು ಮಂಜುನಾಥ್? ■ ಕೊತ್ತೂರು ನೀಡಿರುವ ಹೇಳಿಕೆ ಕಾಂಗ್ರೆಸ್ ಪಕ್ಷದ ಅಂತರಾತ್ಮದ ದನಿ

• ಉದಯವಾಹಿನಿ, ಬೆಂಗಳೂರು

ಆಪರೇಷನ್ ಸಿಂಧೂರ್ ಬಗ್ಗೆ ಕೋಲಾರದ ಶಾಸಕ ಕೊತ್ತೂರು ಮಂಜುನಾಥ್ ನೀಡಿರುವ ಹೇಳಿಕೆ ಕಾಂಗ್ರೆಸ್ ಪಕ್ಷದ ಅಂತರಾತ್ಮದ ದನಿ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು; ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಂತರ ಸೀನಿಯರ್ ಖರ್ಗೆ, ಜ್ಯೂನಿಯರ್ ಖರ್ಗೆ, ರಾಹುಲ್ ಗಾಂಧಿ ಸೇರಿ ಕರ್ನಾಟಕದ ಸೋ ಕಾಲ್ಡ್ ಕಾಂಗ್ರೆಸ್ ನಾಯಕರು ಕೂಡ ಇದೇ ರೀತಿಯಲ್ಲಿ ಹೇಳಿಕೆ ನೀಡಿದ್ದರು ಎಂದು ಕಿಡಿಕಾರಿದ್ದಾರೆ. ಪಹಲ್ಗಾಮ್'ನಲ್ಲಿ ಭಾರತೀಯ ಪ್ರವಾಸಿಗರ ಮೇಲೆ ಪೈಶಾಚಿಕ ಭಯೋತ್ಪಾದಕ ದಾಳಿ ಮತ್ತು ಉಗ್ರರಿಗೆ ಪಾಕಿಸ್ತಾನದ ಚಿತಾವಣಿಯಷ್ಟೇ ಅಲ್ಲದೇ ತನ್ನ ತನು-ಮನ-ಧನ ಅರ್ಪಣೆ ಮಾಡುತ್ತಿರುವುದನ್ನು ಖಂಡಿಸುವ ಬದಲಿಗೆ ಕಾಂಗ್ರೆಸ್ ಪಕ್ಷವು ಸೇನಾಪಡೆಗಳನ್ನು, ಪ್ರಧಾನಿ ನರೇಂದ್ರ ಮೋದಿ ಅವರನ್ನೂ ನಿಂದಿಸುತ್ತಿರುವುದು ನಾಚಿಕೆಗೇಡು ಎಂದು ಕೇಂದ್ರ ಸಚಿವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಪಾಕಿಸ್ತಾನ ಸೃಷ್ಟಿಯಾಗಿದ್ದು ಹೇಗೆ?**

ಕಾಂಗ್ರೆಸ್, ಭಾರತದ ರಾಜಕೀಯ ಪಕ್ಷವೋ? ಅಥವಾ ಶತ್ರು ದೇಶದ ವಕ್ತಾರಿಕೆ ಮಾಡುತ್ತಿರುವ ಪಕ್ಷವೋ? ಅದರ ತನ್ನ DNA ಭಾರತದ್ದೋ..? ಅಥವಾ ಪಾಕಿಸ್ತಾನದ್ದೋ..? ಎಂಬುದನ್ನು ಅದುವೇ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿರುವ ಕುಮಾರಸ್ವಾಮಿ, ಪಾಕಿಸ್ತಾನ ಸೃಷ್ಟಿಯಾಗಿದ್ದು ಹೇಗೆ? ಅದರಲ್ಲಿ ಕಾಂಗ್ರೆಸ್ ಪಾತ್ರವೇನು? ಎಂಬ ಬಗ್ಗೆ ಚರ್ಚಿಸುವ ಅಗತ್ಯವಿಲ್ಲ. ಆದರೆ, ದೇಶ ವಿಭಜನೆಯಾಗಿ ಏಳೂವರೆ ದಶಕ ಮೀರಿದರೂ ಆ ಪಕ್ಷ ಇನ್ನೂ ಪಾಕಿಸ್ತಾನ ಮನಃಸ್ಥಿತಿಯಲ್ಲೇ ಇದೆ! ಅಸ್ತಿತ್ವ ಭಾರತದಲ್ಲಿ, ಅದರ ಹೃದಯ ಮಾತ್ರ ಪಾಕಿಸ್ತಾನದಲ್ಲಿ!! ಶತ್ರು ದೇಶದ ಕ್ಷೇಮಕ್ಕಾಗಿ ಕಾಂಗ್ರೆಸ್ ಮಿಡಿಯುತ್ತಿದೆ!! ಎಂದು ಕಟುವಾಗಿ ಟೀಕಿಸಿದ್ದಾರೆ.



**ಬಂದ್ ತೊಂದರೆ ಮಾಡಿದರೆ ಕ್ರಮ**

ಚುನಾವಣೆ ಆಯೋಗಕ್ಕೆ ನಕಲಿ ಜಾತಿ ಪ್ರಮಾಣ ಪತ್ರ ಕೊಟ್ಟು ಜನತೆಗೆ ಟೋಪಿ ಹಾಕಿ ಚುನಾವಣೆ ಗೆದ್ದಿದ್ದ ಈ ಕಿಡಿಗೇಡಿ ಕಾಂಗ್ರೆಸ್ ಶಾಸಕ, ತನ್ನೊಳಗಿದ್ದ ವಿಷವನ್ನೇ ಕಕ್ಕಿಕೊಂಡಿದ್ದಾರೆ. ಅಂಥ ವಿಷಕಾರಿ DNA ಉಳ್ಳ ಕಾಂಗ್ರೆಸ್ ಪಕ್ಷಕ್ಕೆ ರಾಷ್ಟ್ರಪ್ರೇಮವಿರಲು ಸಾಧ್ಯವೇ..? ಆಪರೇಷನ್ ಸಿಂಧೂರ್ ನಂತರ ಸೀನಿಯರ್ ಖರ್ಗೆ, ಜ್ಯೂನಿಯರ್ ಖರ್ಗೆ, ರಾಹುಲ್ ಗಾಂಧಿ ಸೇರಿ ಕರ್ನಾಟಕದ ಸೋ ಕಾಲ್ಡ್ ಕಾಂಗ್ರೆಸ್ ನಾಯಕರ ಆಣಿಮುತ್ತುಗಳನ್ನು ಗಮನಿಸಿದರೆ ಅವರ ಪ್ರೇಮ ಯಾವ ರಾಷ್ಟ್ರದ ಮೇಲೆ ಎಂದು ತಿಳಿಯುತ್ತದೆ! ಎಂದು ಕಾಂಗ್ರೆಸ್ ಪಕ್ಷಕ್ಕೆ ಸಚಿವರು ತಿರುಗೇಟು ನೀಡಿದ್ದಾರೆ.

ಕೋಲಾರದ ಶಾಸಕ ಕೊತ್ತೂರು ಮಂಜುನಾಥ್ ಹೇಳಿಕೆ ಕಾಂಗ್ರೆಸ್ ಪಕ್ಷದ ಅಂತರಾತ್ಮದ ದನಿ. ಆಚಾರವಿಲ್ಲದ ನಾಲಿಗೆ.. ಆಪರೇಷನ್ ಸಿಂಧೂರ್ ಬೂಟಾಟಿಕೆಯಂತೆ! ಇಡೀ ರಾಷ್ಟ್ರದ ಹೆಮ್ಮೆಯಾಗಿರುವ ಈ ಯಶಸ್ವಿ ಕಾರ್ಯಾಚರಣೆ ವಿರಾಟ್ ಸ್ವರೂಪವನ್ನು ಖುದ್ದು ನೋಡಬೇಕೆ ಮಂಜುನಾಥ್..? ಹಾಗಿದ್ದರೆ ಬನ್ನಿ, ನಿಮ್ಮನ್ನು ಪಾಕಿಸ್ತಾನಕ್ಕೆ ಕಳಿಸಿ ಕೊಡುತ್ತೇವೆ. ಭಾರತೀಯ ಸೇನೆಯ ಪರಾಕ್ರಮವನ್ನು ಖುದ್ದು ನೋಡಿಕೊಂಡು ಬರುವಿರಂತೆ. ಹೋಗುವಿರಾ ಪಾಕಿಸ್ತಾನಕ್ಕೆ..?



ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಸವಾಲು ಹಾಕಿದ್ದಾರೆ.

ಹಾಗೆಯೇ, ಪ್ರಧಾನಿ ನರೇಂದ್ರ ಮೋದಿ ಅವರು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ವಿದೇಶಾಂಗ ಮಂತ್ರಿ ಎಸ್. ಜೈಶಂಕರ್ ಅವರ ಹೇಳಿಕೆಗಳನ್ನೂ ದೇಶ ಗಮನಿಸಿದೆ. ರಾಷ್ಟ್ರದ ಬಗ್ಗೆ ಅವರಿಗಿರುವ ಬದ್ಧತೆ, ಅಚಲತೆಯನ್ನು ನೋಡಿದೆ, ಕೊಂಡಾಡಿದೆ. ರಾಷ್ಟ್ರದ್ರೋಹ ಮತ್ತು ರಾಷ್ಟ್ರಪ್ರೇಮಕ್ಕೆ ಇರುವ ವ್ಯತ್ಯಾಸವಿದು ಎಂದು ಸಚಿವರು ಕಾಂಗ್ರೆಸ್ ಪಕ್ಷವನ್ನು ಕುಟುಕಿದ್ದಾರೆ.

ರಾಷ್ಟ್ರನಿಂದನೆ, ಸೇನೆಯ ನಿಂದನೆ ಕಾಂಗ್ರೆಸ್ ಪಕ್ಷಕ್ಕೆ ಹೊಸದಲ್ಲ. ಅದು ಕಾಂಗ್ರೆಸ್ ಪಕ್ಷಕ್ಕೆ ಜನ್ಮತಃ ಅಂಟಿರುವ ಜಾಡ್ಯ. ಪಾಕಿಸ್ತಾನ್ ನ್ಯಾಷನಲ್ ಕಾಂಗ್ರೆಸ್ ಪಾರ್ಟಿಯಾಗಿ ರೂಪಾಂತರಗೊಂಡಿರುವ ಆ ಪಕ್ಷದ ಅಸಲಿ ಅಜೆಂಡಾ ಏನು? ಹಿಡೆನ್ ಏನೆಲ್ಲಾ ಮಾಡುತ್ತಿದೆ..!? ಇದು ನನ್ನ ಮೂಲಭೂತ ಪ್ರಶ್ನೆ ಎಂದು ಸಚಿವರು ಹೇಳಿದ್ದಾರೆ.


**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,513/Gram24ct ₹8,720/Gram22ct ಬೆಳ್ಳಿ: ₹97.00/Gram

## ಒಳಮೀಸಲಾತಿ: ಸಮೀಕ್ಷಾ ಅವಧಿ ವಿಸ್ತರಣೆ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಯಡಿ ಒಳ ಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ದತ್ತಾಂಶ ಸಂಗ್ರಹಕ್ಕೆ ನಿಗದಿಪಡಿಸಲಾದ ಕಾಲಮಿತಿಯನ್ನು ವಿಸ್ತರಣೆಯಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಒಳ ಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಏಕಸದಸ್ಯ ವಿಚಾರಣಾ ಆಯೋಗದ ಶಿಫಾರಸಿನ ಅನುಸಾರ ಸಮೀಕ್ಷೆ ಮಾಡಲಾಗುತ್ತಿದೆ. ಇದೇ 5ರಿಂದ ಪ್ರಾರಂಭವಾದ ಈ ಸಮೀಕ್ಷೆ, 17ಕ್ಕೆ ಕೊನೆಗೊಳ್ಳಲಿದೆ. ಈ ನಡುವಲ್ಲೇ ಸಮೀಕ್ಷೆಗೆ ಸಂಬಂಧಿಸಿದಂತೆ ಸಾಕಷ್ಟು ದೂರುಗಳು ಬರುತ್ತಿದ್ದು, ಈ ಹಿನ್ನಲೆಯಲ್ಲಿ ಸಮೀಕ್ಷೆಯ ಅವಧಿ ವಿಸ್ತರಣೆಯಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರು ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್, ಆಯುಕ್ತ ಡಾ. ರಾಕೇಶ್ ಕುಮಾರ್ ಕೆ ಸೇರಿದಂತೆ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿದರು. ಮಾತುಕತೆ ವೇಳೆ ಸಮಿತಿಯು ಸಮುದಾಯಗಳ ಪ್ರಶ್ನೆಗಳನ್ನು ಪರಿಹರಿಸಲು ಸಮಯವನ್ನು ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ತಿಳಿದುಬಂದಿದೆ. ಗಣತಿದಾರರು ಜನರಿಗೆ 46 ಪ್ರಶ್ನೆಗಳನ್ನು ಕೇಳದೆ ಜನಗಣತಿಯನ್ನು ನಡೆಸುತ್ತಿದ್ದಾರೆಂಬ ಮಾತುಗಳು ಕೇಳಿ ಬರುತ್ತಿವೆ. ಇದರಂತೆ ಆಹಾರ , ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರು ಸಮಿತಿಗೆ ಪತ್ರ ಬರೆದಿದ್ದು, ಪರಿಶಿಷ್ಟ ಜಾತಿ ಅಲ್ಲದವರು ತಾವು ಪರಿಶಿಷ್ಟ ಜಾತಿ ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿಕೊಳ್ಳುತ್ತಿದ್ದಾರೆಂದು ದೂರಿದ್ದಾರೆ.

## ಮಹಾಭಾರತ ಪ್ರವಚನ ಮಾಲಿಕೆ ವನಪರ್ವ



• ಉದಯವಾಹಿನಿ, ಬೆಂಗಳೂರು

ಕತ್ರಿಗುಪ್ಪೆ ಮುಖ್ಯರಸ್ತೆಯಲ್ಲಿರುವ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಮೇ 19 ರಿಂದ 24ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ರಾಷ್ಟ್ರಪ್ರಶಸ್ತಿ ಪುರಸ್ಕೃತ ಡಾ|| ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಮಹಾಭಾರತ ಪ್ರವಚನ ಮಾಲಿಕೆಯಲ್ಲಿ ವನಪರ್ವ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

## ಪರಪ್ಪನ ಅಗ್ರಹಾರದಲ್ಲಿ ಕೈದಿಗಳ ನಡುವೆ ಮಾರಾಮಾರಿ : ಓರ್ವನಿಗೆ ಗಂಭೀರ ಗಾಯ



• ಉದಯವಾಹಿನಿ, ಬೆಂಗಳೂರು

ಕೈದಿಗಳ ನಡುವೆ ಮಾರಾಮಾರಿ ನಡೆದಿರುವಂತಹ ಘಟನೆ ಬೆಂಗಳೂರಿನ ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿ ನಡೆದಿದೆ. ಆನಂದ್ ಹಾಗೂ ಹುಸೇನ್ ಇಬ್ಬರು ಗಾಯಗೊಂಡಿರುವ ಕೈದಿಗಳಾಗಿದ್ದು, ಸೂರ್ಯಪ್ರಕಾಶ್ (24) ಹಲ್ಲೆ ಮಾಡಿರುವ ವಿಚಾರಣಾದೀನ ಕೈದಿ ಆಗಿದ್ದಾನೆ. ಈ ಘಟನೆ, ನಡೆದಿದೆ. ಮಧ್ಯಾಹ್ನ ಊಟದ ವೇಳೆ ಸೂರ್ಯ ಪ್ರಕಾಶ್, ಆನಂದ ನಡುವೆ ಸಣ್ಣ ಕಾರಣಕ್ಕೆ ಜಗಳ ಶುರುವಾಗಿದೆ. ಆ ಸಮಯದಲ್ಲಿ ಸೂರ್ಯಪ್ರಕಾಶ್ ಸಮೀಪದ ಬಾತ್ರೂಮ್‌ನಲ್ಲಿ ಅಳವಡಿಸಿದ್ದ ಟೈಲ್ಸ್ ತೆಗೆದುಕೊಂಡು ಆನಂದ್ ಮೇಲೆ ಹಲ್ಲೆ ಮಾಡಿದ್ದಾನೆ. ಇದೇ ಸಮಯದಲ್ಲಿ ಹೊಡೆದಾಟ ಬಿಡಿಸಲು ಬಂದಿದ್ದ ಮತ್ತೊಬ್ಬ ಕೈದಿ ಹುಸೇನ್ ಎಂಬಾತನ ಮೇಲೆ ಕೂಡ ಟೈಲ್ಸ್‌ನಿಂದ ಹಲ್ಲೆ ಮಾಡಿದ್ದು, ಸದ್ಯ ಆನಂದ್‌ಗೆ ಗಂಭೀರ ಗಾಯಗಳಾಗಿವೆ. ಹುಸೇನ್‌ನನ್ನು ಜೈಲಿನ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದು, ಆನಂದ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಸದ್ಯ ಘಟನೆ ಸಂಬಂಧ ಜೈಲಿನ ಉಪ ಅಧೀಕ್ಷಕ ಇಮಾಮ್ ಸಾಬ್ ಮ್ಯಾಗೇರಿ ನೀಡಿರುವ ದೂರಿನ ಅನ್ವಯ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಸೂರ್ಯಪ್ರಕಾಶ್‌ನನ್ನು ವಶಕ್ಕೆ ಪಡೆದು ತನಿಖೆ ಮಾಡುವ ಸಾಧ್ಯತೆ ಇದೆ.

## ಸೆಲೆಬಿ ಏವಿಯೇಷನ್ ಏರ್‌ಪೋರ್ಟ್ ಸೇವೆ ಸ್ಥಗಿತ

• ಉದಯವಾಹಿನಿ, ಬೆಂಗಳೂರು

ಉಗ್ರರ ಪೋಷಕ ಪಾಕಿಸ್ತಾನಕ್ಕೆ ಬೆಂಬಲ ಘೋಷಿಸಿದ ಟರ್ಕಿಗೆ ಶಾಕ್ ಮೇಲೆ ಶಾಕ್ ಎದುರಾಗಿದೆ. ಭಾರತದಾದ್ಯಂತ ಟರ್ಕಿ ಮೇಲೆ ಹಲವು ನಿರ್ಬಂಧಗಳನ್ನು ವಿಧಿಸಲಾಗಿದ್ದು, ಈಗ ಆ ಸಾಲಿಗೆ ಬೆಂಗಳೂರು ಕೂಡ ಸೇರಿಕೊಂಡಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟರ್ಕಿಯ ಸೆಲೆಬಿ ಏವಿಯೇಷನ್ ಏರ್‌ಪೋರ್ಟ್ ಸೇವೆಗಳನ್ನು, ತಡರಾತ್ರಿಯಿಂದಲೇ ಸ್ಥಗಿತಗೊಳಿಸಲಾಗಿದೆ. ಕೇಂದ್ರ ಸರ್ಕಾರದ ಆದೇಶದ ಬೆನ್ನಲ್ಲೇ ಬೆಂಗಳೂರು ವಿಮಾನ ನಿಲ್ದಾಣದಲ್ಲಿಯೂ ಕ್ರಮ ಕೈಗೊಳ್ಳಲಾಗಿದೆ. ಟರ್ಕಿಯ ಕಂಪನಿಗೆ ಬೆಂಗಳೂರಿ ನಲ್ಲಿಯೂ ಭಾರಿ ಹೊಡೆತ ಬಿದ್ದಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರತಿನಿತ್ಯ 15 ಅಂತಾರಾಷ್ಟ್ರೀಯ ವಿಮಾನಗಳು ಮತ್ತು ಕಾರ್ಗೋ ವಿಮಾನಗಳನ್ನು ಸೆಲೆಬಿ ಏವಿಯೇಷನ್ ನಿರ್ವಹಣೆ ಮಾಡುತ್ತಿತ್ತು. ಅವುಗಳನ್ನು ರಾತ್ರಿಯಿಂದಲೇ ಬೇರೆ ಏರ್ ಸರ್ವೀಸಸ್ ಕಂಪನಿಗಳ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ ಅಂತಾ ಪ್ರಕಟಣೆಯಲ್ಲಿ ತಿಳಿಸಿದೆ.

# ಏಳು ಸರ್ಕಾರಿ ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ

### 21 ಲಕ್ಷ ರೂ. ಮೌಲ್ಯದ ಆಭರಣಗಳು, 54 ಲಕ್ಷ ರೂ. ಮೌಲ್ಯದ ಗೃಹೋಪಯೋಗಿ ವಸ್ತುಗಳು ಸೇರಿವೆ ಎಂದು ಆರೋಪ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

**ಅಕ್ರಮ ಆಸ್ತಿ ಗಳಿಕೆ ಪ್ರಕರಣ**

ಆದಾಯಕ್ಕಿಂತ ಅಧಿಕ ಆಸ್ತಿಗಳಿಕೆ ಹಾಗೂ ಭ್ರಷ್ಟಾಚಾರ ಆರೋಪ ಸಂಬಂಧ ಲೋಕಾಯುಕ್ತ ಪೊಲೀಸರು ಗುರುವಾರ ಬೆಳಿಗ್ಗೆ ಏಳು ಸರ್ಕಾರಿ ಅಧಿಕಾರಿಗಳಿಗೆ ಸೇರಿದ 35 ಸ್ಥಳಗಳಲ್ಲಿ ದಾಳಿ ನಡೆಸಿದ್ದು, 22.78 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಪತ್ತೆ ಹಚ್ಚಿದ್ದಾರೆ. ಇದರಲ್ಲಿ 16.48 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ 2.44 ಕೋಟಿ ರೂ. ಮೌಲ್ಯದ ಆಭರಣಗಳು ಸೇರಿವೆ. ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ಪೊಲೀಸರು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಗಳೂರು, ವಿಜಯಪುರ ಯಾದಗಿರಿಯಲ್ಲಿರುವ ಆರೋಪಿ ಅಧಿಕಾರಿಗಳು ಮತ್ತು ಅವರ ಸಂಬಂಧಿಕರ ಕಚೇರಿಗಳು ಮತ್ತು ನಿವಾಸಗಳ ಮೇಲೆ ದಾಳಿ ನಡೆಸಿದ್ದಾರೆ.

ಬೆಂಗಳೂರು ನಗರದಲ್ಲಿ, ನಗರ ಮಾರುಕಟ್ಟೆ-1 ಉಪ ವಿಭಾಗದ ಕಾನೂನು ಮಾಪನಶಾಸ್ತ್ರ ನಿರೀಕ್ಷಕ ಎಚ್‌ಆರ್ ನಟರಾಜ್, ಎರಡು ನಿವೇಶನಗಳು, ಎರಡು ಮನೆಗಳು, 9 ಎಕರೆ ಕೃಷಿ ಭೂಮಿ, 3.13 ಕೋಟಿ ರೂ.ಗಳ ಸ್ಥಿರಾಸ್ತಿ ಸೇರಿದಂತೆ 3.94 ಕೋಟಿ ರೂ. ಅಕ್ರಮ ಆಸ್ತಿಯನ್ನು ಸಂಪಾದಿಸಿದ್ದಾರೆ.

ಇದರಲ್ಲಿ 21 ಲಕ್ಷ ರೂ. ಮೌಲ್ಯದ ಆಭರಣಗಳು ಮತ್ತು 54 ಲಕ್ಷ ರೂ. ಮೌಲ್ಯದ ಗೃಹೋಪಯೋಗಿ ವಸ್ತುಗಳು ಸೇರಿವೆ ಎಂದು ಆರೋಪಿಸಲಾಗಿದೆ.

ಬೆಂಗಳೂರು ನಗರದಲ್ಲಿ ನಡೆದ ಮತ್ತೊಂದು ದಾಳಿ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪಟ್ಟಣ ಯೋಜನಾ ಹೆಚ್ಚುವರಿ ನಿರ್ದೇಶಕ ಮುರಳಿ ಟಿವಿ, ಮೂರು ನಿವೇಶನಗಳು, ಮೂರು ಮನೆಗಳು ಸೇರಿದಂತೆ 30.54 ಲಕ್ಷ ರೂ.ಗಳ ಚರಾಸ್ತಿ ಮತ್ತು 3.16 ಕೋಟಿ ರೂ.ಗಳ ಸ್ಥಿರಾಸ್ತಿ ಸೇರಿದಂತೆ 3.47 ಕೋಟಿ ರೂ. ಮೌಲ್ಯದ ಅಕ್ರಮ ಆಸ್ತಿಯನ್ನು ಹೊಂದಿರುವುದು ಬೆಳಕಿಗೆ ಬಂದಿದೆ. ಈ ಪೈಕಿ 25.54 ಲಕ್ಷ ರೂ. ಮೌಲ್ಯದ ಆಭರಣಗಳು ಸೇರಿವೆ.

> **ಈಮಧ್ಯೆ, ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ತಹಶೀಲ್ದಾರ್ ಉಮಾಕಾಂತ್ ಹಳ್ಳೆ ಅವರ ಬಳಿ 1.98 ಕೋಟಿ ರೂಪಾಯಿ ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾಗಿದ್ದು, ಇದರಲ್ಲಿ ಎರಡು ನಿವೇಶನಗಳು, ಎರಡು ಮನೆಗಳು ಮತ್ತು 1.07 ಕೋಟಿ ರೂಪಾಯಿಗಳ ಚರಾಸ್ತಿ ಸೇರಿವೆ. ಅಲ್ಲದೆ, ಬ್ಯಾಂಕ್ ಖಾತೆಗಳಲ್ಲಿ 27.58 ಲಕ್ಷ ರೂ. ಬ್ಯಾಲೆನ್ಸ್ ಮತ್ತು ಒಂದು ಬ್ಯಾಂಕ್ ಲಾಕರ್ ಸೇರಿವೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.**

ಬೆಂಗಳೂರು ಗ್ರಾಮಾಂತರದ ಹೊಸಕೋಟೆ ತಾಲ್ಲೂಕು ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಅನಂತ ಕುಮಾರ್ ಅವರ ಬಳಿ 1.96 ಕೋಟಿ ರೂ. ಗಳ ಅಕ್ರಮ ಆಸ್ತಿ ಪತ್ತೆಯಾಗಿದೆ ಎಂದು ಆರೋಪಿಸಲಾಗಿದೆ. ಇದರಲ್ಲಿ ಒಂದು ಮನೆ, 5 ಎಕರೆ ಕೃಷಿ ಭೂಮಿ, 44.84 ಲಕ್ಷ ರೂ.ಗಳ ಚರಾಸ್ತಿ ಮತ್ತು 1.51 ಕೋಟಿ ರೂಪಾಯಿಗಳ ಸ್ಥಿರಾಸ್ತಿ ಸೇರಿದೆ. ತುಮಕೂರಿನ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ರಾಜಶೇಖರ ಡಿ. ಅವರ ಬಳಿ 5.74 ಕೋಟಿ ರೂಪಾಯಿಗಳ ಅಕ್ರಮ ಸಂಪಾದನೆ ಪತ್ತೆಯಾಗಿದೆ. ಇದರಲ್ಲಿ 12 ನಿವೇಶನಗಳು, ನಾಲ್ಕು ಮನೆಗಳು, 4 ಎಕರೆ ಕೃಷಿ ಭೂಮಿ, 1.84 ಕೋಟಿ ರೂಪಾಯಿ ಮೌಲ್ಯದ ಚ ರಾಸ್ತಿ, 11.66 ಲಕ್ಷ ರೂಪಾಯಿ ನಗದು ಮತ್ತು 89.06 ಲಕ್ಷ ರೂಪಾಯಿ ಮೌಲ್ಯದ ಆಭರಣ ಪತ್ತೆಯಾಗಿವೆ. ಮಂಗಳೂರಿನ ನಗರ ಪ್ರಾಪರ್ಟಿ ಮಾಲೀಕತ್ವ ರೆಕಾರ್ಡ್ ಕಚೇರಿಯ ಸರ್ವೇ ಮೇಲ್ವಿಚಾರಕ ಮಂಜುನಾಥ್ ಎಂಆರ್, ಒಂಬತ್ತು ನಿವೇಶನಗಳು, ಎರಡು ಮನೆಗಳು ಸೇರಿ ದಂತೆ 2.31 ಕೋಟಿ ರೂ.ಗಳ ಸ್ಥಿರಾಸ್ತಿ ಮತ್ತು 25.73 ಕೋಟಿ ರೂ.ಗಳ ಚರಾಸ್ತಿ ಸೇರಿದಂತೆ 2.56 ಕೋಟಿ ರೂ.ಗಳ ಅಕ್ರಮ ಆಸ್ತಿಯನ್ನು ಸಂಪಾದಿಸಿರುವುದು ದಾಳಿಯಲ್ಲಿ ಪತ್ತೆಯಾಗಿದೆ. ವಿಜಯಪುರದ ಡಾ. ಬಿಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಆಗಿನ ಜಿಲ್ಲಾ ವ್ಯವಸ್ಥಾಪಕಿ ರೇಣುಕಾ ಸಾತರ್ಲೆ ಬಳಿ ಮೂರು ನಿವೇಶನಗಳು, 2 ಮನೆಗಳು 1.55 ಕೋಟಿ ರೂ.ಗಳ ಸ್ಥಿರಾಸ್ತಿ ಸೇರಿದಂತೆ 10 ಲಕ್ಷ ನಗದು, 58.80 ಲಕ್ಷ ಮೌಲ್ಯದ ಆಭರಣಗಳು, 24 ಲಕ್ಷ ಸ್ಥಿರ ಠೇವಣಿ ಸೇರಿದಂತೆ 1.55 ಕೋಟಿ ರೂ.ಗಳ ಸ್ಥಿರಾಸ್ತಿ ಒಳಗೊಂಡಂತೆ 3.10 ಕೋಟಿ ರೂ.ಗಳ ಅಕ್ರಮ ಆಸ್ತಿ ಸಂಪಾದಿಸಿದ್ದಾರೆ ಎಂದು ಆರೋಪಿಸಲಾಗಿದೆ.

## ಅನಧಿಕೃತ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ನಗರದ ಪೂರ್ವ ವಲಯ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಳವಡಿಸಲಾಗಿರುವ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಿ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರು ಸೂಚನೆ ನೀಡಿದ್ದಾರೆ.

ಗುಟ್ಟಹಳ್ಳಿ ಮೇಲ್ಸೇತುವೆ ಸುತ್ತಮುತ್ತ ಗುರುವಾರ ಪರಿಶೀಲನೆ ನಡೆಸುವಾಗ ಪಾದಚಾರಿ ಮಾರ್ಗದಲ್ಲಿ ಅನಧಿಕೃತ ಒಎಫ್‌ಸಿಗಳು ನೇತಾಡುತ್ತಿರುವುದನ್ನು ಕಂಡು ಅವರು ಈ ಸೂಚನೆ ನೀಡಿದರು. ಟೆಂಡರ್ ಶ್ಯೂರ್, ವೈಟ್ ಟಾಪಿಂಗ್ ಮಾಡಿರುವ ರಸ್ತೆಗಳಲ್ಲಿ ಕೇಬಲ್‌ಗಳನ್ನು ನೆಲದಡಿ ಅಳವಡಿಸಲು ಡಕ್ಟ್‌ಗಳ ವ್ಯವಸ್ಥೆ ಮಾಡಲಾಗಿದೆ. ಆದರೂ ಕೆಲ ಸಂಸ್ಥೆಗಳು ರಸ್ತೆ ಬದಿ, ಪಾದಚಾರಿ ಮಾರ್ಗ, ವಿದ್ಯುತ್ ಕಂಬಗಳು ಹಾಗೂ ಮರಗಳಲ್ಲಿ ನೇತಾಡುವ ರೀತಿಯಲ್ಲಿದ್ದು, ಅದರಿಂದ ನಾಗರಿಕರಿಗೆ ಸಮಸ್ಯೆಯಾಗಲಿದೆ. ಪಾಲಿಕೆ ಒಡೆತನದ ಖಾಲಿ ಜಾಗಗಳನ್ನು ಬಳಕೆ ಮಾಡದೇ ಇರುವಲ್ಲಿ ಸ್ವಚ್ಛತೆ ಇಲ್ಲದಂತಾಗಿದೆ. ಅಂತಹ ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರ ಬಳಕೆಗೆ ಅನುವು ಮಾಡಿಕೊಡಬೇಕು. ನಗರದಲ್ಲಿ ಬೀದಿ ಬದಿ ವ್ಯಾಪಾರಿಗಳಿಗಾಗಿ ವ್ಯಾಪಾರ ವಲಯಗಳನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಪಾಲಿಕೆ ಒಡೆತನದ ವಿಶಾಲ ಜಾಗಗಳನ್ನು ಗುರುತಿಸಬೇಕು ಸೂಚಿಸಿದರು.

ಇದೇ ವೇಳೆ ರಸ್ತೆಬದಿಯ ಟ್ರಾನ್ಸ್‌ಫಾರ್ಮರ್‌ಗಳ ಸುತ್ತಲಿನ ಸ್ಥಳಗಳ ಕಳಪೆ ಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಅವುಗಳ ಸುತ್ತಲೂ ಬೇಲಿ ಹಾಕಬೇಕು, ಬೆಸ್ಕಾಂ ಅವುಗಳನ್ನು ನಿರ್ವಹಿಸಬೇಕು ಎಂದು ನಿರ್ದೇಶಿಸಿದರು. ನಂತರ ಮಿಲ್ಲರ್ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿದರು. ಇಡ್ಲಿ ಹಾಗೂ ಪುಲಾವ್ ಸೇವಿಸಿ ಆಹಾರದ ಗುಣಮಟ್ಟವನ್ನು ಪರಿಶೀಲಿಸಿದರು. ಈ ವೇಳೆ ರುಚಿ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ ಅವರು, ಆಹಾರದ ಗುಣಮಟ್ಟ ಮತ್ತು ನೈರ್ಮಲ್ಯ ಮಾನದಂಡಗಳನ್ನು ಕಾಪಾಡಿಕೊಳ್ಳುವಂತೆ ಸಿಬ್ಬಂದಿಗೆ ಸೂಚನೆ ನೀಡಿದರು.

> **ಅರಮನೆ ರಸ್ತೆ, ವಸಂತನಗರದ 12ನೇ ಮುಖ್ಯರಸ್ತೆ ಹಾಗೂ ಕಂಟೋನ್ಮೆಂಟ್ ರೈಲ್ವೆ ಹಳಿ ಬಳಿ ಪಾದಚಾರಿ ಮಾರ್ಗ ನಿರ್ಮಿಸಬೇಕು. ಚರಂಡಿಯಲ್ಲಿ ತುಂಬಿರುವ ಹೂಳು ತೆಗೆದು ಸ್ವಚ್ಛಗೊಳಿಸಬೇಕು ಎಂದು ತಿಳಿಸಿದರು. ಗೋಡೆ, ಬ್ಯಾರಿಕೇಡ್‌ಗಳಿಗೆ ಅಂಟಿಸಿರುವ ಭಿತ್ತಿಪತ್ರಗಳನ್ನು ತೆರವುಗೊಳಿಸಬೇಕು. ರಸ್ತೆ ಬದಿ ಖಾಸಗಿ ಸಂಸ್ಥೆ, ಶಾಲಾ-ಕಾಲೇಜುಗಳ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ, ಅಂತಹವರಿಗೆ ದಂಡ ವಿಧಿಸಬೇಕು ಎಂದು ಹೇಳಿದರು.**

## ಸಾಲ ವಾಪಸ್ ಕೇಳಿದ್ದಕ್ಕೆ ಕೊಲೆಗೆ ಯತ್ನ

• ಉದಯವಾಹಿನಿ, ಬೆಂಗಳೂರು




ಮಹಿಳೆಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹನುಮಂತನಗರದ ನಿವಾಸಿ. ಕ್ಯಾಬ್ ಚಾಲಕ ರಾಜು(46) ಬಂಧಿತ ಆರೋಪಿ.

ಏ.12ರಂದು ಮಹಿಳೆಗೆ ಚಾಕುವಿನಿಂದ ಇರಿದು ಆರೋಪಿ ಪರಾರಿ ಆಗಿದ್ದ. ಮಹಿಳೆ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಆರೋಪಿ ರಾಜು ಹಾಗೂ ದೂರು ದಾರೆ ಮಹಿಳೆ ಅಕ್ಕಪಕ್ಕದ ಮನೆಯ ನಿವಾಸಿಗಳು. ಇಬ್ಬರ ನಡುವೆ ತುಂಬಾ ಆತ್ಮೀಯತೆ ಇತ್ತು. ಹೀಗಾಗಿ, ಮಹಿಳೆ ರಾಜುಗೆ ರೂ.5 ಲಕ್ಷ ಸಾಲ ನೀಡಿದ್ದರು. ಏ.12ರಂದು ಇಬ್ಬರೂ ಕೆಂಗೇರಿಯ ಅಪಾರ್ಟ್‌ಮೆಂಟ್‌ಗೆ ಬಂದಿದ್ದರು. ಆಗ ಸಾಲ ವಾಪಸ್ ನೀಡುವಂತೆ ಮಹಿಳೆ, ಆರೋಪಿಯ ಬಳಿ ಕೇಳಿದ್ದರು. ಆಗ ಗಲಾಟೆ ನಡೆದು ಮಹಿಳೆಯನ್ನು ಇರಿದು ಕೊಲೆಗೆ ಯತ್ನಿಸಲಾಗಿತ್ತು.

ಗಂಭೀರವಾಗಿ ಗಾಯಗೊಂಡಿದ್ದ ಮಹಿಳೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದರು. ಚೇತರಿಸಿಕೊಂಡ ಬಳಿಕ ಆರೋಪಿ ವಿರುದ್ಧ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

## ಇ.ಡಿ ಮಾಜಿ ಅಧಿಕಾರಿ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು



ವಂಚನೆ ನಡೆಸಿದ ಆರೋಪ ದಡಿ ಜಾರಿ ನಿರ್ದೇಶನಾಲಯದ (ಇ.ಡಿ) ಮಾಜಿ ಸಹಾಯಕ ನಿರ್ದೇಶಕ ಸೇರಿ ನಾಲ್ವರ ವಿರುದ್ಧ ಇಲ್ಲಿನ ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೀಣ್ಯಾ ಕೈಗಾರಿಕಾ ಪ್ರದೇಶದ ವಾಫೆ ಎಂಜಿನಿಯರಿಂಗ್‌ನ ನಿರ್ದೇಶಕ ನಿರಂಜನ್ ಎಸ್. ಮಯೂರ್, ಅವರ ತಂದೆ. ಜಾರಿ ನಿರ್ದೇಶನಾಲಯದ ಮಾಜಿ ಸಹಾಯಕ ನಿರ್ದೇಶಕ ಸೋಮಶೇಖರ್, ಎಲ್‌ಎಲ್‌ಎನ್ ಸಿಎನ್ ಸಿಟಿ ಟೆಕ್ ನಿರ್ದೇಶಕ ಅಶೋಕ್, ವಾಫೆ ಎಂಜಿನಿಯರಿಂಗ್‌ನ ನಿರ್ದೇಶಕ ಎಂ.ಎ.ಕಾರ್ತಿಕ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಜಾಲಹಳ್ಳಿ ನಿವಾಸಿ ಸುಹಾಸ್ ಎಂಬುವರು ನೀಡಿದ ದೂರಿನ ಮೇರೆಗೆ ಪೀಣ್ಯ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಸಿನಿಮಾ ಸೋಮಶೇಖರ್ ಮತ್ತು ಅವರ ಪುತ್ರ ನಿರಂಜನ್ ಎಸ್. ಮಯೂರ್ ಅವರು ಕಂಪನಿಯ ಹಣ ಮತ್ತು ಆಸ್ತಿಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ.

ನಾನು ಸಂಸ್ಥೆಯ ಮಾರ್ಕೆಟಿಂಗ್ ನಿರ್ದೇಶಕನಾಗಿದ್ದರೂ ಸಂಸ್ಥೆಯ ನಿಯಂತ್ರಣವು ಸಂಪೂರ್ಣವಾಗಿ ಸೋಮಶೇಖರ್ ಬಳಿಯೇ ಇತ್ತು. ಸೋಮಶೇಖರ್ ಅವರು ಆಗ ಸರ್ಕಾರಿ ಹುದ್ದೆಯಲ್ಲಿದ್ದ ಕಾರಣಕ್ಕೆ ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಗದೆ ತಮ್ಮ ಪುತ್ರನ ಮೂಲಕ ಕೆಲಸ ಮಾಡಿಸುತ್ತಿದ್ದರು ಎಂದು ಸುಹಾಸ್ ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ. 2021ರ ಡಿಸೆಂಬರ್‌ನಿಂದ 2023ರ ಡಿಸೆಂಬರ್ ವರೆಗೆ ವಾಫೆ ಎಂಜಿನಿಯರಿಂಗ್ ಸಂಸ್ಥೆಯಿಂದ ಅಶೋಕ ಅವರ ಎಲ್‌ಎಲ್‌ಎನ್ ಸಿಎನ್‌ಸಿಟಿ ಟೆಕ್‌ಗೆ ಯಂತ್ರಗಳ ಖರೀದಿ, ಏರೋಸ್ಪೇಸ್ ಉತ್ಪಾದನೆಗಾಗಿ 2.15 ಕೋಟಿ ವರ್ಗಾವಣೆ ಮಾಡಿದೆ. ಆದರೆ, ಖರೀದಿಗೆ ಆದೇಶ ಸಲ್ಲಿಸಲಾದ ಉಪಕರಣಗಳು ಮಾತ್ರ ಕಂಪನಿಗೆ ತಲುಪಿಲ್ಲ. ಬದಲಿಗೆ. ಆ ಹಣವನ್ನು ಸಂಸ್ಥೆ ಹೆಸರಿನಲ್ಲಿ ದುರುಪಯೋಗ ಪಡಿಸಿಕೊಳ್ಳಲಾಗಿದೆ.

ಅದನ್ನು ಪ್ರಶ್ನಿಸಿದಾಗ ನನಗೆ ಬೆದರಿಕೆ ಹಾಕಿ ಹಲವಾರು ಚೆಕ್‌ಗಳಿಗೆ ಸಹಿ ಮಾಡಿಸಿಕೊಂಡಿದ್ದಾರೆ’ ಎಂದು ಸುಹಾಸ್ ದೂರಿದ್ದಾರೆ. ಬೇನಾಮಿ ಹೆಸರಿನಲ್ಲಿ ಕಂಪನಿ ಸ್ಥಾಪಿಸಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ. ವಾಫೆ ಎಂಜಿನಿಯರಿಂಗ್ ಸಂಸ್ಥೆಗೆ ರೂ.80 ಲಕ್ಷ ನಷ್ಟವಾಗಿದೆ. ಆದ್ದರಿಂದ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸುಹಾಸ್ ದೂರಿನಲ್ಲಿ ಕೋರಿದ್ದಾರೆ. ಸೋಮಶೇಖರ್ ಅವರು ಇ.ಡಿಯ ಮಾಜಿ ಸಹಾಯಕ ನಿರ್ದೇಶಕರೇ ಎಂಬುದರ ಬಗ್ಗೆಯೂ ತನಿಖೆ ನಡೆಯುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಸ್ವಯಂಪ್ರೇರಿತವಾಗಿ ಸ್ಥಳಾಂತರ ಕಾರ್ಯಕ್ರಮವನ್ನು ಆಯ್ಕೆ

• ಉದಯವಾಹಿನಿ, ಬೆಂಗಳೂರು



ಬೆಳಗಾವಿಯ ಭೀಮಗಡ ವನ್ಯಜೀವಿ ಅಭಯಾರಣ್ಯದ ತಲೇವಾಡಿಯ ಬುಡ ಕಟ್ಟು ಜನಾಂಗದವರು ಕಾಡಿನಿಂದ ಹೊರಬರಲು ಒಪ್ಪಿಕೊಂಡಿದ್ದಾರೆ, ಸ್ವಯಂಪ್ರೇರಿತವಾಗಿ ಸ್ಥಳಾಂತರ ಕಾರ್ಯಕ್ರಮವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಅರಣ್ಯ, ಪರಿಸರ ಮತ್ತು ಪರಿಸರ ಸಚಿವ ಈಶ್ವರ್ ಬಿ ಖಂಡ್ರೆ ಹೇಳಿದ್ದಾರೆ. ಸ್ಥಳಾಂತರ ಕಾರ್ಯಕ್ರಮದ ಮೊದಲ ಹಂತದಲ್ಲಿ ಮೇ 17 ರಂದು 27 ಕುಟುಂಬಗಳಿಗೆ ತಲಾ 10 ಲಕ್ಷ ರೂ.ಗಳನ್ನು ನೀಡಲಾಗುವುದು, ಕುಟುಂಬಗಳು ಅರಣ್ಯದಿಂದ ಹೊರಬಂದ ನಂತರ, ಸಂಪೂರ್ಣ ಪರಿಶೀಲನೆಯ ನಂತರ ಹೆಚ್ಚುವರಿಯಾಗಿ 5 ಲಕ್ಷ ರೂ.ಗಳನ್ನು ನೀಡಲಾಗುತ್ತದೆ ಎಂದು ವಿವರ ನೀಡಿದರು.

ಬುಡಕಟ್ಟು ಜನಾಂಗದ ಸ್ವಯಂಪ್ರೇರಿತ ಸ್ಥಳಾಂತರ ಕಾರ್ಯಕ್ರಮದಡಿಯಲ್ಲಿ, ರಾಜ್ಯ ಅರಣ್ಯ ಇಲಾಖೆಯು ಬುಡಕಟ್ಟು ಜನಾಂಗದವರಿಗೆ ಎರಡು ಪ್ಯಾಕೇಜ್‌ಗಳನ್ನು ನೀಡುತ್ತದೆ. ಸಂಪೂರ್ಣ ಸಮೀಕ್ಷೆ , ಗ್ರಾಮ ಸಭೆಯ ನಂತರ ಸ್ಥಳಾಂತರ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. ಸ್ಥಳಾಂತರಕ್ಕೆ ಅವರ ಒಪ್ಪಿಗೆಯು ಸಂರಕ್ಷಣೆಯ ಕಡೆಗೆ ಮಾತ್ರವಲ್ಲದೆ, ರಸ್ತೆ, ನೀರು, ವಿದ್ಯುತ್, ವೈದ್ಯಕೀಯ ಆರೈಕೆ ಸೇರಿದಂತೆ ಕಾಡಿನ ಹೊರಗೆ ಉತ್ತಮ ಸೌಲಭ್ಯಗಳನ್ನು ಪಡೆಯುವುದರಿಂದ ಜನರಿಗೆ ಸಹ ಸಕಾರಾತ್ಮಕ ಹೆಜ್ಜೆಯಾಗಿದೆ ಎಂದು ಅವರು ಹೇಳಿದರು. ಕಾಡಿನ ಇತರ ಭಾಗಗಳಲ್ಲಿ ಇನ್ನೂ ಅನೇಕ ಕುಟುಂಬಗಳಿದ್ದು, ಅವುಗಳನ್ನು ಶೀಘ್ರದಲ್ಲೇ ಸ್ಥಳಾಂತರಿಸಲಾಗುವುದು ಎಂದು ಅವರು ಹೇಳಿದರು. ಭೀಮಗಡದ ಕೃಷ್ಣಾಪುರ, ಗವಾಡಿ ಮತ್ತು ಮಂಡೇಪುರ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳು ಸಹ ಸ್ಥಳಾಂತರಗೊಳ್ಳಬೇಕಾಗಿದೆ ಮತ್ತು ಈ ಕುರಿತು ಕೆಲಸ ಮಾಡಲಾಗುತ್ತಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

> **ಮೊದಲ ಆಯ್ಕೆಯಲ್ಲಿ, ಪ್ರತಿ ಕುಟುಂಬಕ್ಕೆ 15 ಲಕ್ಷ ರೂ. ನಗದು ಪರಿಹಾರವನ್ನು ನೀಡಲಾಗುತ್ತದೆ ಅವರು ವಯಸ್ಕ ಮಕ್ಕಳನ್ನು ಹೊಂದಿದ್ದರೆ, ಪ್ರತಿ ಮಗುವನ್ನು ಒಬ್ಬ ವ್ಯಕ್ತಿಯೆಂದು ಪರಿಗಣಿಸಲಾಗುತ್ತದೆ ಮತ್ತು ಅವರಿಗೆ ಹೆಚ್ಚುವರಿಯಾಗಿ 15 ಲಕ್ಷ ರೂ.ಗಳನ್ನು ನೀಡಲಾಗುತ್ತದೆ. ಎರಡನೇ ಆಯ್ಕೆಯಲ್ಲಿ, ಮನೆ ಉದ್ಯೋಗದೊಂದಿಗೆ ನಗದು ಪರಿಹಾರವನ್ನು ನೀಡಲಾಗುತ್ತದೆ ಎಂದರು. ಕಳೆದ ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದ ಸಮಯದಲ್ಲಿ ಕುಟುಂಬಗಳೊಂದಿಗೆ ಸಂವಹನ ನಡೆಸಲಾಗಿತ್ತು. ವನ್ಯಜೀವಿಗಳ ಸಂಖ್ಯೆ ಹೆಚ್ಚಾಗುವ ಭಯದಿಂದ ಅವರು ಅರಣ್ಯದಿಂದ ಹೊರಬರಲು ಇಚ್ಛೆ ವ್ಯಕ್ತಪಡಿಸಿದ್ದರು ಎಂದು ಖಂಡ್ರೆ ಹೇಳಿದರು.**

## ನಿಷ್ಕಳಂಕವಾಗಿ ಬಾಳಿದ ಸಿದ್ಧಲಿಂಗಯ್ಯ : ಅಗಲಿದ ಸಾಹಿತಿಗೆ ಒಡನಾಡಿಗಳಿಂದ ನುಡಿ ನಮನ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸಾರ್ವಜನಿಕ ಜೀವನದಲ್ಲಿ ಪ್ರಮುಖ ಸ್ಥಾನಗಳಲ್ಲಿದ್ದರೂ ನಿಷ್ಕಳಂಕರಾಗಿ ಬಾಳಿದ ಜಿ.ಎಸ್. ಸಿದ್ದಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ತಿಗೂ ನೈತಿಕ ಶಕ್ತಿ ತುಂಬಿದ್ದರು ಎಂದು ಅವರ ಒಡನಾಡಿಗಳು ಸ್ಮರಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತು ಕಸಾಪ ನಗರದಲ್ಲಿ ಹಮ್ಮಿಕೊಂಡಿದ್ದ ಪ್ರೊ.ಜಿ.ಎಸ್. ಸಿದ್ದಲಿಂಗಯ್ಯ ನುಡಿ ನಮನ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಪ್ರಮುಖರು ಮನದಾಳ ಹಂಚಿಕೊಂಡರು. ಕಸಾಪ ಅಧ್ಯಕ್ಷ ಮಹೇಶ ಜೋಶಿ, ಸಿದ್ದಲಿಂಗಯ್ಯ ಅವರು ಪರಿಷತ್ತಿನ ಅಧಿಕಾರ ವಹಿಸಿಕೊಂಡಾಗ, ಪರಿಷತ್ತು ಸಂದಿಗ್ಧ ಸನ್ನಿವೇಶದಲ್ಲಿತ್ತು.

ಆ ಸಂದರ್ಭದಲ್ಲಿ ನುಡಿದಂತೆ ನಡೆದ ಅವರು, ತಮ್ಮ ಅವಧಿಯಲ್ಲಿ ಪರಿಷತ್ತಿಗೆ ಬಹುಮುಖ ಕೊಡುಗೆಗಳನ್ನು ನೀಡಿದರು. ಮಾರ್ಗದರ್ಶಕರಾಗಿದ್ದ ಅವರು, ಇತ್ತೀಚಿನವರೆಗೂ ಪರಿಷತ್ತಿನ ಏಳಿಗೆ ಸಲಹೆಗಳನ್ನು ನೀಡುತ್ತಿದ್ದರು’ ಎಂದು ಸ್ಮರಿಸಿಕೊಂಡರು. ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಕಪಟತನ ಇರದ, ಆತ್ಮರತಿಗೆ ಒಳಗಾಗದ ಪರಿಶುದ್ಧ ವ್ಯಕ್ತಿತ್ವ ಅವರದಾಗಿತ್ತು. ಸಾರ್ವಜನಿಕ ಜೀವನದಲ್ಲಿ ಪ್ರಮುಖ ಸ್ಥಾನಗಳಲ್ಲಿದ್ದೂ, ನಿಷ್ಕಳಂಕವಾಗಿ ಬಾಳಿದ ಅಪರೂಪದ ವ್ಯಕ್ತಿ ಅವರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬೇಲಿಮಠದ ಶಿವರುದ್ರ ಸ್ವಾಮೀಜಿ, ’ಎಲ್ಲರೊಂದಿಗೆ ಒಂದಾಗಿ, ಎಲ್ಲರಿಗೂ ಬೇಕಾಗಿ ಬಾಳಿದವರು ಸಿದ್ದಲಿಂಗಯ್ಯ’ ಎಂದರು. ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ, ಸಿದ್ಧಲಿಂಗಯ್ಯ ಅವರಿಗೆ ಸಿಟ್ಟಿನಷ್ಟೇ ಸಂಯಮವೂ ಇತ್ತು’ ಎಂದು ಸ್ಮರಿಸಿಕೊಂಡರು.

# 7ನೇ ರಾಷ್ಟ್ರಮಟ್ಟದ ಬಾಕ್ಸಿಂಗ್‌ನಲ್ಲಿ ಕಂಚು ಗೆದ್ದ ಯುವ ಬಾಕ್ಸರ್

### ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ವಿವಾನ್ ಮಂಜುನಾಥ್ ಅವರು, 80 ರಿಂದ 85ಕೆ.ಜಿ. ವಿಭಾಗದಲ್ಲಿ ಮಾಡಿರುವ ಸಾಧನೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ನೋಯ್ಡಾದಲ್ಲಿ ನಡೆದ ರಾಷ್ಟ್ರಮಟ್ಟದ ಬಾಕ್ಸಿಂಗ್ ಫೆಡರೇಶನ್ ಆಫ್ ಇಂಡಿಯಾ ಆಯೋಜಿಸಿದ್ದ 7ನೇ ಯೂಥ್ ಮೆನ್ ಮತ್ತು ವುಮೆನ್ಸ್ ರಾಷ್ಟ್ರ ಮಟ್ಟದ ಬಾಕ್ಸಿಂಗ್‌ನಲ್ಲಿ ಬೆಂಗಳೂರಿನ ರಾಕ್ ಬುಲ್ ಅಕಾಡೆಮಿ ಆಫ್ ಆರ್ಟ್ಸ್ ಬಾಕ್ಸಿಂಗ್ ಕ್ಲಬ್ ಕ್ರೀಡಾಪಟು, ಡೆಕನ್ ಇಂಟರ್ ನ್ಯಾಷನಲ್ ಶಾಲೆಯ 12ನೇ ತರಗತಿ ವಿದ್ಯಾರ್ಥಿ ವಿವಾನ್ ಮಂಜುನಾಥ್ ತೃತೀಯ ಬಹುಮಾನ ಪಡೆದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ಬೆಂಗಳೂರು ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ವಿವಾನ್ ಮಂಜುನಾಥ್ ಅವರು, 80 ರಿಂದ 85ಕೆ.ಜಿ. ವಿಭಾಗದಲ್ಲಿ ಮಾಡಿರುವ ಸಾಧನೆಯನ್ನು ಪರಿಗಣಿಸಿ ರಾಜ್ಯ ಅಮೆಚೂರ್ ಬಾಕ್ಸಿಂಗ್ ಅಸೋಸಿಯೇಷನ್ ನಿಂದ ಗೌರವಿಸಲಾಯಿತು. ರಾಮನಗರ ಶಾಸಕ ಇಕ್ಬಾಲ್ ಹುಸೇನ್, ಕರ್ನಾಟಕ ಅಮೆಚೂರ್ ಬಾಕ್ಸಿಂಗ್ ಅಸೋಸಿಯೇಶನ್ ಅಧ್ಯಕ್ಷ ಡಾ.ಮಂಜೇಗೌಡ, ಪ್ರಧಾನ ಕಾರ್ಯದರ್ಶಿ ಸಾಯಿ ಸತೀಶ್, ಬಾಕ್ಸಿಂಗ್ ತರಬೇತುದಾರ ಚಂದ್ರ ಕುಮಾರ್ ಅವರು ಯುವ ಬಾಕ್ಸಿಂಗ್ ಕ್ರೀಡಾ ಪಟು ವಿವಾನ್ ಮಂಜುನಾಥ್ ಅವರನ್ನು ಸನ್ಮಾನಿಸಿದರು.

ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿ, ಯುವ ಸಮುದಾಯದ ವಿವಾನ್ ಮಂಜುನಾಥ್ ಇತರೆ ಕ್ರೀಡಾಪಟುಗಳಿಗೆ ಮಾದರಿಯಾಗಿದ್ದಾರೆ. ನಾಡಿಗೆ ಕೀರ್ತಿ ತಂದಿರುವ ಅವರು ಬಾಕ್ಸಿಂಗ್ ನಲ್ಲಿ ಮತ್ತಷ್ಟು ಪ್ರಜ್ವಲಿಸಲಿ. ಕ್ರೀಡೆಯಲ್ಲಿ ರಾಜ್ಯದ ಪ್ರತಿಭೆಗಳು ಉತ್ತುಂಗಕ್ಕೇರಬೇಕು. ರಾಜ್ಯ ಸರ್ಕಾರ ಮತ್ತು ವೈಯಕ್ತಿವಾಗಿ ತಾವು ಸೂಕ್ತ ಪ್ರೋತ್ಸಹ ಸಹಕಾರ ನೀಡುತ್ತೇವೆ. ಹೆಚ್ಚಿನ ರೀತಿಯಲ್ಲಿ ಯುವ ಜನಾಂಗ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು ಹೇಳಿದರು.

ಪದಕ ವಿಜೇತ ವಿವಾನ್ ಮಂಜುನಾಥ್ ಮಾತನಾಡಿ, ತಂದೆ ಕೆ.ಎಸ್.ಮಂಜುನಾಥ್ ಮತ್ತು ತಾಯಿ ಪಯಸ್ವಿನಿ, ರಾಜ್ಯ ಬಾಕ್ಸಿಂಗ್ ಅಸೋಸಿಯೇಷನ್ ಹಾಗೂ ತರಬೇತುದಾರರ ಸಹಕಾರದಿಂದ ರಾಷ್ಟ್ರಮಟ್ಟದಲ್ಲಿ ಬಾಕ್ಸಿಂಗ್ ನಲ್ಲಿ ಪದಕ ಗಳಿಸಲು ಸಾಧ್ಯವಾಯಿತು. ಒಲಂಪಿಕ್‌ನಲ್ಲಿ ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕ ಗೆದ್ದು ರಾಷ್ಟ್ರ ಮತ್ತು ರಾಜ್ಯಕ್ಕೆ ಕೀರ್ತಿ ತರುವ ನಿಟ್ಟಿನಲ್ಲಿ ಶ್ರಮಿಸುತ್ತೇನೆ ಎಂದರು.

ಕರ್ನಾಟಕ ಅಮೆಚೂರ್ ಬಾಕ್ಸಿಂಗ್ ಅಸೋಸಿಯೇಶನ್ ಅಧ್ಯಕ್ಷ ಡಾ.ಮಂಜೇಗೌಡ ಮಾತನಾಡಿ, ಬಾಕ್ಸಿಂಗ್ ಅತಿ ಪ್ರಾಮುಖ್ಯತೆಯುಳ್ಳ ಕ್ರೀಡೆ. ಒಲಂಪಿಕ್ಸ್‌ನಲ್ಲಿ ಅತ್ಯಂತ ಪರಾತನ ಕ್ರೀಡೆ ಇದಾಗಿದ್ದು, ಭವಿಷ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಪ್ರತಿನಿಧಿಸಿ ಪದಕ ಪಡೆಯಲಿ ಎಂಬ ಶುಭ ಹಾರೈಸಿದರು.

> **ಪ್ರಧಾನ ಕಾರ್ಯದರ್ಶಿ ಸಾಯಿ ಸತೀಶ್ ಮಾತನಾಡಿ, ಬಾಕ್ಸಿಂಗ್ ಕೌಶಲ್ಯಯುತ ಕ್ರೀಡೆಯಾಗಿದ್ದು, ಬಾಕ್ಸಿಂಗ್‌ನಲ್ಲಿ ತೊಡಗಿಕೊಂಡಲ್ಲಿ ಮಾನಸಿಕ, ದೈಹಿಕವಾಗಿ ಬೆಳವಣಿಗೆ ಸಾಧಿಸಲು ಸಾಧ್ಯವಾಗಲಿದೆ. ಬಾಕ್ಸಿಂಗ್ ಚಾಂಪಿಯನ್ ಮೇರಿಕೋಮ್ ದೇಶದ ಕ್ರೀಡಾಪಟುಗಳಿಗೆ ಮಾದರಿಯಾಗಿದ್ದು, ಅವರ ಹೆಜ್ಜೆಗುರುತುಗಳನ್ನು ಅನುಸರಿಸುವಂತೆ ಕಿವಿ ಮಾತು ಹೇಳಿದರು. ತರಬೇತುದಾರ ಚಂದ್ರಕುಮಾರ್ ಮಾತನಾಡಿ, ಗುರಿ ಮತ್ತು ಗುರು ಸರಿ ಇದ್ದಾಗ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ರಾಜ್ಯದಲ್ಲಿ ಬಾಕ್ಸಿಂಗ್‌ಗೆ ಹೆಚ್ಚು ಒತ್ತು ನೀಡಬೇಕು. ರಾಜ್ಯ ಉತ್ತಮ ದೈಹಿಕ ಸಾಮರ್ಥ್ಯ ಇರುವವರಿಗೆ ಉತ್ತಮ ತರಬೇತಿ ದೊರೆತರೆ ಅಂತರಾಷ್ಟ್ರೀಯ ಕ್ರೀಡಾಪಟುಗಳಾಗಿ ರೂಪಗೊಳ್ಳಬಹುದು ಎಂದು ಹೇಳಿದರು.**

## ಕಟ್ಟಡ ಬೇಡ, ಮರ ಉಳಿಸಿ: ಎಟಿಆರ್

• ಉದಯವಾಹಿನಿ, ಬೆಂಗಳೂರು

ಕಂಟೋನ್ಮೆಂಟ್ ಪ್ರದೇಶದಲ್ಲಿರುವ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಉದ್ದೇಶದ ಕಟ್ಟಡ ಕಟ್ಟಲು ಅವಕಾಶ ಕೊಡದೆ, ಮರಗಳು ಮತ್ತು ಜೀವ ಪರಿಸರ ವ್ಯವಸ್ಥೆ ಉಳಿಸಿಕೊಳ್ಳಬೇಕು ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಸರ್ಕಾರವನ್ನು ಒತ್ತಾಯಿಸಿದರು. ನಗರದ ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ 368 ಮರಗಳನ್ನು ಕಡಿಯಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಸ್ಥಳಕ್ಕೆ ಸಂಘಟನೆ ಸದಸ್ಯರೊಂದಿಗೆ ಭೇಟಿ ನೀಡಿ ಮರಗಳು ಮತ್ತು ಜೀವ ಪರಿಸರ ವ್ಯವಸ್ಥೆ ವೀಕ್ಷಿಸಿದ ಬಳಿಕ ಅವರು ಮಾತನಾಡಿದರು. ನಗರದಲ್ಲಿ ದಿನದಿಂದ ದಿನಕ್ಕೆ ಮರಗಳ ಸಂಖ್ಯೆ ಕಡಿಮೆ ಆಗುತ್ತಿದ್ದು. ವಾಯುಮಾಲಿನ್ಯ ಹೆಚ್ಚುತ್ತಿದೆ. ಜಗತ್ತಿನಲ್ಲಿ ಒಬ್ಬ ವ್ಯಕ್ತಿಗೆ ಸರಾಸರಿ 422 ಮರಗಳಿವೆ. ಭಾರತದಲ್ಲಿ ಒಬ್ಬ ವ್ಯಕ್ತಿಗೆ ಕೇವಲ 28 ಮರಗಳಿವೆ ಎಂದು ಅಂಕಿಅಂಶಗಳು ಹೇಳುತ್ತವೆ. ಸರ್ಕಾರಕ್ಕೆ ಜನರ ಆರೋಗ್ಯ ಮುಖ್ಯ ಆಗುತ್ತಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಮರಗಳ ಹನನವಾಗುತ್ತಿದೆ ಎಂದರು. ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಮಾತನಾಡಿ, 1973ರಿಂದ 2023 ರವರೆಗೆ ಪ್ರತಿ ಹತ್ತು ವರ್ಷಗಳಲ್ಲಿ ಬೆಂಗಳೂರಿನ ಹಸಿರು ಹೊದಿಕೆ ಎಷ್ಟು ಪ್ರಮಾಣದಲ್ಲಿ ಕಡಿಮೆ ಆಗಿದೆ ಎಂಬ ಅಧ್ಯಯನವನ್ನು ಭಾರತೀಯ ವಿಜ್ಞಾನ ಸಂಸ್ಥೆ ಮಾಡಿ, ಚಿತ್ರಗಳನ್ನು ಬಿಡುಗಡೆ ಮಾಡಿದೆ. ಅರಣ್ಯ ಇಲಾಖೆ, ರೈಲ್ವೆ ಇಲಾಖೆಯ ಅಧಿಕಾರಿಗಳು ಇದನ್ನು ನೋಡಿಲ್ಲವೇ 1973ರಲ್ಲಿ ಇದ್ದ ಹಸಿರಿನ ಹೊದಿಕೆ 2023ರಲ್ಲಿ ಶೇಕಡಾ 90 ರಷ್ಟು ಕಡಿಮೆ ಆಗಿದೆ. ಇಲ್ಲಿನ ಮರಗಳ ಜೊತೆಗೆ ಪಕ್ಷಿ, ಕ್ರಿಮಿ ಕೀಟಗಳು, ಜೇನು ಜೇಡ ದುಂಬಿ ಇತ್ಯಾದಿ ಜೀವ ಸಂಕುಲವನ್ನು ಸಂರಕ್ಷಣೆ ಮಾಡಲು ಸಂಕಲ್ಪ ಮಾಡಬೇಕು’ ಎಂದು ಹೇಳಿದರು.

ಟೀ ಡಾಕ್ಟರ್ ವಿಜಯ್ ನಿಶಾಂತ್ ಅವರು, ಈ ಭಾಗದಲ್ಲಿ 70ಕ್ಕೂ ಹೆಚ್ಚು ಪಾರಂಪರಿಕ ಮರಗಳಿವೆ ಎಂದರು.

ಅಂತರಾಳದಿಂದ.. EDITORIAL

# ರಾಜೀನಾಮೆ ನೀಡದ ವಿಜಯ್ ಶಾ

## ಮೂರೂ ಬಿಟ್ಟವರು ಊರಿಗೆ ದೊಡ್ಡವರು

ಮಧ್ಯ ಪ್ರದೇಶ ಹೈಕೋರ್ಟ್ ಆದೇಶದ ಬಳಿಕವಾದರೂ, ಸಚಿವ ಕುನ್ವರ್ ವಿಜಯ್ ಶಾ ಪ್ರಕರಣವನ್ನು ಬಿಜೆಪಿಯು ಗಂಭೀರವಾಗಿ ತೆಗೆದುಕೊಳ್ಳುತ್ತದೆ ಎನ್ನುವ ದೇಶದ ನಿರೀಕ್ಷೆ ಹುಸಿಯಾಗಿದೆ. ದೇಶ ಯುದ್ಧ ದಂತಹ ಸಂಕೀರ್ಣ ಸ್ಥಿತಿಯಲ್ಲಿ ಸಿಲುಕಿಕೊಂಡಿರುವಾಗ, ಆಪರೇಷನ್ ಸಿಂಧೂರದಲ್ಲಿ ಭಾಗವಹಿಸಿದ್ದ ಕರ್ನಲ್ ಸೋಫಿಯಾ ಖುರೇಷಿಯವರನ್ನು ಭಯೋತ್ಪಾದಕರ ಸೋದರಿ ಎಂದು ಕರೆದ ವಿಜಯ್ ಶಾರನ್ನು ಬಿಜೆಪಿ ವರಿಷ್ಠರು ತಕ್ಷಣ ಸಚಿವ ಸ್ಥಾನದಿಂದ ಮಾತ್ರವಲ್ಲ ಪಕ್ಷದಿಂದಲೇ ವಜಾಗೊಳಿಸಬೇಕಾಗಿತ್ತು. ಈ ದೇಶದ ಸೇನೆಯ ಅತ್ಯುನ್ನತ ಸ್ಥಾನದಲ್ಲಿರುವ ವ್ಯಕ್ತಿಯನ್ನು 'ಭಯೋತ್ಪಾದಕರ ಸೋದರಿ' ಎಂದು ಕರೆಯುವುದು ದೇಶದ್ರೋಹಕ್ಕೆ ಸಮವಾಗಿದೆ.

ಈ ಮೂಲಕ ಸೈನಿಕರ ನೈತಿಕ ಸ್ಥೈರ್ಯವನ್ನು ಕುಗ್ಗಿಸುವ ಕೆಲಸವನ್ನು ಸಚಿವ ವಿಜಯ್ ಶಾ ಮಾಡಿದ್ದಾರೆ. ಅಷ್ಟೇ ಅಲ್ಲ, ಅವರು ಧರ್ಮದ ಹೆಸರಿನಲ್ಲಿ ದೇಶವನ್ನು ವಿಭಜಿಸುವ ಕೆಲಸವನ್ನು ಮಾಡಿದ್ದಾರೆ. ಹಿಂದೂಗಳು ಮತ್ತು ಮುಸ್ಲಿಮರು ಒಂದಾಗಿ ಪಾಕಿಸ್ತಾನಕ್ಕೆ ಪ್ರತಿಕ್ರಿಯೆಯನ್ನು ನೀಡಬೇಕಾಗಿರುವ ಹೊತ್ತಿನಲ್ಲಿ, ಭಾರತದ ಮುಸ್ಲಿಮರನ್ನೆಲ್ಲ ಭಯೋತ್ಪಾದಕರೊಂದಿಗೆ ನಿಲ್ಲಿಸಿ, ಆಪರೇಷನ್ ಸಿಂಧೂರಕ್ಕೆ ಕಳಂಕ ತಂದಿದ್ದಾರೆ. ಆಪರೇಷನ್ ಸಿಂಧೂರದ ಹೆಗ್ಗಳಿಕೆಯನ್ನು ತನ್ನದಾಗಿಸಿಕೊಳ್ಳಲು ಗರಿಷ್ಠ ಪ್ರಯತ್ನ ನಡೆಸುತ್ತಿರುವ ಬಿಜೆಪಿಗೆ, ಶಾ ಹೇಳಿಕೆಯ ಕಳಂಕವನ್ನು ತೊಳೆದುಕೊಳ್ಳುವ ವಿಷಯದಲ್ಲಿ ಮಾತ್ರ ಈವರೆಗೆ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಬಿಜೆಪಿ ವರಿಷ್ಠರು ಕೂಡ ವಿಜಯ್ ಶಾ ಅವರ ಹೇಳಿಕೆಯೊಂದಿಗೆ ಸಹಮತವನ್ನು ಹೊಂದಿದ್ದಾರೆಯೇ ಎಂದು ದೇಶದ ಜನತೆ ಅನುಮಾನ ಪಡುವಂತಹ ಸ್ಥಿತಿ ಈಗ ನಿರ್ಮಾಣವಾಗಿದೆ.

**ಅಷ್ಟೇ ಅಲ್ಲ, ಆತನ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಿ ಜೈಲಿಗೆ ತಳ್ಳಬೇಕಾಗಿತ್ತು. ಆದರೆ ಬಿಜೆಪಿಯು ಆತನನ್ನು ರಕ್ಷಿಸುವ ಮೂಲಕ ದೇಶದ ಹಿತಾಸಕ್ತಿಗಿಂತ ರಾಜಕೀಯ ಹಿತಾಸಕ್ತಿಯೇ ಮುಖ್ಯ ಎನ್ನುವುದನ್ನು ಸಾಬೀತು ಪಡಿಸಿತು. ಆತ ಅಂತಹದೊಂದು ದೇಶ ವಿರೋಧಿ ಹೇಳಿಕೆ ನೀಡಿ ಒಂದು ದಿನ ಕಳೆದಿದ್ದರೂ ಪೊಲೀಸರು ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಯಾವಾಗ ವಿರೋಧ ಪಕ್ಷಗಳು ಅವರ ವಿರುದ್ಧ ಟೀಕೆಗಳ ಸುರಿಮಳೆಗೈಯತೊಡಗಿದವೋ ಆಗ ನಾನು ಹತ್ತು ಬಾರಿ ಬೇಕಾದರೂ ಕ್ಷಮೆಯಾಚಿಸುತ್ತೇನೆ'' ಎಂಬ ಹೇಳಿಕೆಯನ್ನು ನೀಡಿ, ಕಾನೂನು ಕ್ರಮದಿಂದ ಪಾರಾಗುವ ಪ್ರಯತ್ನವನ್ನು ಮಾಡಿದರು.**

ಮಧ್ಯಪ್ರದೇಶ ಸರಕಾರದಲ್ಲಿ ಉನ್ನತ ಸ್ಥಾನದಲ್ಲಿರುವುದರಿಂದ ಅವರ ವಿರುದ್ಧ ಸ್ವಯಂ ಕ್ರಮ ಕೈಗೊಳ್ಳಲು ಪೊಲೀಸರು ಹಿಂದೇಟು ಹಾಕಿದ್ದರು. ಇಂತಹ ಸಂದರ್ಭದಲ್ಲಿ ಆತನ ವಿರುದ್ಧ ತಕ್ಷಣ ಮೊಕದ್ದಮೆ ದಾಖಲಿಸುವಂತೆ ಮಧ್ಯಪ್ರದೇಶ ಹೈಕೋರ್ಟ್ ಆದೇಶ ನೀಡಿತು. ಧರ್ಮದ ಆಧಾರದಲ್ಲಿ ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಪ್ರಚೋದಿಸುವ ಭಾಷಣಗಳು ಮತ್ತು ಕೃತ್ಯಗಳನ್ನು ದಂಡಿಸುವ ಭಾರತೀಯ ನ್ಯಾಯ ಸಂಹಿತೆಯ 196ನೇ ವಿಧಿಯು ಮೇಲ್ನೋಟಕ್ಕೆ ಈ ಪ್ರಕರಣದಲ್ಲಿ ಅನ್ವಯಿಸುತ್ತದೆ ಎಂದು ಹೈಕೋರ್ಟ್ ತೀರ್ಪಿನ ಸಂದರ್ಭದಲ್ಲಿ ಹೇಳಿತ್ತು. ಹೈಕೋರ್ಟ್ ತೀರ್ಪಿನ ಬಳಿಕವಾದರೂ, ತಾನು ಎಸಗಿದ ಕೃತ್ಯದ ಗಂಭೀರತೆಯನ್ನು ಅರಿತು ಸಚಿವ ಕುನ್ವರ್ ವಿಜಯ್ ಶಾ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿತ್ತು. ಬದಲಿಗೆ ಸಚಿವ ವಿಜಯ್ ಶಾ ಅವರು, ತನ್ನ ಮೇಲೆ ಎಫ್ಐಆರ್ ದಾಖಲಿಸದಂತೆ ಸುಪ್ರೀಂಕೋರ್ಟ್‌ನ ಮೊರೆ ಹೊಕ್ಕರು. ಇದೀಗ ಸುಪ್ರೀಂಕೋರ್ಟ್ ಕೂಡ ಛೀಮಾರಿ ಹಾಕಿದೆ. ಸುಪ್ರೀಂಕೋರ್ಟ್ ಮುಂದೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಈ ಕುರಿತಂತೆ ನಾನು ಕ್ಷಮೆಯಾಚಿಸಿದ್ದೇನೆ. ನನ್ನ ಹೇಳಿಕೆಯನ್ನು ಮಾಧ್ಯಮಗಳು ಅತಿರಂಜಿತಗೊಳಿಸಿವೆ ಎಂದು ಹೇಳಿಕೊಂಡಿದ್ದಾರೆ. ಕ್ಷಮೆ ಯಾಚಿಸುವುದರಿಂದ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದಾದರೆ, ಈ ದೇಶದ ಜನಸಾಮಾನ್ಯರಿಗೂ ಆ ಸೌಲಭ್ಯ ದೊರಕಬೇಕು. ಮೋದಿ ಸರಕಾರದ ವೈಫಲ್ಯದ ವಿರುದ್ಧ ಹೇಳಿಕೆಗಳನ್ನು ನೀಡಿದ ಕಾರಣಕ್ಕಾಗಿ, ದೇಶದ ಭದ್ರತೆಯನ್ನು ಮುಂದೊಡ್ಡಿ ಈಗಾಗಲೇ ಹಲವು ಪತ್ರಕರ್ತರು, ಸಾಮಾಜಿಕ ಹೋರಾಟಗಾರರು, ಕಾಮಿಡಿಯನ್‌ಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಕೆಲವರು ಜೈಲು ಪಾಲಾಗಿದ್ದಾರೆ. ಅವರಿಗೆ ಇಲ್ಲದ ವಿಶೇಷ ಸೌಲಭ್ಯವನ್ನು ಈ ಸಚಿವರಿಗೆ ಯಾಕೆ ನೀಡಬೇಕು ಸಚಿವ ಶಾ ಅವರ ಭಾಷಣದ ವೀಡಿಯೋ ಈಗಾಗಲೇ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ವೀಡಿಯೋವನ್ನು ಆಧರಿಸಿಯೇ ಹೈಕೋರ್ಟ್ ತನ್ನ ಆದೇಶವನ್ನು ನೀಡಿದೆ. ವಿಜಯ್ ಶಾ ಅವರು ತಮ್ಮ ಮನವಿಯಲ್ಲಿ ಸುಪ್ರೀಂಕೋರ್ಟನ್ನೇ ದಾರಿ ತಪ್ಪಿಸಲು ಯತ್ನಿಸಿದ್ದರು. ಆದರೆ ಸುಪ್ರೀಂಕೋರ್ಟ್ ಯಾಮಾರದೆ ತನ್ನ ಚಾಟಿ ಬೀಸಿದೆ. ಸಾಂವಿಧಾನಿಕ ಹುದ್ದೆಯನ್ನು ಹೊಂದಿದ ವ್ಯಕ್ತಿಯೊಬ್ಬರು ಜವಾಬ್ದಾರಿಯುತವಾಗಿ ವರ್ತಿಸಬೇಕು ಎಂದು ನಿರೀಕ್ಷಿಸಲಾಗುತ್ತದೆ. ಇಂತಹ ಹೇಳಿಕೆಯನ್ನು ನೀಡುವುದು ಒಬ್ಬ ಸಚಿವರಿಗೆ ಯಾವ ರೀತಿಯಲ್ಲೂ ಭೂಷಣವಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸರಕಾರದೊಳಗೆ ಉನ್ನತ ಸ್ಥಾನದಲ್ಲಿರುವ ಸಚಿವರು ರಾಜ್ಯದ ಇತರರಿಗೆ ಮಾದರಿಯಾಗಿರುತ್ತಾರೆ. ಸಚಿವನೇ ಸೇನೆಯೊಳಗಿರುವ ಯೋಧರನ್ನು ಧರ್ಮದ ಆಧಾರದಲ್ಲಿ ಭಯೋತ್ಪಾದಕರ ಸಂಬಂಧಿಕರು ಎಂದು ಕರೆದರೆ, ಜನಸಾಮಾನ್ಯರ ಪಾಡೇನು? ಇವರ ಹಿಂಬಾಲಕರು ಇದನ್ನು ಮಾದರಿಯಾಗಿಟ್ಟು ಕೊಂಡರೆ ದೇಶದ ಆಂತರಿಕ ಭದ್ರತೆಯ ಸ್ಥಿತಿಯೇನಾಗಬೇಕು? ಇದೇ ಸಂದರ್ಭದಲ್ಲಿ ಹೈಕೋರ್ಟ್ ಶಾ ಮೇಲೆ ದಾಖಲಿಸಿರುವ ಎಫ್ಐಆರ್ ದುರ್ಬಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ. ತನಿಖೆಯ ಮೇಲ್ವಿಚಾರಣೆಯನ್ನು ತಾನೇ ಹೊತ್ತುಕೊಂಡಿದೆ. ಇಷ್ಟೆಲ್ಲ ಆಗಿರುವಾಗ ಅವರು ಸಚಿವ ಸ್ಥಾನದಿಂದ ಇನ್ನಾದರೂ ಕೆಳಗಿಳಿಯಲೇಬೇಕು. ಇದೇ ಸಂದರ್ಭದಲ್ಲಿ ಬಿಜೆಪಿಯು ಅವರನ್ನು ತನ್ನ ಪಕ್ಷದಲ್ಲಿ ಉಳಿಸಿಕೊಳ್ಳುತ್ತದೆಯೇ ಎನ್ನುವುದು ಇನ್ನೊಂದು ಪ್ರಶ್ನೆ. ವಿಜಯ್ ಶಾ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳದ ಬಿಜೆಪಿಯ ಕೇಂದ್ರ ವರಿಷ್ಠರ ಮೇಲೂ ಸುಪ್ರೀಂಕೋರ್ಟ್ ಪರೋಕ್ಷವಾಗಿ ಚಾಟಿಯನ್ನು ಬೀಸಿದೆ.



# ರಾಮಾಯಣ

ಸುಮಂತ್ರನು ದಶರಥನಿಗೆ ಶ್ರೀರಾಮಾದಿಗಳು ನುಡಿದದ್ದನ್ನು ಹೇಳಿದ್ದು

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಕೈಕೇಯಾದೇವಿಗೆ ವರವನ್ನು ಕೊಟ್ಟು ತಪ್ಪಬಾರದೆಂದು ಶ್ರೀರಾಮನನ್ನು ಹೊರಡಿಸಿದನಾದರೂ ಸರ್ವಥಾ ಅಕೃತ್ಯವನ್ನೇ ಮಾಡಿದನು. ಆದರೂ ಈ ಕೃತ್ಯವು ಈಶ್ವರಾಧೀನದಿಂದ ಬಂದಿತಲ್ಲದೆ ಮತ್ತೊಂದಲ್ಲ. ದಶರಥರಾಯನು ಅಲ್ಪಬುದ್ಧಿಯಿಂದ ಲೋಕವಿರುದ್ಧವಾದ ಕಾರ್ಯದಲ್ಲಿ ಪ್ರವರ್ತಿಸಿದನು. ಶ್ರೀರಾಮನ ವನವಾಸವು ಮಹಾರಾಜನಿಗೆ ಶೋಕವನ್ನು ಹುಟ್ಟಿಸುವುದು. ನಾನು ಆತನನ್ನು ತಂದೆಯೆಂದು ಭಾವಿಸುವುದಿಲ್ಲ. ನನಗೆ ಒಡಹುಟ್ಟಿದವನೂ ರಕ್ಷಕನೂ ಬಂಧುವೂ ತಂದೆಯೂ ಆದವನು ಶ್ರೀರಾಮನಲ್ಲದೆ ಮತ್ತೊಬ್ಬನಿಲ್ಲ. ಸಮಸ್ತ ಪ್ರಾಣಿಗಳಿಗೂ ಹಿತವನ್ನೂ ಹರ್ಷವನ್ನೂ ಉಂಟುಮಾಡುತ್ತ, ಧರ್ಮಿಷ್ಟನಾದ ಈ ಸ್ವಾಮಿಯನ್ನು ಹೊರಡಿಸಿ ಲೋಕವಿರುದ್ಧವಾದ ಕರ್ಮವನ್ನು ಮಾಡಿ ದಶರಥರಾಯನು ಹೇಗೆ ಪ್ರಭುತ್ವವನ್ನು ಮಾಡುವನು ಎಂದು ಹೇಳಿದನು. ಸೀತಾದೇವಿಯು ಒಂದುದಿನವಾದರೂ ದುಃಖವನ್ನು ಕಾಣದವಳಾದ್ದರಿಂದ ವನದಲ್ಲಿ ಸಂಚರಿಸುವ ದುಃಖದಿಂದ ಗ್ರಹವು ಹಿಡಿದವರಂತೆ ಕಣ್ಣೀರುಬಿಡುತ್ತ ಮುಖಕಾಂತಿಗುಂದಿ ಶ್ರೀರಾಮನನ್ನು ನೋಡುತ್ತಲಿದ್ದಳು. ಆತನ ಅನುಮತಿಯನ್ನು ಪಡೆದು ಬರುತ್ತಿದ್ದ ನನ್ನನ್ನು ನೋಡುತ್ತ ಸೀತಾದೇವಿಯು ಸುಮ್ಮನೆ ನಿಂತಿದ್ದಳು. ಆ ಬಳಿಕ ಶ್ರೀರಾಮನು ಸೀತಾಲಕ್ಷ್ಮಣಸಮೇತನಾಗಿ ಕಣ್ಣೀರುಬಿಡುತ್ತ ಮುಂದೆ ಪ್ರಯಾಣಮಾಡುವ ಮಾರ್ಗವನ್ನು ವಿಚಾರಿಸುತ್ತಿದ್ದನು ಎಂದು ಸುಮಂತ್ರನು ಹೇಳಿದನು.

### ದಶರಥ ರಾಯನ ಪ್ರಲಾ ಸ

ಆಗ ದಶರಥನು ಸುಮಂತ್ರ, ಆಮೇಲೆ ಏನಾಯಿತೆಂಬುದನ್ನು ಹೇಳು ಎಂದು ಕೇಳಿದನು. **ಅದನ್ನು ಕೇಳಿ ಸುಮಂತ್ರನು ಹೀಗೆ ನುಡಿದನು:** ನಾನು ಶ್ರೀರಾಮನನ್ನು ಕಳುಹಿಸಿ ಪಟ್ಟಣಕ್ಕೆ ಬರಬೇಕೆಂದು ರಥವನ್ನು ಮೇಲ್ಯೆಸಿ ಅಶ್ವಗಳನ್ನು ತಿರುಗಿಸಿದೆನು.

ಆ ಅಶ್ವಗಳು ಶ್ರೀರಾಮನು ವನಕ್ಕೆ ಹೋದನೆಂಬ ದುಃಖಾತಿಶಯದಿಂದ ಹಂಬಲಿಸುತ್ತಿದ್ದವೋ ಎಂಬಂತೆ ಅತ್ಯಂತ ಉಷ್ಣವಾದ ಕಣ್ಣೀರನ್ನು ಬಿಡುತ್ತ ಹೆಜ್ಜೆಯನ್ನಿಡಲಿಲ್ಲ. ನಾನು ರಾಮಲಕ್ಷ್ಮಣರಿಗೆ ನಮಸ್ಕಾರವನ್ನು ಮಾಡಿ ದುಃಖಾತಿಶಯದಿಂದ ಗುಹನ ಜೊತೆಯಲ್ಲಿ ಕೆಲವು ದಿವಸಗಳಿದ್ದು ಶ್ರೀರಾಮನು ನನ್ನನ್ನು ಕೂಗಿ ಕರೆಯುವನೆಂಬ ಆಸೆಯಿಂದ ಆತನು ಹೋದ ದಾರಿಯನ್ನೇ ನೋಡುತ್ತಿದ್ದು ಆಮೇಲೆ ರಥವನ್ನೇರಿಕೊಂಡು ತಿರುಗಿ ಬಂದೆನು.ರಾಜ್ಯದಲ್ಲಿ ಎಲ್ಲಿನೋಡಿದರೂ ಆತನು ವನಕ್ಕೆ ಹೋದನೆಂಬ ದುಃಖಾತಿಶಯದಿಂದ ಜನರು ರೋದನವನ್ನು ಮಾಡುತ್ತಿದ್ದಾರೆ. ವೃಕ್ಷಗಳೂ ತಳಿರು ಮೊಗ್ಗು ಫಲಸಹಿತವಾಗಿ ಕಂದಿವೆ. ನದಿ ಗಳೂ ಕೊಳಗಳೂ ದುಃಖಭಾರದಿಂದ ಬಿಸಿಯಾಗಿವೆ. ವನದಲ್ಲಿರುವ ಸಮಸ್ತ ಪ್ರಾಣಿಗಳೂ ಹೊರಗೆ ಚಲಿಸುತ್ತಿಲ್ಲ. ನೀರಿನಲ್ಲಿರುವ ಪುಷ್ಪ ಜಾತಿಗಳು ಎಂದಿನಹಾಗೆ ಪರಿಮಳಿಸುವುದಿಲ್ಲ. ಉದ್ಯಾನವನಗಳು ಪಕ್ಷಿಗಳೆಲ್ಲವೂ ಹೊರಟುಹೋಗಲು ಸದ್ದಿಲ್ಲದೆ ಶೂನ್ಯವಾಗಿವೆ. ಪಟ್ಟಣದ ಸಮೀಪದಲ್ಲಿರುವ ವನಗಳು ಶೂನ್ಯವಾಗಿವೆ. ನಾನು ಶ್ರೀರಾಮನನ್ನು ಬಿಟ್ಟು ಬರುವಾಗ ನನ್ನನ್ನು ಕಂಡ ಪ್ರಜೆಗಳು ನಿಟ್ಟುಸಿರುಬಿಡುತ್ತ ನನ್ನನ್ನು ಮಾತನಾಡಿಸಲಿಲ್ಲ. ರಾಜಬೀದಿಗಳಲ್ಲಿದ್ದ ಜನರು ಶ್ರೀರಾಮನಿಲ್ಲದ ರಥವನ್ನು ಕಂಡು ಕಣ್ಣೀರು ಸುರಿಸುತ್ತಲಿದ್ದರು.

ಮುಂದುವರಿಯುವುದು...



# ರಾಮಗೌನಿ ಸಹೋದರಿಯರಾದ ಕು ಮೌಕ್ತಿಕ, ಕು.ಪ್ರಿಶಿಕರಂಗ ಪ್ರವೇಶ

• ಉದಯವಾಹಿನಿ, ವಿಶೇಷ

ಖ್ಯಾತ ನೃತ್ಯ ಗುರು ವಿದುಷಿ ಡಾ. ಪ್ರಿಯಾ ಗಣೇಶ್‌ರವರ ಶಿಷ್ಯೆರಾಮಗೌನಿ ಸಹೋದರಿಯರಾದ ಕು,ಮೌಕ್ತಿಕ, ಕು.ಪ್ರಿಶಿಕರಂಗ ಪ್ರವೇಶ ನಗರದ ಜೆ.ಸಿ.ರಸ್ತೆಯ ರವೀಂದ್ರ ಕಲಾಕ್ಷೇತ್ರದಲ್ಲಿ ಅಯೋಜಿಸಲಾಗಿತ್ತು.

6ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವಕು, ಪ್ರಿಶಿಕಬಾಲ್ಯದಿಂದಲೂ ನಾಟ್ಯ ಕ್ಷೇತ್ರದಲ್ಲಿ ಆಸಕ್ತರು ಖ್ಯಾತ ನೃತ್ಯ ಗುರು ಡಾ. ಪ್ರಿಯಾ ಗಣೇಶ್‌ರವರ ಶಿಷ್ಯೆ ಯಾಗಿ ಭರತನಾಟ್ಯ ಜೂನಿಯರ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಆಭ್ಯಸುಸಿತ್ತಿದ್ದಾರೆ. ಜಿಮ್ನಾನಿಷಿಯಂ ಮತ್ತು ಈಜುವಿಕೆಯಲ್ಲೂ ಆಸಕ್ತರಾಗಿ ಅಯೋಧ್ಯಾ ರಾಮಮಂದಿರ ಮುಂತಾದ ಹಲವು ಪ್ರಮುಖ ವೇದಿಕೆಗಳಲ್ಲಿ ಪ್ರದರ್ಶನ ನೀಡಿರುವ ಈ ಯುವ ಪ್ರತಿಭೆಗೆ ಅರಸಿ ಬಂದ ಗೌರವಗಳು ಅನೇಕ. ದಂತ ವೈದ್ಯೆ ಡಾ.ಉಷಾ, ಪ್ರತಾಪ್ ರಾಮಗೌನಿ ಸುಪುತ್ರಿಯರಾದಈಕೆಯ ಸಹೋದರಿ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕು, ಮೌಕ್ತಿಕಕೂಡ ಕಿರಿ ವಯಸ್ಸಿನಲ್ಲೆ ಆಪಾರ ಸಾಧನೆ ಮಾಡಿದ್ದಾರೆ. ವಿಶೇಷ ಮಕ್ಕಳಿಗೆ ನೃತ್ಯ ಮತ್ತು ಯೋಗದ ಪರಿಮಾಣಕಾರಿತ್ವಕುರಿತು ಪಿ.ಹೆಚ್‌ಡಿ ಮಾಡಿರುವ ಡಾ.ಪ್ರಿಯಾ ಗಣೇಶ್ ಗುರುವಿನ ಮಾರ್ಗದರ್ಶನ ಮತ್ತು ವೇದಿಕೆ ಅನುಭವ ಮೂಲ ಕಸಮುದ್ಭವ ನೃತ್ಯ ಮತ್ತು ಕಲಾ ಶಾಲೆಯ ವಿದ್ಯಾರ್ಥಿನಿಯರಾದ ಕು. ಮೌಕ್ತಿಕ ಮತ್ತು ಕು. ಪ್ರಿಶಿಕಪ್ರಸ್ತುತ ಪಡಿಸುವ ರಂಗಪ್ರವೇಶ ದಿವ್ಯ ಕುಮಾರರು ಕೃಷ್ಣ ಹಾಗೂ ಬಲರಾಮರ ಬಾಲ್ಯ ಲೀಲೆಗಳು, ಆಟ ಪಾಠಗಳು,ಲೋಕ ಕಲ್ಯಾಣ ಕಾರ್ಯಗಳು ಧರ್ಮಪಾಲನೆಯ ವಿಶಿಷ್ಟ ನೃತ್ಯಾತ್ಮಕ ಪ್ರಸ್ತುತಿಗೆ ಖ್ಯಾತ ನೃತ್ಯಪಟು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶುಭಾ ಧನಂಜಯ, ಲೇಖಕಿ ರಂಜಿನಿ ದತ್ತಾತ್ರಿ ಮತ್ತು ಜೋತಿಷಿ ಶ್ರೀಕಂಠ ಶಾಸ್ತ್ರೀಸಾಕ್ಷಿಯಾದರು. ಕಸಾನಿಧ್ಯ.ಪಿ ಮತ್ತು ಕು.ಪೂರ್ವಿ.ಎಂ.ಎಸ್ ಕೋರವಂಜಿ ಶೈಲಿಯ ವಿಶಿಷ್ಟ ನಿರೂಪಣೆ,ವಿ.ಅನಿಲ್ ಕುಮಾರ್– ನಟುವಾಂಗ,ವಿ.ದೇಬೂರು ಎಸ್ ಶ್ರೀವತ್ಸ ಗಾಯನ,ವಿ.ಶ್ರೀಹರಿ ಅರ್. ಮೃದಂಗ,ವಿ.ಎನ್ ಆರ್‌ನರಸಿಂಹ ಮೂರ್ತಿಕೊಳಲು,ವಿ. ತುಮಕೂರು ಬಿ.ಶಶಿಕುಮಾರ್ ಘಟಂ ಮತ್ತು ಮೋರ್ಚಿಂಗ್ ಹಾಗೂ ಅರುಣ್ ಭಾರದ್ವಾಜ್ ಸಾಹಿತ್ಯಸಹಚರ್ಯದಲ್ಲಿ ಕುಮಾರಿ ಪ್ರಿಷಿಕಾ ಅಣ್ಣ ಬಲರಾಮನಾಗಿ ಕು. ಮೌಷಿಕಾ ತುಂಟ ಕೃಷ್ಣನಾಗಿ ಭಾವಪೂರ್ಣ ಅಭಿನಯ; ಆದಿತಾಳ ರತಿಪ್ರಿಯ ರಾಗದ ಪುಷ್ಪಾಂಜಲಿ ; ಷಣ್ಮುಖಪ್ರಿಯ ರಾಗದ ಗಣೇಶ ಸ್ತುತಿ ಅಲರಿಪು, ನಾಟರಾಗದ ಕವಿತ್ವ ಅಭೇರಿರಾಗದ ವರ್ಣ– ಖಂಡಛಾಪು ತಾಳ ಶುದ್ಧ ಸಾರಂಗರಾಗದ ದೇವರನಾಮ ,ಶುದ್ಧ ಸಾವೇರಿರಾಗದ ತಿಲ್ಲಾನದೊಂದಿಗೆ ಸಂಪನ್ನ ವಾಯ್ತು ಮಂಜುನಾಥ್ ಅಪೂರ್ವ ರಂಗಸಜ್ಜಿಕೆಯಿಂದ ಮೂಡಿಬಂದ ಕಾರ್ಯಕ್ರಮ ಕಲಾ ರಸಿಕರ ಮನಸೂರೆಗೊಂಡಿತು.

# ಅಂತಾರಾಷ್ಟ್ರೀಯ ಕುಟುಂಬ ದಿನಾಚರಣೆಯ ಶುಭಾಶಯಗಳು

☛ ಚನ್ನೇಗೌಡ ಉಜ್ಜನಿ ಚಲುವಯ್ಯ





ಪ್ರೀತಿಯ ಬಂಧುಗಳೇ ಎಲ್ಲರಿಗೂ ನಮಸ್ಕಾರ ಮೇ 15 ರ ಈ ದಿನವನ್ನು ವಿಶ್ವ ಸಂಸ್ಥೆಯು ಡೇ ಆಫ್ ಪೀಸ್ ಎನ್ನುತ್ತಿದ್ದ ಈ ದಿನವನ್ನ ಈಗ ನಾವು ಅಂತಾರಾಷ್ಟ್ರೀಯ ಕುಟುಂಬ ದಿನವನ್ನಾಗಿ ಆಚರಣೆ ಮಾಡುತ್ತಿದ್ದೇವೆ.

ಈ ಕುಟುಂಬ ಎಂಬ ಪರಿಕಲ್ಪನೆ ತುಂಬಾ ಪವಿತ್ರ, ಮಹತ್ವವಾದದ್ದು. ಪ್ರತಿಯೋರ್ವ ವ್ಯಕ್ತಿ ಮತ್ತು ಸಮಾಜವನ್ನು ಒಂದೆಡೆ ಕೇಂದ್ರೀಕರಿಸುವ ಈ ವ್ಯವಸ್ಥೆ ನಮ್ಮಲ್ಲಿ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಮೌಲ್ಯಗಳಿರುವ ಈ ಕುಟುಂಬ ಎಂಬ ಪರಿಕಲ್ಪನೆಗೇ ಈ ಒಂದು ದಿನ ಅಂತಾರಾಷ್ಟ್ರೀಯ ಕುಟುಂಬ ದಿನವನ್ನಾಗಿ ಆಚರಿಸುವ ಪರಿಪಾಠ ಬೆಳೆದು ಬಂದಿದೆ ಎನ್ನಬಹುದು.

ಜೀವನದಲ್ಲಿ ಪ್ರತಿಯೊಬ್ಬರೂ ತಮ್ಮ ಕುಟುಂಬವನ್ನು ಪ್ರೀತಿಸಬೇಕು, ಈ ಮೂಲಕ ಇಡೀ ವಿಶ್ವವನ್ನೇ ಪ್ರೀತಿಸಬೇಕೆಂಬ ಆಶಯವನ್ನು ಈ ದಿನ ಹೊಂದಿದೆ. ಈ ಕುಟುಂಬವೇ ನಮಗೆ ನಮ್ಮ ಅಸ್ತಿತ್ವವನ್ನು ತಿಳಿಸಿಕೊಡುವ, ನಾಯಕತ್ವ ಗುಣ ಕಲಿಸುವ, ಮಾರ್ಗದರ್ಶನ ನೀಡುವ, ವಿವಿಧ ರೂಪದಲ್ಲಿ ಬೆಂಬಲ ಮತ್ತು ಪ್ರೋತ್ಸಾಹ ನೀಡುವ ವ್ಯವಸ್ಥೆಯಾಗಿದೆ.

ಕುಟುಂಬವೊಂದರಲ್ಲಿ ತಾಯಿ, ತಂದೆ, ಸಹೋದರರು ಮತ್ತು ಮಕ್ಕಳು ಇರುತ್ತಾರೆ. ಭಾರತ ಮುಂತಾದ ಏಷ್ಯಾ ರಾಷ್ಟ್ರಗಳಲ್ಲಿ ಈ ಕುಟುಂಬದ ವ್ಯಾಪ್ತಿ ಇನ್ನೂ ವಿಸ್ತಾರಗೊಳ್ಳುತ್ತದೆ. ಅಲ್ಲಿ ತಂದೆ, ತಾಯಿ, ಮಕ್ಕಳು ಸೇರಿದಂತೆ ಇನ್ನಷ್ಟು ಸಂಬಂಧಿಗಳೂ ಕೂಡ ಸೇರುತ್ತಾರೆ. ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ನಾವೆಲ್ಲರೂ ಕಡ್ಡಾಯವಾಗಿ ನಮ್ಮ ಕುಟುಂಬದೊಂದಿಗೆ ಎಚ್ಚರಿಕೆಯಿಂದ ಇರೋಣ. ಕುಟುಂಬ ಸದಸ್ಯರನ್ನು ಪ್ರೀತಿಸೋಣ, ಗುರು – ಹಿರಿಯರನ್ನು ಗೌರವಿಸೋಣ, ತಂದೆ – ತಾಯಿಯರನ್ನು ಎಚ್ಚರಿಕೆಯಿಂದ ಹುಷಾರಾಗಿ ನೋಡಿಕೊಳ್ಳೋಣ. ಬಹುಶಃ ಕುಟುಂಬವೆಂಬ ಪರಿಕಲ್ಪನೆ ಇಲ್ಲದಿದ್ದರೆ ಈ ಇಡೀ ಜಗತ್ತನ್ನು ಊಹಿಸಲೇ ಅಸಾಧ್ಯವಾಗುತ್ತಿತ್ತು. ಅಷ್ಟರಮಟ್ಟಿಗೆ ಕುಟುಂಬದ ಅಗತ್ಯ ನಮ್ಮ ವಿಶ್ವಕ್ಕೆ ಇದೆ. ಮುಂದೆ ಕೂಡಾ ಜಗತ್ತು ಶಾಂತಿ, ಸಂಯಮದ ಹಾದಿಯಲ್ಲಿ ಸಾಗಬೇಕಿದ್ದರೆ ಅದಕ್ಕೆ ಕುಟುಂಬದ ತಳಪಾಯ ಅತೀಅಗತ್ಯವೆನ್ನಬಹುದು.

ಎಲ್ಲಾ ಕಡೆಯೂ ಕುಟುಂಬವೆಂಬ ಭದ್ರ ಬುನಾದಿ ಇದ್ದೇ ಇದೆ.

ಆದ್ದರಿಂದಲೇ ನಮ್ಮ ವಿಶ್ವ ಇಂದು ಉಳಿದುಕೊಂಡು ಸದೃಢವಾಗಿ ಮುಂದಕ್ಕೆ ಬೆಳೆಯುತ್ತಿದೆ. ವಿಶೇಷವಾಗಿ ನಮ್ಮ ನಮ್ಮ ತಂದೆ – ತಾಯಿಯರ ಕ್ಷೇಮವೆ ನಮ್ಮ ಕ್ಷೇಮ, ತಂದೆ – ತಾಯಿಯರ ಆರೋಗ್ಯವೇ ನಮ್ಮ ಭಾಗ್ಯ. ವೃದ್ಧಾಶ್ರಮಗಳನ್ನು ದೂರವಿಟ್ಟು ನಮ್ಮ ಹಿರಿಯರನ್ನು ಮನೆಯಲ್ಲೇ ಚೆನ್ನಾಗಿ ನೋಡಿಕೊಳ್ಳೋಣ. ಎಲ್ಲರ ಆರೋಗ್ಯ ಕಾಪಾಡಿಕೊಂಡು ನಮ್ಮ ಕುಟುಂಬದೊಂದಿಗೆ ನಾವೂ ಸುರಕ್ಷಿತರಾಗಿರೋಣ. ಇತರರನ್ನೂ ರಕ್ಷಿಸೋಣ ಜೊತೆಯಲ್ಲಿಯೇ ಬದುಕೋಣ ಬದುಕಲು ಪ್ರೋತ್ಸಾಹ ನೀಡೋಣ.

# ಬೆಂಗಳೂರು ನಗರದಲ್ಲಿ ಕೂಡಲೇ ಒಂದಷ್ಟು ಬದಲಾವಣೆ ಆಗಲೇಬೇಕಿದೆ

- ಬೆಂಗಳೂರಿನಲ್ಲಿ ವಾಸವಿರುವ ಮೂಲ ಕನ್ನಡಿಗರ ಭದ್ರತೆ ಹಾಗೂ ಅನುಕೂಲಗಳು.
- 25 ವರ್ಷ ದಾಟಿರುವ ಹಳೆಯ ವಾಹನಗಳು ಹಾಗೂ ಬಳಕೆ ಮಾಡದ ವಾಹನಗಳ ಬಗ್ಗೆ ಕೂಡಲೇ ವ್ಯವಸ್ಥೆ ಮಾಡುವುದು.
- ಮನೆಗೊಂದು ಮರ ನೆಡುವ ಪ್ರಸ್ತಾವನೆ ಕೂಡಲೇ ಜಾರಿ ತರುವುದು.
- ದಟ್ಟಣೆ ನಿಭಾಯಿಸಲು ಶಾಲಾ ಸಮಯ ಹಾಗೂ ಕಾರ್ಮಿಕರ ಸಮಯ ಬದಲಾವಣೆ ಮಾಡುವುದು.
- ಕನ್ನಡ ವ್ಯವಹಾರ ಕಡ್ಡಾಯಗೊಳಿಸುವುದು.
- 60 ವರ್ಷ ದಾಟಿರುವ ಹಿರಿಯರ ಆರೋಗ್ಯ ಸಹಾಯಕ್ಕೆ ಸರ್ಕಾರಿ ವೈದ್ಯರು ನೇರವಾಗಿ ಮನೆಯಲ್ಲಿಯೇ ಸೇವೆ ನೀಡಲು ವ್ಯವಸ್ಥೆ ಕಲ್ಪಿಸುವುದು.
- ವಧು ವರರ ಸಮಾವೇಶ ಸರ್ಕಾರಿ ಸೌಮ್ಯದ ಅಧಿಕಾರಿಗಳ ಮೂಲಕ ಹೆಚ್ಚು ಕಾರ್ಯಕ್ರಮ ಮಾಡುವುದು.
- ಎಲ್ಲಾ ಕ್ರೀಡೆಗಳಿಗೂ ಒಂದೇ ರೀತಿಯಲ್ಲಿ ಪರಿಗಣಿಸಿ ಅನುದಾನ ನೀಡುವ ಮೂಲಕ ಹೆಚ್ಚು ಕ್ರೀಡಾ ಮಕ್ಕಳನ್ನು ತರುವುದು.
- ಕನ್ನಡ ಪದವೀಧರರ ಮೂಲಕ ಬೆಂಗಳೂರಿನಲ್ಲಿ ವಾಸಿಸುವ ಹೊರಗಿನ ಜನರಿಗೆ ಕನ್ನಡ ಕಳಿಸಲು ಸರ್ಕಾರಿ ಸೌಮ್ಯದಲ್ಲಿ ವ್ಯವಸ್ಥೆ ಕೊಡುವುದು.
- ಪ್ರತೀ ವಾರ್ಡ್‌ನ ಜವಾಬ್ದಾರಿ ಕನ್ನಡಿಗರಿಗೇ ನೀಡುವ ಮೂಲಕ ಇಲ್ಲಿಯ ಭಾಷೆ, ಸಂಸ್ಕೃತಿ, ನೆಲ-ಜಲದ ಬಗ್ಗೆ ಗೌರವ ಸುಚಿಸುವುದು.




☛ ಚನ್ನೇಗೌಡ ಉಜ್ಜನಿ ಚಲುವಯ್ಯ

# ಪಕ್ಕೆಲುಬುಗಳ ಒತ್ತಡದಿಂದ ಎದೆನೋವು

ಕೆಲವೊಮ್ಮೆ ಎದೆಯಲ್ಲಿ ನೋವು ಕಾಣಿಸಿಕೊಳ್ಳುತ್ತದೆ ತಕ್ಷಣ ಹೃದಯಾಘಾತವಾಗಿದೆಯೋ ಎಂದು ಗಾಬರಿ ಪಡುವ ಬದಲು ಈ ನೋವು ಪಕ್ಕೆಲುಬಿನ ಸ್ನಾಯುಗಳಲ್ಲಿನ ಗಾಯ ಅಥವಾ ಒತ್ತಡದಿಂದಲೂ ಆಗಿರಬಹುದು ಎನ್ನುವುದನ್ನು ತಿಳಿಯುವುದು ಮುಖ್ಯ. ಪ್ರತಿ ಬಾರಿ ಎದೆ ನೋವು ಹೃದಯಾಘಾತದ ಎದೆನೋವು ಆಗಿರಬೇಕೆಂದೇನಿಲ್ಲ. ಕೆಲವೊಮ್ಮೆ ನಮ್ಮ ಸ್ನಾಯುಗಳಿಗೆ ಉಂಟಾಗಿರುವ ಗಾಯದಿಂದಲೂ ಎದೆ ನೋವು ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಕೆಮ್ಮುವಾಗ, ಸೀನುವಾಗ ಅಥವಾ ಯಾವುದೇ ಭಾರವಾದ ವಸ್ತುಗಳನ್ನು ಎತ್ತುವಾಗ ಎದೆನೋವು ಕಾಣಿಸಿಕೊಳ್ಳುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ, ಎದೆಯ ಎಡಭಾಗದಲ್ಲಿ ನೋವು ಕಂಡುಬರುತ್ತದೆ. ಅಂತಹ ಸಂದರ್ಭದಲ್ಲಿ ಯಾರಾದರೂ ಅದು ಹೃದಯಾಘಾತ ಲಕ್ಷಣ ಎಂದೇ ಯೋಚಿಸಿ ಆತಂಕಕ್ಕೊಳಗಾಗುತ್ತಾರೆ.

**ಇಂಟರ್ಕೋಸ್ಟಲ್ ಸ್ಟ್ರೈನ್ ಎಂದರೇನು:** ಇಂಟರ್ಕೋಸ್ಟಲ್ ಸ್ನಾಯುಗಳು ನಿಮ್ಮ ಪಕ್ಕೆಲುಬುಗಳ ನಡುವೆ ಇರುತ್ತವೆ. ಅವುಗಳನ್ನು ಒಂದಕ್ಕೊಂದು ಜೋಡಿಸುತ್ತವೆ. ಅವು ನಿಮ್ಮ ಮೇಲ್ಭಾಗದ ದೇಹವನ್ನು ಸ್ಥಿರಗೊಳಿಸಲು ನಿಮಗೆ ಉಸಿರಾಡಲು ಸಹಾಯ ಮಾಡುತ್ತವೆ. ಇಂಟರ್ಕೋಸ್ಟಲ್ ಸ್ನಾಯುಗಳಲ್ಲಿ ಮೂರು ಪದರಗಳಿವೆ, ಬಾಹ್ಯ ಇಂಟರ್ಕೋಸ್ಟಲ್‌ಗಳು, ಆಂತರಿಕ ಇಂಟರ್ಕೋಸ್ಟಲ್‌ಗಳು



ಮತ್ತು ಒಳಗಿನ ಇಂಟರ್ಕೋಸ್ಟಲ್‌ಗಳು. ಸ್ನಾಯು ಹಿಗ್ಗಿದಾಗ, ಎಳೆಯುವಾಗ ಅಥವಾ ಸ್ವಲ್ಪ ಹರಿದುಹೋದಾಗ ಸ್ಟ್ರೈನ್ ಉಂಟಾಗುತ್ತದೆ. ಇಂಟರ್ಕೋಸ್ಟಲ್ ಸ್ನಾಯುಗಳ ಯಾವುದೇ ಪದರಗಳ ಸ್ಟ್ರೈನ್ ನೋವು ಮತ್ತು ಉಸಿರಾಟದ ತೊಂದರೆಗೆ ಕಾರಣವಾಗಬಹುದು. ಸ್ನಾಯು ಸೆಳೆತವು ಎದೆನೋವಿಗೆ ಸಾಮಾನ್ಯ ಕಾರಣವಾಗಿದೆ. ಎಲ್ಲಾ ಮಸ್ಕ್ಯುಲೋಸ್ಕೆಲಿಟಲ್ ಎದೆ ನೋವಿನಲ್ಲಿ 21 ರಿಂದ 49 ಪ್ರತಿಶತದಷ್ಟು ಇಂಟರ್ಕೋಸ್ಟಲ್ ಸ್ನಾಯುಗಳಿಂದ ಬರುತ್ತದೆ.

**ಸ್ನಾಯುಗಳ ಗಾಯವೂ ಕಾರಣ:** ಆದರೆ, ಪ್ರತಿ ಬಾರಿ ಎದೆ ನೋವು ಹೃದಯದ ಸಮಸ್ಯೆಯನ್ನು ಮಾತ್ರ ಸೂಚಿಸುವುದಿಲ್ಲ ಎಂಬುವುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಇದು ಪಕ್ಕೆಲುಬುಗಳ ನಡುವಿನ ಸ್ನಾಯುಗಳ ಗಾಯದಿಂದಲೂ ಆಗಿರಬಹುದು. ಈ ಸ್ನಾಯುಗಳನ್ನು ಇಂಟರ್ಕೋಸ್ಟಲ್ ಸ್ನಾಯುಗಳು ಎಂದು ಕರೆಯಲಾಗುತ್ತದೆ. ಈ ಸ್ನಾಯುಗಳು ಪಕ್ಕೆಲುಬುಗಳಿಗೆ ಅಂಟಿಕೊಳ್ಳುತ್ತವೆ ಮತ್ತು ಎದೆಯ ಒಳಪದರವನ್ನು ರೂಪಿಸುತ್ತವೆ ಮತ್ತು ಉಸಿರಾಟಕ್ಕೆ ಸಹಾಯ ಮಾಡುತ್ತವೆ. ನಿಮ್ಮ ಇಂಟರ್ಕೋಸ್ಟಲ್ ಸ್ನಾಯುಗಳು ಯಾವುದೋ ಕಾರಣದಿಂದಾಗಿ ತಿರುಚಲ್ಪಟ್ಟಾಗ, ಅದು ನೋವನ್ನು ಉಂಟು ಮಾಡಬಹುದು. **ಇಂಟರ್ಕೋಸ್ಟಲ್ ಸ್ನಾಯುಗಳ ಒತ್ತಡಕ್ಕೆ ಕಾರಣಗಳು:**

**ಹಠಾತ್ ತಿರುಚುವುದು:** ದೇಹದ ಹಠಾತ್ ತಿರುಚುವಿಕೆ ಅಥವಾ ಜರ್ಕಿಂಗ್ ಇಂಟ ರ್ಕೋಸ್ಟಲ್ ಸ್ನಾಯುಗಳನ್ನು ಆಯಾಸಗೊಳಿಸಬಹುದು.

**ಕೆಮ್ಮುವುದು ಅಥವಾ ಸೀನುವುದು:** ನಿರಂತರ ಮತ್ತು ಬಲವಂತದ ಕೆಮ್ಮು ಅಥವಾ ಸೀನುವಿಕೆಯು ಸ್ನಾಯುಗಳ ಮೇಲೆ ಒತ್ತಡವನ್ನುಂಟು ಮಾಡುತ್ತದೆ. ಅವು ಊದಿಕೊಳ್ಳಲು ಅಥವಾ ಒತ್ತಡಕ್ಕೊಳಗಾಗಲು ಕಾರಣವಾಗಬಹುದು.

**ಭಾರವಾದ ಭಾರಗಳನ್ನು ಎತ್ತುವುದು:** ತಪ್ಪಾಗಿ ಭಾರವಾದ ತೂಕವನ್ನು ಎತ್ತುವುದರಿಂದ ದೇಹದ ಮೇಲ್ಭಾಗದ ಮೇಲೆ ಹಠಾತ್ ಒತ್ತಡ ಉಂಟಾಗುತ್ತದೆ. ಇದು ಸ್ನಾಯುಗಳಿಗೆ ಹಾನಿಯನ್ನುಂಟುಮಾಡುತ್ತದೆ.

**ಕ್ರೀಡೆ ಅಥವಾ ವ್ಯಾಯಾಮದ ಸಮಯದಲ್ಲಿ ಗಾಯ:** ಕ್ರೀಡಾಪಟುಗಳು, ವಿಶೇಷವಾಗಿ ಈಜುಗಾರರು, ಕುಸ್ತಿಪಟುಗಳು ಅಥವಾ ಕ್ರಿಕೆಟ್/ಟೆನಿಸ್ ಆಟಗಾರರು ಇಂಟರ್ಕೋಸ್ಟಲ್ ಸ್ನಾಯುವಿನ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು.

**ಕಳಪೆ ಭಂಗಿ:** ತಪ್ಪು ಭಂಗಿಯಲ್ಲಿ ಕುಳಿತುಕೊಳ್ಳುವುದು ಅಥವಾ ದೀರ್ಘ ಕಾಲ ಬಾಗಿದ ಸ್ಥಾನದಲ್ಲಿ ಕೆಲಸ ಮಾಡುವುದರಿಂದ, ಸರಿಯಾದ ಭಂಗಿಯಲ್ಲಿ ನಿದ್ದೆ ಮಾಡದೇ ಇರುವುದರಿಂದ ಸ್ನಾಯುಗಳ ಮೇಲೆ ಒತ್ತಡ ಹೆಚ್ಚಾಗುತ್ತದೆ.

**ಇಂಟರ್ಕೋಸ್ಟಲ್ ಸ್ನಾಯುವಿನ ಒತ್ತಡದ ಲಕ್ಷಣಗಳು ಯಾವುವು?**

ನೋವು: ಗಾಯದ ಸಮಯದಲ್ಲಿ ನೀವು ತೀಕ್ಷ್ಣವಾದ ನೋವನ್ನು ಅನುಭವಿಸಬಹುದು. ನೀವು ತಿರುಚಿದಾಗ, ಹಿಗ್ಗಿಸಿದಾಗ, ಆಳವಾಗಿ ಉಸಿರಾಡಿ ದಾಗ, ಕೆಮ್ಮಿದಾಗ ಅಥವಾ ಸೀನಿದಾಗ ನೋವು ಹೆಚ್ಚಾಗುತ್ತದೆ.

**ಮೃದುತ್ವ:** ನಿಮ್ಮ ಪಕ್ಕೆಲುಬುಗಳ ನಡುವಿನ ಒತ್ತಡದ ಪ್ರದೇಶದಲ್ಲಿ ಮುಟ್ಟಿದಾಗ ನೋಯುತ್ತಿರುತ್ತದೆ.

**ಉಸಿರಾಟದ ತೊಂದರೆ:** ಉಸಿರಾಡಲು ತುಂಬಾನೋವಿನಿಂದ ಕೂಡಿರುವುದರಿಂದ, ನೀವು ಸಣ್ಣದಾಗಿ ಅಥವಾ ಆಳವಾಗಿ ಉಸಿರಾಡುವುವಾಗ ಸಮಸ್ಯೆ ಉಂಟಾಗುವುದು. **ಊತ:** ಗಾಯಗೊಂಡಿರುವ ಅಥವಾ ಒತ್ತಡಕ್ಕೊಳಗಾದ ಸ್ನಾಯುಗಳು ಉಬ್ಬಿಕೊಂಡಿರುವುದು. ಪೀಡಿತ ಪಕ್ಕೆಲುಬುಗಳ ನಡುವೆ ಮತ್ತು ಸುತ್ತಲೂ ನೀವು ಸ್ವಲ್ಪ ಊತವನ್ನು ನೋಡಬಹುದು.

### ವೈದ್ಯರನ್ನು ಯಾವಾಗ ಭೇಟಿಯಾಗಬೇಕು

**ವೈದ್ಯರನ್ನು ನೋಡುವ ಸಮಯವು ಗಾಯದ ತೀವ್ರತೆಯನ್ನು ಅವಲಂಬಿಸಿರುತ್ತದೆ. ಸೌಮ್ಯವಾದ ಗಾಯವು ಕಡಿಮೆ ಮಟ್ಟದ ನೋವು ಮತ್ತು ಬಿಗಿತಕ್ಕೆ ಕಾರಣವಾಗಬಹುದು, ಅದು ಕೆಲವೇ ದಿನಗಳಲ್ಲಿ ಮಾಯವಾಗುತ್ತದೆ. ಒಂದು ವೇಳೆ ಪಕ್ಕೆಲುಬಿನ ಗಾಯದಿಂದ ಉಂಟಾಗುವ ನೋವು ತೀವ್ರವಾಗಿದ್ದರೆ, ಕೆಲವು ದಿನಗಳಿಗಿಂತ ಹೆಚ್ಚು ಕಾಲ ಇದ್ದರೆ ಅಥವಾ ನಿದ್ರೆ ಅಥವಾ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯುಂಟು ಮಾಡಿದರೆ ವೈದ್ಯರನ್ನು ಭೇಟಿ ಮಾಡುವುದು ಸೂಕ್ತ.**

# ರಾಷ್ಟ್ರ ಶಂಖನಾದ ಮಹೋತ್ಸವ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ,ಬೆಂಗಳೂರು

ಮಾನವ ಕುಲದ ಪರಮಕಲ್ಯಾಣ ಮತ್ತು ರಾಮರಾಜ್ಯದ ಸ್ಥಾಪನೆಗಾಗಿ ಕಾರ್ಯನಿರತ ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ ಇವರ 83 ನೆಯ ಜನ್ಮೋತ್ಸವ ಮತ್ತು ಸನಾತನ ಸಂಸ್ಥೆಯ ರಜತ ಮಹೋತ್ಸವ ವರ್ಷದ ಪ್ರಯುಕ್ತ ಫೊಂಡಾ ಗೋವಾದಲ್ಲಿ ಮೇ 17 ರಿಂದ 19 ರ ವರೆಗೆ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವವನ್ನು ಆಯೋಜಿಸಲಾಗಿದೆ.

ಈ ಮಹೋತ್ಸವವನ್ನು ಫರ್ಮಾಗುಡಿ, ಫೊಂಡಾ ,ಗೋವಾದಲ್ಲಿರುವ ಇಂಜಿನಿಯರಿಂಗ್ ಕಾಲೇಜಿನ ಮೈದಾನದಲ್ಲಿ ಆಯೋಜಿಸಲಾಗಿದೆ. ಈ ಉತ್ಸವದಲ್ಲಿ ಸಹಭಾಗಿ ಆಗಲು ಬೆಂಗಳೂರಿನಿಂದ 500ಕ್ಕೂ ಸನಾತನ ಸಂಸ್ಥೆಯ ಸಾಧಕರು, ಹಿಂದೂ ಧರ್ಮಪ್ರೇಮಿಗಳು ಮತ್ತು ಹಿಂದುತ್ವನಿಷ್ಠರು ಸನಾತನ ರಾಷ್ಟ್ರ ದ ಜಯ ಘೋಷದ ಜೊತೆಗೆ ವಾಹನಗಳ ಮೂಲಕ ಗೋವಾದ ಕಡೆಗೆ ಪ್ರಯಾಣ ಮಾಡಿದ್ದಾರೆ. ಎಲ್ಲಾ ಹಿಂದುತ್ವನಿಷ್ಠರು ಕೇಸರಿ ಟೋಪಿ ಧರಿಸಿದ್ದರು ಮತ್ತು ವಾಹನಗಳು/ಬಸ್ಸು/ರೈಲು/ ವಿಮಾನದ ಮೇಲೆ ಕೇಸರಿ ಧ್ವಜ ಹಾರಿಸಿರುವುದರಿಂದ ಸಂಪೂರ್ಣ ವಾತಾವರಣದಲ್ಲಿ ಚೈತನ್ಯ ಮತ್ತು ಶಕ್ತಿಯ ಸಂಚಾರ ಆಗುತ್ತಿತ್ತು.

# ಶಂಖನಾದ ಮಹೋತ್ಸವದ ನಿಮಿತ್ತ ಗೋವಾದಲ್ಲಿ ಭವ್ಯ ವಾಹನ ಜಾಥಾ

• ಉದಯವಾಹಿನಿ, ಫೊಂಡಾ (ಗೋವಾ)

ನಾಳೆಯಿಂದ ಫೊಂಡಾ, ಗೋವಾದ ಇಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ನಡೆಯಲಿರುವ 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದ ಜಾಗೃತಿಗಾಗಿ ಇಂದು ಐತಿಹಾಸಿಕ ಮತ್ತು ಭವ್ಯ ವಾಹನ ಜಾಥಾವನ್ನು ಆಯೋಜಿಸಲಾಗಿತ್ತು. ಈ ವಾಹನ ಜಾಥಾ ಫೊಂಡಾದ ಸನಾತನ ಆಶ್ರಮದಿಂದ ಫರ್ಮಾಗುಡಿಯವರೆಗೆ ಸಾಗಿತು, ಮತ್ತೊಂದೆಡೆ ದೇಶದ ಮೂಲೆಮೂಲೆಗಳಿಂದ ಮಹೋತ್ಸವಕ್ಕಾಗಿ

ಆಗಮಿಸುವ ನೂರಾರು ವಾಹನಗಳು ಪತ್ರದೇವಿ, ಕಾಣಕೋಣ ಮುಂತಾದ ಗಡಿಗಳನ್ನು ದಾಟಿ ಗೋವಾವನ್ನು ಪ್ರವೇಶಿಸಿ ಸುಸಜ್ಜಿತ ಜಾಥಾದ ಭಾಗವಾದವು. ದ್ವಿಚಕ್ರ ವಾಹನಗಳು, ನಾಲ್ಕು ಚಕ್ರ ವಾಹನಗಳು ಮತ್ತು ಬಸ್‌ಗಳ ಮೇಲೆ ಹಾರಾಡುತ್ತಿದ್ದ ಭಗವಾ ಧ್ವಜಗಳು, ಹಾಗೂ ಮೊಳಗುತ್ತಿದ್ದ ಹರ ಹರ ಮಹಾದೇವ, ಸನಾತನ ಧರ್ಮಕ್ಕೆ ಜಯವಾಗಲಿ, ಜಯತು ಜಯತು ಹಿಂದುರಾಷ್ಟ್ರಮ್' ಎಂಬ ಘೋಷಣೆಗಳಿಂದ ಇಡೀ ಗೋವಾ ಕೇಸರಿಮಯವಾಯಿತು ಈ ತೇಜೋಮಯ ಜಯ ಘೋಷಗಳು



☛ ಉದಯವಾಹಿನಿ ಚಿತ್ರ

ಕೇವಲ ರಸ್ತೆಗಳನ್ನು ಮಾತ್ರವಲ್ಲದೆ ಜನರ ಮನಸ್ಸಿನಲ್ಲಿಯೂ ತುಂಬಿ ತುಳುಕಿದವು.

ಎಲ್ಲೆಡೆ ಒಂದೇ ಸಂಚಲನ ಸನಾತನ ರಾಷ್ಟ್ರದ ಶಂಖನಾದ ಈ ಜಾಥಾವು ಸನಾತನ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಹಿಂದೂ ರಾಷ್ಟ್ರದ ಕಡೆಗೆ ಇಟ್ಟ ಮುಂದಿನ ಹೆಜ್ಜೆಯಾಗಿದೆ ಸನಾತನ ಸಂಸ್ಥೆಯ ಫೊಂಡಾದ ಸನಾತನ ಆಶ್ರಮದ ಬಳಿ ಮಾಜಿ ಭಾರತೀಯ ಆಡಳಿತ ಸೇವಾ ಅಧಿಕಾರಿ ಶ್ರೀ. ಅರುಣ ದೇಸಾಯಿ ಅವರಿಂದ ಧರ್ಮಧ್ವಜ ಪೂಜೆಯ ನಂತರವಾಹನ ಜಾಥಾ ಪ್ರಾರಂಭವಾಯಿತು. ಈ ವಾಹನ ಜಾಥಾವು ಮುಂದೆ ಕವಳೆ –ತಿಸ್ಕ ಫೊಂಡಾ, ಶಾಂತಿನಗರ ಜಂಕ್ಷನ್, ಗೋವಾ ಬಾಗಾಯತದಾರ, ಫೊಂಡಾ ಪೋಸ್ಟ್ ಆಫೀಸ್ ಕಚೇರಿ–ಫೊಂಡಾದ ಹಳೆಯ ಬಸ್ ನಿಲ್ದಾಣ– ಶ್ರೀ ಹನುಮಾನ್ ದೇವಸ್ಥಾನ, ಕುರ್ಟಿ–ಫರ್ಮಾಗುಡಿಯ ಕೋಟೆಯ ಬಳಿ ಮುಕ್ತಾಯವಾಯಿತು.

ಇದಕ್ಕೂ ಮುನ್ನ ವಿವಿಧ ಸ್ಥಳಗಳಲ್ಲಿ ಸುಮಂಗಲಿಯರು ಧರ್ಮಧ್ವಜಕ್ಕೆ ಆರತಿ ಬೆಳಗಿ ಮತ್ತು ರಸ್ತೆಯಲ್ಲಿ ರಂಗೋಲಿ ಹಾಕಿ ಜಾಥಾವನ್ನು ಸ್ವಾಗತಿಸಿದರು. ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳು ಭಾಗವಹಿಸಿದ್ದವು.

**ಸಾವಿರಾರು ಭಕ್ತರ ಸ್ವಯಂಪ್ರೇರಿತ ಸಹಭಾಗ !**

**ವಾಹನ ಜಾಥಾ ಎಂದರೆ ಭಕ್ತಿಯ ದಿವ್ಯ ಯಾತ್ರೆ– ಅಭಯ ವರ್ತಕ, ವಕ್ತಾರರು, ಸನಾತನ ಸಂಸ್ಥೆ:** ವಾಹನ ಜಾಥಾದ ಆರಂಭದಲ್ಲಿ ಸನಾತನ ಸಂಸ್ಥೆಯ ವಕ್ತಾರರಾದ ಶ್ರೀ. ಅಭಯ ವರ್ತಕ ಅವರು ಮಾತನಾಡಿ,ಯಾವ ರೀತಿ ಆಷಾಢ ಏಕಾದಶಿಯ ವಾರಿಗೆ ಲಕ್ಷಾಂತರ ವಾರಕರು ವಿಠ್ಠಲನ ಭೇಟಿಯ ಆಸೆಯಿಂದ ಪಂಢರಪುರಕ್ಕೆ ಪ್ರಯಾಣ ಬೆಳೆಸುತ್ತಾರೋ, ಅದೇ ರೀತಿ ಸನಾತನ ಧರ್ಮಕ್ಕಾಗಿ ವಿಶ್ವವ್ಯಾಪಿ ಕಾರ್ಯ ಮಾಡುತ್ತಿರುವ ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆಯವರ 83ನೇ ಜನ್ಮೋತ್ಸವಕ್ಕಾಗಿ ದೇಶವಿದೇಶಗಳಿಂದ ಸಾವಿರಾರು ಸಾಧಕರು ಮತ್ತು

ಧರ್ಮಪ್ರೇಮಿ ಹಿಂದೂಗಳು ವಿವಿಧ ಮಾರ್ಗಗಳ ಮೂಲಕ ಇಂದು ಗೋವಾದ ಪಂಢರಿಗೆ ಪ್ರವೇಶಿಸಿದ್ದಾರೆ. ಇದು ಕೇವಲ ವಾಹನ ಜಾಥಾ ಅಲ್ಲ, ಶ್ರೀ ಗುರುದೇವರ ಮೇಲಿನ ಭಕ್ತಿಯ ದಿವ್ಯ ಯಾತ್ರೆಯಾಗಿದೆ. ಪತ್ರಕರ್ತರು, ಪೊಲೀಸರು ಮುಂತಾದವರು ನೀಡಿದ ಮಾಹಿತಿಯ ಪ್ರಕಾರ ಇದು ಗೋವಾದಲ್ಲಿ ಇದುವರೆಗಿನ ಅತಿದೊಡ್ಡ ಮಹೋತ್ಸವ ಇದಾಗಿದೆ. ಈ ಮಹೋತ್ಸವದ ಹೆಚ್ಚಿನ ಮಾಹಿತಿಗಾಗಿ, ಹಾಗೂ ನೇರ ಪ್ರಸಾರವನ್ನು ವೀಕ್ಷಿಸಲು SanatanRashtraShankhnad.in ಈ ವೆಬ್‌ಸೈಟ್‌ಗೆ ಭೇಟಿ ನೀಡಿ!

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಮನರಂಜನೆ ಮತ್ತು ಮೋಜಿನ ಒಂದು ದಿನ. ನಿಮ್ಮ ಹಿಂದಿನ ಸಾಲವನ್ನು ಇಂದಿನ ವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಇಂದು ಸಾಲ ಕೊಡಬಾರದು.

**ವೃಷಭ** ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ.

**ಮಿಥುನ** ಸ್ನೇಹಿತರೊಂದಿಗಿನ ಸಂಜೆ ಆನಂದ ಹಾಗೂ ಕೆಲವು ರಜಾ ಯೋಜನೆಗಳಿಗೆ ಉತ್ತಮವಾಗಿರುತ್ತದೆ. ಹರ್ಷಚಿತ್ತದಿಂದಿರಿ ಹಾಗೂ ಪ್ರೀತಿಯಲ್ಲಿನ ಏಳುಬೀಳುಗಳನ್ನು ಎದುರಿಸುವ ಧೈರ್ಯ ಹೊಂದಿರಿ.

**ಕರ್ಕಾಟಕ** ನೀವು ಹಾಗೆ ಮಾಡಬಾರದು. ಅದನ್ನು ತೊಂದರೆ ಇನ್ನಷ್ಟು ಹೆಚ್ಚಾಗುತ್ತದೆ ಕಡಿಮೆಯಾಗುವುದಿಲ್ಲ. ಅನಿರೀಕ್ಷಿತ ಪ್ರಣಯ ಪ್ರಸಂಗಗಳು ನಿಮ್ಮ ಚೈತನ್ಯವನ್ನು ವೃದ್ಧಿಸುತ್ತದೆ.

**ಸಿಂಹ** ತಂದೆಯು ನಿಮ್ಮನ್ನು ಆಸ್ತಿಯ ಉತ್ತರಾಧಿಕಾರಿತ್ವದಿಂದ ತಪ್ಪಿಸಬಹುದು. ಆದರೆ ಧೃತಿಗೆಡಬೇಡಿ. ಅಭ್ಯುದಯ ಮನಸ್ಸಿಗೆ ಮುದ ನೀಡಿದರೆ ಅಭಾವ ಅದನ್ನು ಬಲಗೊಳಿಸುತ್ತದೆಂದು ನೆನಪಿಡಿ.

**ಕನ್ಯಾ** ಕೆಲಸದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ಸ್ವಲ್ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಗೃಹಪ್ರವೇಶಕ್ಕೆ ಮಂಗಳಕರ ದಿನ.

**ತುಲಾ** ಫಿಟ್ ನೆಸ್ ಮತ್ತು ತೂಕ ನಷ್ಟ ಕಾರ್ಯಕ್ರಮಗಳು ನೀವು ಒಳ್ಳೆಯ ದೇಹರಚನೆ ಹೊಂದಲು ಸಹಾಯ ಮಾಡುತ್ತದೆ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ.

**ವೃಶ್ಚಿಕ** ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ.

**ಧನಸ್ಸು** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಯಾತ್ರೆಯಲ್ಲಿ ಹೋಗುತ್ತಿದ್ದರೆ ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಕಡಿಯುವ ಸಧ್ಯತೆ ಇದೆ.

**ಮಕರ** ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನಿಮ್ಮ ಯಾವುದೇ ಹಳೆಯ ಸ್ನೇಹಿತ ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು.

**ಕುಂಭ** ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ, ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

**ಮೀನ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ.

---

### • ಪೊಲೀಸ್ ಕವಾಯತು ಮೈದಾನದಲ್ಲಿ ಅಪರೇಷನ್ ಅಭ್ಯಾಸ್ ನಾಗರೀಕ ಸುರಕ್ಷಾ ಅಣಕು ಪ್ರದರ್ಶನ

# ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಸಾರ್ವಜನಿಕರಲ್ಲಿ ಅರಿವು ಅಗತ್ಯ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ರೆಡ್‌ಕ್ರಾಸ್ ಸೇರಿದಂತೆ ವಿವಿಧ ಇಲಾಖೆ ಹಾಗೂ ಸಂಸ್ಥೆಗಳ ಸಹಯೋಗದೊಂದಿಗೆ, ತುರ್ತು ಸಂದರ್ಭದಲ್ಲಿ ಸಾರ್ವಜನಿಕರ ಸಂರಕ್ಷಣೆ ಮಾಡುವ ಕುರಿತು ''ಅಪರೇಷನ್ ಅಭ್ಯಾಸ್'' ನಾಗರೀಕ ಸುರಕ್ಷಾ ಅಣಕು ಪ್ರದರ್ಶನ ನಡೆಸಲಾಯಿತು.

ಬಾಂಬ್ ಸ್ಫೋಟ, ಅಗ್ನಿ ಅವಘಡದಿಂದ ಉಂಟಾಗುವ ಅಪಾಯದ ಸನ್ನಿವೇಶವನ್ನು ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಸೃಷ್ಟಿಸಲಾಗಿತ್ತು. ಮೈದಾನದಲ್ಲಿ ಬಾಂಬ್ ಸ್ಫೋಟಗೊಂಡ ಕೂಡಲೆ, ಅಲ್ಲಿ ನೆರೆದಿದ್ದ ಸಾರ್ವಜನಿಕರು, ಅಂಗಡಿ ಕಾರರು ಕೆಳಕ್ಕೆ ಬಿದ್ದು, ನರಳಾಡುತ್ತಿದ್ದ ದೃಶ್ಯವನ್ನು ಸೃಷ್ಟಿಸಲಾಯಿತು.

ಬಾಂಬ್ ಸ್ಫೋಟದ ಶಬ್ಧ ಕೇಳಿ ಬಂದ ತಕ್ಷಣ ಸೈರನ್ ಮೊಳಗಿತು. ಕಂಟ್ರೋಲ್ ರೂಂಗೆ ಮಾಹಿತಿ ರವಾನಿಸಲಾಯಿತು. ಶ್ವಾನದಳದೊಂದಿಗೆ ಆಗ ಮಿಸಿದ ಬಾಂಬ್ ನಿಷ್ಕ್ರೀಯ ದಳ ಪೊಲೀಸ್ ಕವಾಯತು ಮೈದಾನದ ವಿವಿಧೆಡೆ ಪರಿಶೀಲನೆ ಆರಂಭಿಸಿತು. ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ಆರೋಗ್ಯ ಇಲಾಖೆ, ರೆಡ್‌ಕ್ರಾಸ್ ಸಂಸ್ಥೆಯ ತಂಡದ ಸದಸ್ಯರು ಗಾಯಾಳುಗಳ ರಕ್ಷಣಾ ಕಾರ್ಯಕ್ಕೆ ಧಾವಿಸಿದರು. ವೈದ್ಯಕೀಯ ತಂಡ ಸ್ಥಳದಲ್ಲಿಯೇ ತುರ್ತು ಚಿಕಿತ್ಸೆ ಆರಂಭಿಸಿತು.



ಉದಯವಾಹಿನಿ ಚಿತ್ರ

#### ಪ್ರಾತ್ಯಕ್ಷಿಕೆ ಮೂಲಕ ಪ್ರದರ್ಶನ

**ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಅಧಿಕಾರಿ ಸೋಮಶೇಖರ್ ಅವರ ನೇತೃತ್ವದಲ್ಲಿ, ಅಗ್ನಿ ಅವಘಡ ಸಂದರ್ಭಗಳಲ್ಲಿ ಸಾರ್ವಜನಿಕರು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು, ಬೆಂಕಿ ನಂದಿಸುವ ಬಗೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕೈಗೊಳ್ಳುವ ಕಾರ್ಯಾಚರಣೆಯನ್ನು ಪ್ರಾತ್ಯಕ್ಷಿಕೆ ಮೂಲಕ ಪ್ರದರ್ಶಿಸಿದರು, ಅಲ್ಲದೆ ಯಾವುದೇ ಅಗ್ನಿ ಅವಘಡ ಸಂದರ್ಭದಲ್ಲಿ ತುರ್ತು ಸ್ಪಂದನೆಗಾಗಿ 101 ಅಥವಾ 112 ಕ್ಕೆ ಕರೆ ಮಾಡುವಂತೆ ಮನವಿ ಮಾಡಿದರು.**

> **ರಾಷ್ಟ್ರೀಯ ತುರ್ತು ಪರಿಸ್ಥಿತಿ ಮತ್ತು ವಿಕೋಪಗಳಿಂದ ಉಂಟಾಗುವ ಸಂದರ್ಭವನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಇಂತಹ ಸಂದರ್ಭಗಳಲ್ಲಿ ಕಡಿಮೆ ಸಮಯದಲ್ಲಿ ತುರ್ತಾಗಿ ಸ್ಪಂದನೆ ದೊರಕುವಂತಾಗಲು ಜನರಲ್ಲಿ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯ. ತುರ್ತು ಸಂದರ್ಭದಲ್ಲಿ ಜನರು ಗಾಬರಿಯಾಗದೇ ವಿವೇಚನೆಯಿಂದ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ನಾಗರೀಕರಲ್ಲಿ ಜಾಗೃತಿ ಮೂಡಿಸುವುದು ಪ್ರಮುಖ ಉದ್ದೇಶವಾಗಿದೆ - ಬಿ.ಟಿ. ಕುಮಾರಸ್ವಾಮಿ, ಅಪರ ಜಿಲ್ಲಾಧಿಕಾರಿ**


ಉದಯವಾಹಿನಿ ಚಿತ್ರ


ಉದಯವಾಹಿನಿ ಚಿತ್ರ

ಪೊಲೀಸ್ ಇಲಾಖೆಯ ವಿಧ್ವಂಸಕ ತಡೆ ರಕ್ಷಣಾ ದಳ ಎಎಸ್‌ಸಿ ತಂಡ ಮತ್ತು ಶ್ವಾನದಳ ತಪಾಸಣೆ, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯಗೊಳಿಸುವ ತಂಡ, ಜಿಲ್ಲಾ ವಿಶೇಷ ಶಸ್ತ್ರಾಸ್ತ್ರ ಮತ್ತು ತಂತ್ರಗಳ ತಂಡ, ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ, ಬೆಂಗಾವಲು ವಾಹನಗಳ ನಿಯೋಜನೆ, ಜೀರೋ ಟ್ರಾಫಿಕ್, ತಂಡಗಳು ಯೋಜಿತ ರೀತಿಯಲ್ಲಿ ಕಾರ್ಯನಿರ್ವಹಿಸಿದವು.

**ತುರ್ತು ಸಂದರ್ಭದಲ್ಲಿ ರಕ್ಷಣಾ ಕಾರ್ಯ**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ತುರ್ತು ಸೇವೆಗಳು ಇಲಾಖೆಯು ಸ್ಥಳೀಯ ವಿಕೋಪ ಸ್ಪಂದನಾ ತಂಡದ ಸಹಾಯದೊಂದಿಗೆ ತುರ್ತಾಗಿ ಸ್ಪಂದಿಸಿ, ಪೊಲೀಸ್ ಇಲಾಖೆ, ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ತುರ್ತು ವೈದ್ಯಕೀಯ ಸೇವೆ ಸಹಯೋಗದೊಂದಿಗೆ ತುರ್ತು ಕಾರ್ಯ ನಿರ್ವಹಿಸಿದರು.

ರೆಡ್ ಕ್ರಾಸ್ ಸಂಸ್ಥೆಯಿಂದ ಇದೇ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಗೆ ಪ್ರಥಮ ಚಿಕಿತ್ಸಾ ಕಿಟ್ ಹಾಗೂ ಮಾಸ್ಕ್‌ಗಳನ್ನು ವಿತರಿಸಲಾಯಿತು.

ಅಣಕು ಪ್ರದರ್ಶನದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಡಿವೈಎಸ್‌ಪಿ ಪಿ.ಕೆ. ದಿನಕರ್, ಜಿಲ್ಲಾ ಸಶಸ್ತ್ರ ಮೀಸಲು ಪಡೆ ಡಿವೈಎಸ್‌ಪಿ ಶ್ರೀನಿವಾಸ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಜಿ.ಪಿ.ರೇಣುಪ್ರಸಾದ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಸೋಮಶೇಖರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಡಿಯುಡಿಸಿ ಯೋಜನಾ ನಿರ್ದೇಶಕ ಮಹೇಂದ್ರ ಕುಮಾರ್, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಎನ್‌ಸಿಸಿ, ಭಾರತೀಯ ರೆಡ್‌ಕ್ರಾಸ್ ಜಿಲ್ಲಾ ಶಾಖೆಯ ಅನಂತ ರೆಡ್ಡಿ, ಅರುಣ್‌ಕುಮಾರ್, ಮಹಜರ್ ಉಲ್ಲಾ ಸೇರಿದಂತೆ ವಿವಿಧ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಇದ್ದರು.

---

## ಕಳ್ಳತನ ಪ್ರಕರಣದ: ಆರೋಪಿಗಳ ಹೆಡೆ ಮುರಿ ಕಟ್ಟಿದ ಶಾಂತಿವೀರ

• ಉದಯವಾಹಿನಿ ರಾಯಚೂರು

ಕಳ್ಳತನ ಮಾಡಿ ತಲೆಮರೆ ಸಿಕೊಂಡಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿ ಚಿನ್ನಾ ಆಭರಣಗಳು ವಶಕ್ಕೆ ಯಂಕಣ್ಣ ರಂಗಾ ಅವರು ಏ17ರಂದು ಮನೆಯಲ್ಲಿ ಇರದ ಕಾರಣ ಕಳ್ಳರು ಮನೆ ಬಾಗಿಲು ಮುರಿದು ಮನೆಯಲ್ಲಿ ಇದ್ದ 76 ಬಂಗಾರ 382 ಗ್ರಾಂ ಬೆಳ್ಳಿ ಅ. ಕಿ. ರೂ 3.69.207 ಕಳ್ಳತನ ಆಗಿದೆ ಎಂದು ಏಪ್ರಿಲ್ 21ರಂದು ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕಲಂ 331 (3) 331 (4) 305 ಬಿ ಎನ್ ಎಸ್ ಅಡಿಯಲ್ಲಿಪ್ರಕರಣ ದಾಖಲು ಮಾಡಿದ್ದಾರೆ.

ಈ ಪ್ರಕರಣ ಗಂಭೀರವಾಗಿ ಪರಿಗಣಿಸಿದ ರಾಯಚೂರು ಎಸ್ ಪಿ.ಎಂ.ಪುಟ್ಟಮಾದಯ್ಯ ಅವರ ಮಾರ್ಗದರ್ಶನದಲ್ಲಿ ಜಿ ಹರೀಶ್ ಹೆಚ್ಚುವರಿ ಪೊಲೀಸ್ ಅಧಿಕ್ಷಕರು ಹಾಗೂ ಶಾಂತವೀರ ಈ. ಪೊಲೀಸ್ ಉಪಾಅಧಿಕ್ಷಕರು ಮೇಲ್ವಿಚಾರಣೆಯಲ್ಲಿ ಸಾಬಯ್ಯ ಸಿಪಿಐ ಗ್ರಾಮೀಣ ವೃತ್ತ ಪ್ರಕಾಶ್ ರೆಡ್ಡಿ ಡಂಬಳ್ ಪಿಎಸ್‌ಐ (ಕಾಸು) ನೇತೃತ್ವದಲ್ಲಿ ಚಕ್ರವ್ಯೂಹ ಭೇದಿಸಿ ಕಳ್ಳರ ಹೆಡ್ ಮುರಿ ಕಟ್ಟಿದ್ದಾರೆ

ವಶಕ್ಕೆ ಪಡೆದ ಆರೋಪಿಗಳಿಂದ 76 ಗ್ರಾಂ ಬಂಗಾರ ಆಭರಣಗಳು 382 ಗ್ರಾಮ ಬೆಳ್ಳಿ ಆಭರಣಗಳು ರೂ. 7.66.272 ಹಾಗೂ ಎರಡು ಕೈ ಗಡಿಯಾರ ರೂ. 13000 ಹಾಗೂ ಸೋನಿ ಕ್ಯಾಮೆರಾ. ಅ ಕಿ ರೂ. 10000 ಒಟ್ಟು ಏಳು ಲಕ್ಷ 89,272 ವಶಕ್ಕೆ ಪಡೆದುಕೊಂಡಿದ್ದಾರೆ.



ಉದಯವಾಹಿನಿ ಚಿತ್ರ

ಆರೋಪಿತರಾದ ಚಂದ್ರ ಬಂಡ ಹಾಗೂ ತನ್ನ ಸಂಬಂಧಿಯಾದ ಮಹೇಶ್ ನಾಯಕ್ ಕಳ್ಳತನವನ್ನು ಒಪ್ಪಿಕೊಂಡಿರುತ್ತಾರೆ. ಈರೇಶ್. ವೀರೇಶ್ ತಂದೆ ಯಂಕಪ್ಪ. ಗಾರೆ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಈ ಪ್ರಕರಣ ಅಲ್ಲದೆ ಸಿಂಧನೂರು ಮಾನವಿ ಹಾಗೂ ಗೊಬ್ಬುರ್ ಕಳ್ಳತನನ್ನು ಕೂಡ ಒಪ್ಪಿಕೊಂಡಿರುತ್ತಾರೆ. ಈ ಪ್ರಕರಣದ ಆರೋಪಿತರ ಪತ್ತೆಯಲ್ಲಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪೊಲೀಸ್ ಸಿಬ್ಬಂದಿಗಳಾದ ಅಮರೇಶ ಭಾಸ್ಕರ ಮಹಿಬೂಬ್ ಶಿವಪ್ಪ ಆನಂದ್ ವಿರೂಪಾಕ್ಷಯ್ಯ ಶಾಂತಪ್ಪ ಕುಮಾರ್ ನಾಗೇಂದ್ರ ಮಹೇಶ್ವರ ರೆಡ್ಡಿ ಅಜೀಮ್ ಚಕ್ರವ್ಯೂಹ ಪೊಲೀಸ್ ಸಿಬ್ಬಂದಿಗಳಿಗೆ ಹಿರಿಯ ಅಧಿಕಾರಿಗಳಿಂದ ಪ್ರಶಂಸೆ.

---

## ಯೋಜನೆಗಳ ಬಗ್ಗೆ ಮಾಹಿತಿ

• ಉದಯವಾಹಿನಿ ಕಲಬುರಗಿ

ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯ ಜನ ಜಾಗೃತಿ ಅಭಿಯಾನದಡಿ ಕಮಲಾಪುರ ತಾಲ್ಲೂಕಿನ ಮಹಾಗಾಂವ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಹಾಗಾಂವ ವಾಡಿಯಲ್ಲಿ ಉದ್ಯೋಗ ಖಾತ್ರಿಯ ಕಾರ್ಮಿಕರು ನಾಲ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಗಳ ಬಗ್ಗೆ ಎಸ್‌ಬಿಐ ಆರ್ಥಿಕ ಸಾಕ್ಷರತಾ ಪ್ರಸಾರಕ ಸಚಿನ ಅವರು ಉದ್ಯೋಗ ಖಾತ್ರಿಯ ಕಾರ್ಮಿಕರಿಗೆ ಮಾಹಿತಿ ನೀಡಿದರು. ಹಾಗೆ 100 ಜನ ಕೂಲಿ ಕಾರ್ಮಿಕರಿಗೆ ಪಾಲಸಿ ಮಾಡಲು ದಾಖಲಾತಿಗಳನ್ನು ತೆಗೆದುಕೊಳ್ಳಲಾಯಿತು. ತಾಲ್ಲೂಕ ಐಇಸಿ ಕೋಆಡಿನೇಟರ ಗಿರೀಶ ಇಂಡಿ ಕೂಲಿ ಕಾರ್ಮಿಕರಿಗೆ ಉದ್ಯೋಗ ಖಾತ್ರಿಯಲ್ಲಿ, ಒಂದು ದಿನದ ಕೂಲಿ ಏರಿಕೆ ಮತ್ತು ಉದ್ಯೋಗ ಖಾತ್ರಿಯ ಏಕೀಕೃತ ಸಹಾಯವಾಣಿ ಬಗ್ಗೆ ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

---


## ಶುದ್ಧ ನೀರು ಒದಗಿಸುವಂತೆ ಗ್ರಾಮಸ್ಥರ ಪ್ರತಿಭಟನೆ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಕನಕಪುರ ಗ್ರಾಮದಲ್ಲಿ ಸಾರ್ವಜನಿಕರಿಗೆ ಶುದ್ಧವಾದ ಕುಡಿಯುವ ನೀರು ಸಿಗುತ್ತಿಲ್ಲವೆಂದು ಅನೇಕ ಬಾರಿ ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಜೈ ಕನ್ನಡಿಗರ ಸೇನೆಯಿಂದ ರಸ್ತೆ ತಡೆದು ಪ್ರತಿಭಟನೆ ನಡೆಸಿ ಪಿಡಿಓ ಪವನಕುಮಾರ ಮೇತ್ರಿ ಅವರಿಗೆ ಮನವಿಪತ್ರ ಸಲ್ಲಿಸಲಾಯಿತು ಎಂದು ಜೈ ಕನ್ನಡಿಗರ ಸೇನೆ ಅಧ್ಯಕ್ಷ ಭಾಗ್ಯವಂತ ಶಾರದ ಹೇಳಿದರು.

ತದನಂತರ ಮಾತನಾಡಿದ ಗ್ರಾಮಸ್ಥರು ಮನವಿ ಸ್ವೀಕರಿಸಿದ ಅಧಿಕಾರಿಗಳು ವಾರದಲ್ಲಿ ಶುದ್ಧ ಕುಡಿಯುವ ನೀರು ಕೊಡಲಾಗುವುದು ಎಂದು ಹೇಳಿದ್ದಾರೆ ಒಂದು ವೇಳೆ ನೀರು ಕೊಡದೆ ಇದ್ದಲ್ಲಿ ರಾಜ್ಯ ಹೆದ್ದಾರಿ ತಡೆದು ಬೃಹತ್ ಪ್ರತಿಭಟನೆ ಮಾಡಲಾಗುವುದು.

ಮುಲ್ಲಾಮಾರಿ ನದಿಯ ದಂಡೆಯಲ್ಲಿ ಇರುವ ಗ್ರಾಮದಲ್ಲಿ ಜನರಿಗೆ ಕುಡಿಯುವ ನೀರು ಸಿಗದೆ ಜನರು ಹೋರಾಟ ಮಾಡುತ್ತಿದರೆ ನದಿಯಿಂದ ದೂರವಿರುವ ಗ್ರಾಮಗಳ ಪರಿಸ್ಥಿತಿ ಹೇಗಿದೆ ಎಂಬುವುದು ವಿಚಾರ ಮಾಡಬೇಕಾಗಿದೆ, ಗ್ರಾಮದಲ್ಲಿ ಕುಡಿಯುವ ನೀರು ಮೂಲಭೂತ ಸೌಕರ್ಯಗಳಾದ ಸಿಸಿರಸ್ತೆ,ಚರಂಡಿ,ಬೀದಿ ದೀಪ,ಸಮಸ್ಯೆಗಳಿಗೆ ಶೀಘ್ರದಲ್ಲೇ ಅಧಿಕಾರಿಗಳು ಪರಿಹಾರ ನೀಡಬೇಕು ಎಂದು ಜೈ ಕನ್ನಡಿಗರ ಸೇನೆಯ ಅಧ್ಯಕ್ಷ ಭಾಗ್ಯವಂತ ಶಾರದ ಹೇಳಿದರು.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಜೈ ಕನ್ನಡಿಗರ ಸೇನೆ ಯುವ ಅಧ್ಯಕ್ಷ ನಂದಕುಮಾರ ಬಿರಾದಾರ, ಜಗಪ್ಪ ಮೈತ್ರಿ, ನಾಗಪ್ಪ ಮೇತ್ರಿ, ಉಮೇಶ ಚೆನ್ನೂರು, ಸತೀಶ್ ವಗ್ಗಿ, ಮಲ್ಲೇಶ,ಅರುಣಮ್ಮ ಶಾರದ, ಬಕ್ಕಮ್ಮ ವಗ್ಗಿ, ಶಿವು ತಳವಾರ,ನಂದು ತಳವಾರ, ಜಾಫರ ಬಳಗಾರ, ಸಂಜು ಹೇಳ್ಳೂರ, ಅರುಣಕುಮಾರ ವಗ್ಗಿ,ಅನೇಕರಿದ್ದರು.

---

## ರೈಲ್ವೆಯ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಸನ್ಮಾನ


ಉದಯವಾಹಿನಿ ಚಿತ್ರ

• ಉದಯವಾಹಿನಿ ಮುದ್ದೇಬಿಹಾಳ

ಈ ಭಾಗದ ದಶಕಗಳ ಬೇಡಿಕೆಯಾಗಿದ್ದ ಆಲಮಟ್ಟಿ -ಮುದ್ದೇಬಿಹಾಳ-ತಾಳಿಕೋಟೆ-ಹುಣಚಗಿ- ಸುರಪೂರ-ಯಾದಗಿರಿ ನೂತನ ರೈಲು ಮಾರ್ಗ ಅನುಷ್ಠಾನಕ್ಕಾಗಿ ಅಂತಿಮ ಸಮೀಕ್ಷೆಗೆ ಆದೇಶ ಹೊರಡಿಸಿದ್ದನ್ನು ಶ್ಲಾಘಿಸಿ ಇಲ್ಲಿನ ರೈಲ್ವೆ ಹೋರಾಟಗಾರರ ಪ್ರತಿನಿಧಿಗಳು ಕೊಪ್ಪಳ ಜಿಲ್ಲೆ ಕುಷ್ಟಗಿಗೆ ತೆರಳಿ ಹೊಸ ರೈಲು ಮಾರ್ಗ ಉದ್ಘಾಟನೆಗೆ ಆಗಮಿಸಿದ್ದ ಕೇಂದ್ರ ರೈಲ್ವೆಯ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಸನ್ಮಾನಿಸಿ ಅಭಿನಂದಿಸಿದರು. ಪ್ರತಿನಿಧಿಗಳ ತಂಡದ ನೇತೃತ್ವ ವಹಿಸಿದ್ದ ಕಿರಣರಾಜ್ ಪಾಟೀಲ ಅವರು ಕುಷ್ಟಗಿಯಿಂದಲೇ ಮೋಬೈಲ್ ಮೂಲಕ ಪತ್ರಿಕೆಯೊಂದಿಗೆ ಮಾತನಾಡಿ, ನಮ್ಮ ಹೋರಾಟಕ್ಕೆ ಸ್ಪಂದಿಸಿ ಆಲಮಟ್ಟಿ -ಯಾದಗಿರಿ ಮಾರ್ಗದ ಅಂತಿಮ ಸಮೀಕ್ಷೆ ಶೀಘ್ರ, ಪೂರ್ಣಗೊಳಿಸಿ ಹೊಸ ಮಾರ್ಗ ಅನುಷ್ಠಾನ ಕಾಮಗಾರಿ ಪ್ರಾರಂಭಿಸುವಂತೆ ಸಚಿವರಿಗೆ ಮನವಿ ಮಾಡಲಾಯಿತು.

ಸ್ಪಂಧಿಸಿದ ಸಚಿವರು ನಿಮ್ಮ ಬೇಡಿಕೆಯಂತೆ ಈಗ ಸಮೀಕ್ಷೆ ಪ್ರಾರಂಭಗೊಳ್ಳಲಿದೆ. ಸಮೀಕ್ಷೆಯ ವರದಿ ಬಂದ ನಂತರ ಶೀಘ್ರ ಅನುಷ್ಠಾನಕ್ಕೆ ಯೋಜನೆ ರೂಪಿಸಲಾಗುತ್ತದೆ ಎಂದು ಭರವಸೆ ನೀಡಿದ್ದಾಗಿ ತಿಳಿಸಿದರು. ಅರವಿಂದ ಲದ್ದಿಮಠ, ಶಿವನಗೌಡ ಪಾಟೀಲ, ಪುಂಡಲೀಕ ಹಡಲಗೇರಿ, ಜಯಪ್ರಕಾಶ ಉಪನಾಳ ಇನ್ನಿತರರು ಇದ್ದರು.

---


ಉದಯವಾಹಿನಿ ಚಿತ್ರ

## ಕರುಣೆ, ಮೈತ್ರಿ, ಪ್ರೇಮ ತುಂಬಿದ ಬದುಕು ನಡೆಸಲು ಕರೆ

• ಉದಯವಾಹಿನಿ ಬಾಗಲಕೋಟೆ

ಬುದ್ಧನ ವಸ್ತುನಿಷ್ಠ ಚರಿತ್ರೆಯನ್ನು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಜಗತ್ತಿಗೆ ಸಾರುವಲ್ಲಿ ತಮ್ಮ ಅಧ್ಯಯನ ನಿಷ್ಠೆಯನ್ನು ತೋರಿದ್ದಾರೆ. ಇಂತಹ ವಸ್ತುನಿಷ್ಠ ಚರಿತ್ರೆಗಳಿಗೆ ನಾವು ಮರಳುವುದು ಮತ್ತು ಬುದ್ಧ ಪ್ರತಿಪಾದಿಸಿದ ಕರುಣೆ, ಮೈತ್ರಿ, ಪ್ರೇಮ ತುಂಬಿದ ಬದುಕನ್ನು ನಡೆಯುವುದು ಬುದ್ಧನನ್ನು ಉಳಿಸಿಕೊಳ್ಳುವ ಅಂದರೆ ನಮ್ಮನ್ನು ನಾವು ದುಃಖ, ತಲ್ಲಣಗಳಿಂದ ಬಿಡುಗಡೆ ಗೊಳಿಸಿಕೊಳ್ಳುವ ದಾರಿಯೇ ಆಗಬಲ್ಲದು ಎಂದು ಜಮಖಂಡಿಯ ನ್ಯಾಯವಾದಿ ಎನ್.ಬಿ.ಗಸ್ತಿ ಅಭಿಪ್ರಾಯಪಟ್ಟರು.

> **ಅದ್ಯಕ್ಷತೆವಹಿಸಿದ್ದ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಪ್ರೇಮನಾಥ ಗರಸಂಗಿ ಮಾತನಾಡಿ ಮನುಷ್ಯ ಜೀವನದ ಪ್ರತಿ ಸಂದರ್ಭದಲ್ಲೂ ಬುದ್ಧನನ್ನು ಕಾಣುವ ಅಥವಾ ಅವನೇ ಎದುರಾಗುವ ಸಂದರ್ಭಗಳನ್ನು ನೋಡುತ್ತಿದ್ದರೆ ಬುದ್ಧಗುರುವಿನ ಹೊಳಪು ಕಣ್ಣ ಕೋರೈಸಿ ಅರಿವಿನ ದೀಪವನ್ನು ಹಚ್ಚುವ ಕಾಲಕ್ಕೆ ನಾವು ಮರುಳುತ್ತಿದ್ದೇವೆಯೋ ಎಂದು ಅನಿಸುತ್ತದೆ. ಇಷ್ಟೊಂದು ಪ್ರಭಾವಿಸಿದ, ಎಚ್ಚರಿಸುವ, ಎಲ್ಲರೊಳಗೂ ಕರಗಿ ಹೆಪ್ಪಾಗುವ ಈ ಬುದ್ಧ ಯಾರು? ಯಾಕಾಗಿ ಈ ರೂಪವನ್ನು ಕಣ್ಣ ಮುಂದಿರಿಸಿಕೊಳ್ಳಬೇಕು ಎಂದು ಹುಡುಕಾಟ ನಡೆಸಿದರೆ ಹುಡುಕ ಹೊರಟವರ ಎದೆಯೊಳಗೆ ಬುದ್ಧನೊಬ್ಬ ಮಿಸುಕಾಡುವುದು ಸ್ಪರ್ಶಕ್ಕೆ ದಕ್ಕುತ್ತದೆ -ಎನ್.ಬಿ.ಗಸ್ತಿ, ನ್ಯಾಯವಾದಿ**

ನವನಗರದ 71ಸೇಕ್ಟರ್‌ನಲ್ಲಿ ಬೌದ್ಧ ವಿಹಾರ ನಿರ್ಮಾಣ ಸಂಸ್ಥೆ ಹಮ್ಮಿಕೊಂಡಿದ್ದ ಬುದ್ಧರ 5269 ರ ಜಯಂತಿ ಉತ್ಸವದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು. ಬುದ್ಧ ಕೆಲವರಿಗೆ ಅಲಂಕಾರದ ಸೌಂದರ್ಯದ ಮೀಮಾಂಸೆಯಂತೆ ಕಂಡರೆ, ಕೆಲವರಿಗೆ ಬುದ್ಧ ವಿವೇಕದ ಶಕ್ತಿಯ ಕಂಪನದಂತೆ ಕಾಣುತ್ತಾನೆ. ಇನ್ನೂ ಕೆಲವರಿಗೆ ಆತ ಪ್ರತಿಪಾದಿಸಿದ ಮೌಲಿಕ ಜೀವನ ತತ್ವಗಳಾದ ಕರುಣೆ ಮತ್ತು ಮೈತ್ರಿಯ ಮಹಾಪಯಣಿಗನಂತೆ ದರ್ಶನಕ್ಕೆ ಸಿಗುತ್ತಾನೆ ಎಂದರು. ಶ್ರೀಮತಿ ಕಲಾವತಿ ಬನಸೋಡೆ ಪ್ರಾರ್ಥಿಸಿದರು. ಸಂಜು ಕಾಂಬಳೆ ತ್ರಿಸರಣ ಪಂಚಶೀಲ ಪಠಿಸಿದರು.ಕಾರ್ಯಕ್ರಮ ನಿರೂಪಿಸಿದ ಪರಸುರಾಮ ನಾರಾಯಣಿ ಕೊನೆಗೆ ವಂದಿಸಿದರು.

---

## ಸಾಗುವಾನಿ ಮರ ಕಳವು

• ಉದಯವಾಹಿನಿ ಕಾಳಗಿ

ಗ್ರಾಮದ ಸರ್ವೇ ನಂ.16 ರಲ್ಲಿ ಬೆಳೆದಿದ್ದ ಸಾಗುವಾನಿ ಮರಗಳನ್ನು ಬುಧವಾರ ಕಳ್ಳರು ಕಡಿದು ಸಾಗಿಸಿದ್ದಾರೆ. ಭಾರತೀಯ ಕಿಸಾನ ಸಂಘದ ಅಧ್ಯಕ್ಷ ಭೀಮರಾಯ ಮಲಘಾಣ ಅವರಿಗೆ ಸೇರಿದ ಜಮೀನಿನಲ್ಲಿ 30 ಸಾವಿರ ರೂಪಾಯಿ ಬೆಲೆಬಾಳುವ 5 ವರ್ಷ ಪ್ರಾಯದ 13 ಸಾಗುವಾನಿ ಮರಗಳನ್ನು ರಾತ್ರೋರಾತ್ರಿ ಕಳವು ಮಾಡಿರುವ ಘಟನೆ ನಡೆದಿದೆ. ಸಾವಿರಾರು ರೂಪಾಯಿ ಮೌಲ್ಯದ ಸಾಗುವಾನಿ ಮರಗಳನ್ನು ಕಡಿದುಕೊಂಡು ಹೋಗಿರುವುದರಿಂದ ತುಂಬಾ ನಷ್ಟವಾಗಿದೆ. ಸರ್ಕಾರ ಕೂಡಲೇ ಪರಿಹಾರ ನೀಡಬೇಕು ಮತ್ತು ಕಳ್ಳರಿಗೆ ಹಿಡಿದು ಶಿಕ್ಷೆ ಕೊಡಬೇಕು ಎಂದು ಭಾರತೀಯ ಕಿಸಾನ ಸಂಘದ ಅಧ್ಯಕ್ಷ ಭೀಮರಾಯ ಮಲಘಾಣ ಒತ್ತಾಯಿಸಿದರು.

---

## ಮಾದಕ ವಸ್ತು ಮಾರಾಟಕ್ಕೆ ಸಂಚು ಮೂವರು ಆರೋಪಿಗಳು ಸೆರೆ

• ಉದಯವಾಹಿನಿ ಬಂಟ್ವಾಳ

ಎಂ.ಡಿ.ಎಂ.ಎ ಮಾದಕ ವಸ್ತು ಸೇವಿಸಿ ಬಳಿಕ ಮಾರಾಟದ ಉದ್ದೇಶದಿಂದ ಅವಿತುಕೊಂಡಿದ್ದ ಮೂವರು ಆರೋಪಿಗಳ ಸಹಿತ ಲಕ್ಷಾಂತರ ರೂ ಮೌಲ್ಯದ ವಿವಿಧ ಸೊತ್ತುಗಳನ್ನು ಬಂಟ್ವಾಳ ನಗರ ಎಸ್.ಐ.ರಾಮಕೃಷ್ಣ ನೇತ್ರತ್ವದ ತಂಡ ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿದ್ದಾರೆ.

ನಂದಾವರ ಬಸ್ತಿಗುಡ್ಡೆ ನಿವಾಸಿ ಮೊಹಮ್ಮದ್ ಇಮ್ತಿಯಾಜ್ , ನಂದಾವರ ಬಸ್ತಿಗುಡ್ಡೆ ನಿವಾಸಿ ಯೂನಸ್, ಹಾಗೂ ಪುತ್ತೂರು ನರಿಮೊಗರು ಪುರುಷರಕಟ್ಟೆ ನಿವಾಸಿ ಮೊಹಮ್ಮದ್ ಇಕ್ಬಾಲ್ ಬಂಧಿತ ಆರೋಪಿಗಳು. ಬಂಧಿತರಿಂದ ರೂ.5000 ಮೌಲ್ಯದ 2.99 ಗ್ರಾಂ ತೂಕದ ಎಂ.ಡಿ.ಎಂ.ಸೊತ್ತು ಹಾಗೂ ಖಾಲಿ 5 ಪ್ಲಾಸ್ಟಿಕ್ ಕವರ್, ರೂ.30 ಲಕ್ಷ ಮೌಲ್ಯದ ಕಾರು, ಆರೋಪಿಗಳ ಕೈಯಲ್ಲಿದ್ದ ರೂ.45 ಸಾವಿರ ಮೌಲ್ಯದ 4 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

---

## ಕುಟುಂಬವು ವ್ಯಕ್ತಿಯ ಜೀವನದ ಅವಿಭಾಜ್ಯ ಅಂಗ: ಸಂತೋಷ ಬಂಡೆ

• ಉದಯವಾಹಿನಿ ವಿಜಯಪುರ

ಕುಟುಂಬವು ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅವಿಭಾಜ್ಯ ಅಂಗವಾಗಿದ್ದು, ಅದು ನಮ್ಮ ಬದುಕನ್ನು ನಿರ್ಮಿಸುವ ಅಡಿಪಾಯವಾಗಿದೆ ಎಂದು ಶಿಕ್ಷಕ ಸಂತೋಷ ಬಂಡೆ ಅಭಿಪ್ರಾಯಪಟ್ಟರು.

ತಾಲ್ಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಕುಟುಂಬ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು. ಕುಟುಂಬವು ಪ್ರೀತಿ, ಗೌರವ, ನಂಬಿಕೆ, ಭರವಸೆ, ಕಾಳಜಿ ಮತ್ತು ಉತ್ತಮ ನಡವಳಿಕೆಯಂತಹ ಮೌಲ್ಯಗಳನ್ನು ಕಲಿಸಿ, ಜೀವನಕ್ಕೆ ಭದ್ರ ಬುನಾದಿಯನ್ನು ಹಾಕುತ್ತದೆ. ಕುಟುಂಬವು ಸಮಾಜದ ಅಡಿಪಾಯವಾಗಿದ್ದು, ಪ್ರೀತಿಯಿಂದ ಒಟ್ಟಿಗೆ ಬದುಕಲು ಸದಾ ಪ್ರೇರೇಪಿಸುತ್ತದೆ ಎಂದು ಹೇಳಿದರು.

ಇಂಡಿ ಸರಕಾರಿ ಐಟಿಐ ಕಾಲೇಜಿನ ಪ್ರಾಚಾರ್ಯ ಪಿ ವೈ ರಜನಿಕರ ಮಾತನಾಡಿ, ನಮ್ಮ ದೇಶದಲ್ಲಿ ವಸುದೈವ ಕುಟುಂಬಕಂ ಎಂಬ ನುಡಿಯಿದೆ. ಇದರ ಅರ್ಥ ಇಡೀ ವಿಶ್ವವೇ ನಮ್ಮ ಕುಟುಂಬ ಎಂದು. ಸಾಮಾಜಿಕೀಕರಣ, ಭಾಷಾ ಬೆಳವಣಿಗೆ, ಮಗುವಿನಲ್ಲಿ ಬೆಳೆಸುವ ಭಾವನಾತ್ಮಕ ಕೌಶಲ್ಯಗಳು ಕುಟುಂಬದ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.


ಉದಯವಾಹಿನಿ ಚಿತ್ರ

ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ, ಕುಟುಂಬವು ಒಂದು ಸಾರ್ವತ್ರಿಕ ಸಂಸ್ಥೆಯಾ ಗಿದೆ. ಇದು ಮಗುವಿಗೆ ತನ್ನ ಗುರುತನ್ನು ನೀಡುವ ಅತ್ಯಂತ ಹಳೆಯ ಸಂಸ್ಥೆಯಾಗಿದೆ. ಪ್ರತಿಯೊಬ್ಬರ ವ್ಯಕ್ತಿತ್ವ ರೂಪಿಸುವಲ್ಲಿ ಕುಟುಂಬವೇ ಮುಖ್ಯವಾಗಿದ್ದು, ಮಗುವಿಗೆ ಸಹಾನುಭೂತಿ, ಮತ್ತು ಒಗ್ಗಟ್ಟಿನ ಮಹತ್ವವನ್ನು ಕಲಿಸುತ್ತದೆ ಎಂದು ಹೇಳಿದರು.ಗ್ರಾಮ ಪಂಚಾಯಿತಿ ಸದಸ್ಯ ಸಿದ್ರಾಮ ಹೊಸಟ್ಟಿ, ಗ್ರಾಮಸ್ಥರಾದ ಸುರೇಶ ಕತ್ನಳ್ಳಿ, ಬಸವರಾಜ ಸಾರವಾಡ ಸೇರಿದಂತೆ ಅನೇಕ ಮಕ್ಕಳು ಭಾಗವಹಿಸಿದ್ದರು.

---

### • ಸಾರ್ವಜನಿಕರು ರಸ್ತೆಗಳಲ್ಲಿ ಸಂಚರಿಸುವಾಗ ರಸ್ತೆ ಸುರಕ್ಷತಾ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕು: ಜಿಲ್ಲಾಧಿಕಾರಿ

# ವಾಹನಗಳ ಸುಗಮ, ಸುರಕ್ಷಿತ ಸಂಚಾರಕ್ಕೆ ಅಗತ್ಯವಿರುವ ಮುನ್ನೆಚ್ಚರಿಕ ಕ್ರಮ

• ಉದಯವಾಹಿನಿ ಉಡುಪಿ

ಜಿಲ್ಲಾ ವ್ಯಾಪ್ತಿಯಲ್ಲಿ ರಸ್ತೆ ಅಪಘಾತ ಪ್ರಕರಣಗಳಾಗಿ ಸಾವು-ನೋವುಗಳು ಸಂಭವಿಸದಂತೆ ರಸ್ತೆಗಳಲ್ಲಿ ವಾಹನಗಳು ಸುಗಮ ಹಾಗೂ ಸುರಕ್ಷಿತವಾಗಿ ಸಂಚರಿಸಲು ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕ ಕಾಮಗಾರಿಗಳು ಹಾಗೂ ರಸ್ತೆ ಸೂಚನಾ ಫಲಕ ಅಳವಡಿಸಿ, ರಸ್ತೆ ಅಪಘಾತ ಪ್ರಕರಣಗಳು ಕಡಿಮೆ ಮಾಡಲು ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕೆ ವಿದ್ಯಾಕುಮಾರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾರ್ವಜನಿಕರು ರಸ್ತೆಗಳಲ್ಲಿ ಸಂಚರಿಸುವಾಗ ರಸ್ತೆ ಸುರಕ್ಷತಾ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕು. ಪ್ರಾಧಿಕಾರ ನಿಗಧಿಪಡಿಸಿರುವ ವೇಗ ಮಿತಿಯೊಳಗೆ ಸಂಚರಿಸಿದಲ್ಲಿ ವಾಹನಗಳು ಸುಗಮವಾಗಿ ಹಾಗೂ ಸುರಕ್ಷಿತವಾಗಿ ಸಂಚರಿಸಲು ಸಾಧ್ಯವಾಗುತ್ತದೆ. ಇದಕ್ಕೆ ಒತ್ತು ನೀಡಬೇಕು ಎಂದರು.

ಜಿಲ್ಲೆಯಲ್ಲಿ ಗುರುತಿಸಲಾಗಿರುವ ಬ್ಲಾಕ್ಸ್ಪಾಟ್ ಪ್ರದೇಶಗಳಲ್ಲಿ ವಾಹನಗಳ ಸುರಕ್ಷಿತ ಚಾಲನೆಗೆ ಅಗತ್ಯವಿರುವ ವೈಜ್ಞಾನಿಕವಾಗಿ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು ಎಂದ ಅವರು, ಅವಶ್ಯವಿರುವ ಕಡೆಯಲ್ಲಿ ಹಂಪ್ಸ್‌ಗಳ ಅಳವಡಿಕೆ, ಸೂಚನಾ ಫಲಕಗಳು ಸೇರಿದಂತೆ ಮತ್ತಿತರ ಸುರಕ್ಷತಾ ಕಾರ್ಯಗಳನ್ನು ಕೈಗೊಳ್ಳಬೇಕು ಎಂದರು.

> **ಉಡುಪಿ ನಗರಸಭಾ ವ್ಯಾಪ್ತಿಯ ಐದು ಜಂಕ್ಷನ್‌ಗಳಲ್ಲಿ ಸಿಗ್ನಲ್‌ಲೈಟ್‌ಗಳು ಅಳವಡಿಸಲು ಕಳೆದ ಸಭೆಯಲ್ಲಿಯೇ ತೀರ್ಮಾನಿಸಲಾಗಿತ್ತು. ಆದರೂ ಅಳವಡಿಸಿರುವುದಿಲ್ಲ. ಈ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದ ಅವರು, ಕಲ್ಸಂಕ ಹಾಗೂ ಅಂಬಲ್ಪಾಡಿ ಜಂಕ್ಷನ್‌ಗಳಲ್ಲಿ ಸಿಗ್ನಲ್ಲೈಟ್ ಕೂಡಲೇ ಅಳವಡಿಸುವಂತೆ ತಿಳಿಸಿದ ಅವರು, ರಾಜ್ಯ ರಸ್ತೆ ಸುರ್ಷತಾ ಪ್ರಾಧಿಕಾರ ಕ್ರಿಯಾ ಯೋಜನೆಯಡಿ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲು ಸೂಚನೆ ನೀಡಲಾಗಿತ್ತು. ಆದರೆ ಕಾಮಗಾರಿಗಳ ಅನುಷ್ಠಾನ ಇವರೆಗೂ ಆಗಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸುವಂತೆ ತಿಳಿಸಿದರು.**

ಜಿಲ್ಲೆಯಲ್ಲಿ ಅತೀ ವೇಗವಾಗಿ ಹಾಗೂ ಅಜಾಗರುಕತೆಯಿಂದ ವಾಹನ ಚಾಲನೆ ಮಾಡಿ ರಸ್ತೆ ಅಪಘಾತ ಮಾಡಿದ 82 ಜನ ಆರೋಪಿಗಳ ಚಾಲನ ಪರವಾನಿಗೆಯನ್ನು ಆರು ತಿಂಗಳ ಅವಧಿಗೆ ಅಮಾನತುಗೊಳಿಸಲಾಗಿದೆ ಎಂದ ಅವರು, ನಗರ ವ್ಯಾಪ್ತಿಯಲ್ಲಿ ಸಾರ್ವಜನಿಕ ಸಂಚಾರಿ ಬಸ್‌ಗಳನ್ನು ಅತೀ ಜೋರಾಗಿ ಚಾಲನೆ ಮಾಡುವುದರ ಜೊತೆಗೆ ಎಲ್ಲೆಂದರಲ್ಲಿ ಬಸ್‌ಗಳನ್ನು ನಿಲ್ಲಿಸುತ್ತಾರೆ.


ಉದಯವಾಹಿನಿ ಚಿತ್ರ

ಇದರಿಂದ ಅಪಘಾತ ಹಾಗೂ ಸುಗಮ ಸಂಚಾರಕ್ಕೆ ಕಿರಿಕಿರಿ ಉಂಟಾಗುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ. ಈ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಉಡುಪಿ ನಗರವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ದೊಡ್ಡ ದೊಡ್ಡ ವಾಣಿಜ್ಯ ಕಟ್ಟಡಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲು ಸೂಚನೆಗಳು ಇದ್ದರು ಸಹ ನಿಯಮಗಳನ್ನು ಗಾಳಿಗೆ ತೂರಿ ಪಾರ್ಕಿಂಗ್ ಸ್ಥಳಗಳಲ್ಲಿ ವಾಣಿಜ್ಯ ಉದ್ಯಮಗಳಿಗೆ ಬಳಕೆ ಮಾಡುತ್ತಿದ್ದಾರೆ.

ಇದರಿಂದಾಗಿ ಗ್ರಾಹಕರು, ವಾಣಿಜ್ಯ ಉದ್ಯಮಿಗಳು ತಮ್ಮ ವಾಹನಗಳನ್ನು ರಸ್ತೆಯಲ್ಲಿ ಪಾರ್ಕ್ ಮಾಡುವ ಹಿನ್ನೆಲೆ, ವಾಹನಗಳ ಸುಗಮ ಸಂಚಾರಕ್ಕೆ ಅಡೆತಡೆ ಉಂಟಾಗುತ್ತಿದೆ.

ಈ ಬಗ್ಗೆ ಈಗಾಗಲೇ ಕೆಲವು ಮಾಲೀಕರಿಗೆ ನೋಟೀಸ್ ನೀಡಿದ್ದರು ಸಹ ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ. ಅವರಿಗೆ ಅಂತಿಮ ನೋಟೀಸ್ ಅನ್ನು ನೀಡಿ ನಿಯಾನುಸಾರ ಕಾನೂನಿನ ಅಡಿ ಕ್ರಮ ಕೈಗೊಳ್ಳಬೇಕು ಎಂದು ನಗರಸಭಾ ಆಯುಕ್ತರಿಗೆ ಸೂಚನೆ ನೀಡಿದರು.

ರಸ್ತೆ ಅಪಘಾತದ ಹಿಟ್ ಅಂಡ್ ರನ್ ಕೇಸ್‌ಗಳಲ್ಲಿ ಮೃತಪಟ್ಟ ಕುಟುಂಬದ ಅವಲಂಬಿತರಿಗೂ ಹಾಗೂ ಗಾಯಗೊಂಡವರಿಗೂ ಸೊಲೊಟಿಯಂ ಪರಿಹಾರ ಪಡೆಯಲು ಅರ್ಹರಿದ್ದು, ಎಲ್ಲಾ ಪ್ರಕಾರಣಗಳಲ್ಲಿಯೂ ಪರಿಹಾರವನ್ನು ಕೂಡಲೇ ನಿಯಮಾನುಸಾರ ಮಂಜೂರು ಮಾಡುವಂತೆ ತಾಲ್ಲೂಕು ತಹಶೀಲ್ದಾರರುಗಳಿಗೆ ಸೂಚನೆ ನೀಡಿದರು.

#### ಅನಗತ್ಯ ಹಣ ವಸೂಲಿ

**ಆಟೋ ರಿಕ್ಷಾ ಚಾಲಕರು ಉಡುಪಿ ನಿಲ್ದಾಣ ವ್ಯಾಪ್ತಿಯಲ್ಲಿ ಬರುವ ಆಟೋ ನಿಲ್ದಾಣಗಳಲ್ಲಿ ನಿಲ್ಲಿಸಲು, ಆಟೋ ನಿಲ್ದಾಣದ ಸದಸ್ಯತ್ವ ಪಡೆಯಲು ಒಂದು ಲಕ್ಷದಿಂದ ನಲವತ್ತು ಸಾವಿರ ರೂ. ವರೆಗೆ ಪಾವತಿ ಮಾಡಬೇಕು ಎಂದು ಹೇಳಿ ಹಣ ವಸೂಲಿ ಮಾಡುತ್ತಿದ್ದಾರೆ. ಈ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಆಟೋ ನಿಲ್ದಾಣದ ಸ್ಥಳಗಳು ಸರಕಾರದ ಸ್ವತ್ತಾಗಿದ್ದು, ಪ್ರಸ್ತುತ ನಗರಸಭಾ ವ್ಯಾಪ್ತಿಯಲ್ಲಿದೆ. ಈ ರೀತಿ ಅನಗತ್ಯವಾಗಿ ಹಣ ವಸೂಲಾತಿಯನ್ನು ಯಾರೊಬ್ಬರೂ ಸಹ ಮಾಡುವ ಹಾಗಿಲ್ಲ. ಆಟೋ ನಿಲ್ದಾಣಗಳಲ್ಲಿ ಯಾವುದೇ ಆಟೋಗಳು ಸರತಿಯ ಆಧಾರದ ಮೇಲೆ ನಿಂತು ಪ್ರಯಾಣಿಸಲು ಅವಕಾಶ ಮಾಡಿರಬೇಕು. ಈ ಬಗ್ಗೆ ನಗರಸಭಾ ಆಯುಕ್ತರು ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.**

---

## ತಿಗಡೊಳ್ಳಿ ಗ್ರಾಮದೇವಿ ರಥೋತ್ಸವ

• ಉದಯವಾಹಿನಿ ಚನ್ನಮ್ಮನ ಕಿತ್ತೂರು


16 ನಾಡಿನ ಶಕ್ತಿ ದೇವತೆಯಾದ ತಿಗಡೊಳ್ಳಿ ಶ್ರೀ ಗ್ರಾಮದೇವಿಯ ಮಹಾರಥೋತ್ಸವವು ಸಹಸ್ರಾರು ಭಕ್ತರ ಮಧ್ಯ ಸಂಡಗರ ಸಂಭ್ರಮದಿಂದ್ ಜರುಗಿತು. ಈ ಜಾತ್ರೆಗೆ ಅಪಾರ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದರು.

ಈ ರಥೋತ್ಸವ ಕಾರ್ಯಕ್ರಮಕ್ಕೆ ರಾಜ್ಯ-ಹೊರರಾಜ್ಯ, ಜಿಲ್ಲೆ-ತಾಲ್ಲೂಕು ಸುತ್ತಮುತ್ತಲಿನ ಗ್ರಾಮದ ಭಕ್ತರು ಸಾಥ ನೀಡಿದರು. ಉಡುಪಿ ಶೈಲಿಯ ಕಲೆ, ಅವರಾದಿ ಗ್ರಾಮದ ಡೊಳ್ಳು ಮೇಳ, ಜಗ್ಗಲಿಗೆ ಕುಣಿತ ಹಾಗೂ ಹಳ್ಳಿಯಾಳದ ಗೊಂಬೆ ಸಂಸ್ಕೃತಿಯನ್ನು ಬಿಂಬಿಸುವ ರಥೋತ್ಸವ ಭಕ್ತರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಯಿತು.

ಮೇ. 6ರಿಂದ ಆರಂಭಗೊಂಡಿರುವ ಈ ಜಾತ್ರಾ ಕಾರ್ಯಕ್ರಮಕ್ಕೆ ದೈವದವರು ಹಾಗೂ ಶಾಸಕ ಬಾಬಾಸಾಹೇಬ ಪಾಟೀಲ ಚಾಲನೆ ನೀಡಿದ್ದರು. ಜಾತ್ರೆ ಅಂಗವಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಈ ಕಾರ್ಯಕ್ರಮದಲ್ಲಿ ಸುಮಾರು ಒಂದು ಲಕ್ಷಕ್ಕೂ ಅಧಿಕವಾಗಿ ಭಕ್ತರು ಭಾಗಿಯಾಗಿ ದೇವಿಯ ಕೃಪೆಗೆ ಪಾತ್ರರಾದರು. ಆಯಾ ಓಣಿಗಳಲ್ಲಿ ದೇವಿಯ ಉಡಿ ತುಂಬಿ ಭಕ್ತರು ತಮ್ಮ ಹರಿಕೆ ಪೂರೈಸಿದರು. ಲಕ್ಷ ದೀಪೋತ್ಸವದೊಂದಿಗೆ ಜಾತ್ರಾ ಮಹೋತ್ಸವ ತೆರೆ ಬಿಳಲಿದೆ.

ಉಗ್ರವಾದಕ್ಕೆ ಬೆಂಬಲ ನಿಲ್ಲಿಸದಿದ್ದರೆ ಭಾರೀ ಅಪಾಯ; ಮಾಜಿ ರಾಯಭಾರಿ ಹುಸೇನ್ ಹಕ್ಕಾನಿ ಎಚ್ಚರಿಕೆ ಕೇಳಿ ಪಾಕಿಸ್ತಾನ ಪಾನಿ ಪಾನಿ

# ಉಗ್ರವಾದದಿಂದ ಬೆನ್ನು ತಿರುಗಿಸುವುದೊಂದೇ ಪರಿಹಾರ: ಹುಸೇನ್ ಹಕ್ಕಾನಿ



ಭಾರೀ ವಿಪತ್ತಿಗೆ ಕಾರಣ

**ಇಸ್ಲಾಮಾಬಾದ್:** ಪಾಕಿಸ್ತಾನವು ಭಯೋತ್ಪಾದಕ ಸಂಘಟನೆಗಳಿಗೆ ನೀಡುತ್ತಿರುವ ಬೆಂಬಲವನ್ನು ನಿಲ್ಲಿಸದಿದ್ದರೆ, ಭಾರತದೊಂದಿಗೆ ಮತ್ತೆ ದೊಡ್ಡ ಸಂಘರ್ಷದ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಅಮೆರಿಕಕ್ಕೆ ಪಾಕಿಸ್ತಾನದ ಮಾಜಿ ರಾಯಭಾರಿ ಹುಸೇನ್ ಹಕ್ಕಾನಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಟ್ವೀಟ್ ಮಾಡಿ ರುವ ಹುಸೇನ್ ಹಕ್ಕಾನಿ, ಪಹಲ್ಗಾಮ್ ಭಯೋತ್ಪಾದಕ ದಾಳಿಯಿಂದಾಗಿ ಉಭಯ ದೇಶಗಳು ಯುದ್ಧದ ಅಂಚಿಗೆ ಬಂದಿದ್ದವು. ಸದ್ಯ ಸಮಯೋಚಿತ ಕದನ ವಿರಾಮ ಒಪ್ಪಂದ ನಿರ್ಧಾರ ದಿಂದಾಗಿ ಸಂಭಾವ್ಯ ಅಪಾಯ ತಪ್ಪಿದೆ. ಆದರೆ ಪಾಕಿ ಸ್ತಾನ ಭಯೋ ತ್ಪಾದಕ ಸಂಘಟನೆ ಗಳಿಗೆ ಬೆಂಬಲ ನೀಡುವುದನ್ನು ಮುಂದುವರೆಸಿದರೆ, ಭಾರತದಿಂದ ಭಾರೀ ಅಪಾಯ ಎದುರಿಸಲಿದೆ ಎಂದು ಎಚ್ಚರಿಸಿದ್ದಾರೆ. ಭಯೋ ತ್ಪಾದಕ ಸಂಘಟನೆಗಳಾದ ಲಷ್ಕರ್-ಎ-ತೊಯ್ಬಾ, ಜೈಶ್-ಎ-ಮೊಹಮ್ಮದ್ (ಜೈಶ್), ಸಿಪಾ-ಎ-ಮೊಹಮ್ಮದ್, ದಿಫಾ-ಎ-ವತನ್ ಕೌನ್ಸಿಲ್‌ನಂತಹ ಉಗ್ರ ಸಂಘಟನೆಗಳನ್ನು ಪಾಕಿಸ್ತಾನ ಏಕೆ ಬೆಂಬಲಿಸಬೇಕು ಎಂದು ಪ್ರಶ್ನಿಸಿರುವ ಹುಸೇನ್ ಹಕ್ಕಾನಿ, ಭಯೋತ್ಪಾದನೆ ಪರ ನೀತಿ ಭವಿಷ್ಯದಲ್ಲಿ ಭಾರೀ ವಿಪತ್ತಿಗೆ ಕಾರಣವಾಗಲಿದೆ ಎಂದು ಹೇಳಿದ್ದಾರೆ. ಭಾರತವು ಪಾಕಿಸ್ತಾನದ ನೆಲದಲ್ಲಿರುವ ಭಯೋತ್ಪಾದಕ ಮೂಲಸೌಕರ್ಯಗಳ ವಿರುದ್ಧ ಕ್ರಮ ಕೈಗೊಳ್ಳಲು ಪದೇ ಪದೇ ಒತ್ತಾಯಿಸುತ್ತಿದೆ.

ಪಾಕಿಸ್ತಾನವು ಭಾರತದ ಜೊತೆಗೆ ಮತ್ತೆ ಸಂಘರ್ಷ ವನ್ನು ತಪ್ಪಿಸಲು, ತನ್ನ ನೆಲದಲ್ಲಿ ನಡೆಯುತ್ತಿರುವ ಭಾರತ ವಿರೋಧಿ ಭಯೋತ್ಪಾದಕ ಚಟುವಟಿಕೆಗಳಿಗೆ ತಡೆಯೊಡ್ಡಬೇಕು. ಇಲ್ಲದಿದ್ದರೆ ಪಾಕಿಸ್ತಾನದ ಸರ್ವನಾಶಕ್ಕೆ ಜಿಹಾದಿ ಗುಂಪುಗಳೇ ಕಾರಣವಾಗಲಿವೆ ಎಂದು ಹುಸೇನ್ ಹಕ್ಕಾನಿ ಅಭಿಪ್ರಾಯಪಟ್ಟಿದ್ದಾರೆ.

**ಪಾಕ್ ಮಿಲಿಟರಿಗೆ ಮೆಚ್ಚುಗೆ:** ಇದೇ ವೇಳೆ ಪಾಕಿಸ್ತಾನ ಮಿಲಿಟರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಹುಸೇನ್ ಹಕ್ಕಾನಿ, ಭಾರತದ ದಾಳಿಯ ತೀವ್ರತೆಯನ್ನು ಕುಗ್ಗಿಸು ವಲ್ಲಿ ಪಾಕಿಸ್ತಾನ ಸೇನೆ ಮಹತ್ವದ ಪಾತ್ರ ನಿರ್ವಹಿಸಿದೆ ಎಂದು ಹೇಳಿದ್ದಾರೆ. ಮುಂದುವರೆದು, ಪಾಕಿಸ್ತಾನ ಪೂರ್ಣ ಪ್ರಮಾಣದ ವೃತ್ತಿಪರ ಸೇನೆಯನ್ನು ಹೊಂದಿರುವಾಗ, ಅದಕ್ಕೆ ಲಷ್ಕರ್, ಜೈಶ್‌ನಂತಹ ಸಂಘಟನೆಗಳು ಏಕೆ ಬೇಕು ಎಂಬುದು ತಿಳಿಯುತ್ತಿಲ್ಲ ಎಂದು ಹುಸೇನ್ ಹಕ್ಕಾನಿ ಪ್ರಶ್ನಿಸಿದ್ದಾರೆ.

ಪಾಕಿಸ್ತಾನ ಒಂದು ಭಯೋತ್ಪಾದಕ ರಾಷ್ಟ್ರ ಎಂದು ಜಾಗತಿಕ ವೇದಿಕೆಗಳಲ್ಲಿ ಮನವರಿಕೆ ಮಾಡಿಕೊಡು ವಲ್ಲಿ ಭಾರತ ಯಶಸ್ವಿಯಾಗುತ್ತಿದೆ. ಆದರೆ ಪಾಕಿಸ್ತಾನ ಮಾತ್ರ ಭಯೋತ್ಪಾದನೆಗೆ ನಮ್ಮ ಬೆಂಬಲ ಇಲ್ಲ ಎಂಬ ಅದೇ ಸವಕಲು ಹೇಳಿಕೆಯನ್ನು ಮತ್ತೆ ಮತ್ತೆ ನೀಡು ತ್ತಿದೆ. ಭಾರತದ ಸಂಭಾವ್ಯ ಭೀಕರ ದಾಳಿಯನ್ನು ತಪ್ಪಿಸಲು, ಜಾಗತಿಕ ಮಟ್ಟದಲ್ಲಿ ತನ್ನ ವರ್ಚಸ್ಸನ್ನು ಕಾಪಾಡಿಕೊಳ್ಳಲು, ಪಾಕಿಸ್ತಾನ ಶತಾಯಗತಾಯ ತನ್ನ ನೆಲದಲ್ಲಿರಯವ ಭಯೋತ್ಪಾದಕ ಸಂಘಟನೆಗಳ ಮೇಲೆ ನಿಷೇಧ ಹೇರಬೇಕು. ಇದೊಂದೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದು ಮಾಜಿ ರಾಯಭಾರಿ ಸಲಹೆ ನೀಡಿದ್ದಾರೆ. ಭಾರತವು ಭಯೋತ್ಪಾದನೆಯನ್ನು ಗಂಭೀರವಾಗಿ ಪರಿಗಣಿಸುತ್ತದೆ.

ಪಾಕಿಸ್ತಾನವು ಭಯೋತ್ಪಾದಕ ಗುಂಪುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಭಾರತ ಬಯಸುತ್ತದೆ. ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಇದು ಅತ್ಯಗತ್ಯ ಎಂದಿರುವ ಭಾರತ, ಭಯೋತ್ಪಾದನೆ ವಿಚಾರವೊಂದನ್ನು ಹೊರತುಪಡಿಸಿ, ಇನ್ಯಾವುದೇ ವಿಷಯದ ಬಗ್ಗೆ ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ.

### ಜೈಶ್ ಮುಂತಾದ ಉಗ್ರ ಸಂಘಟನೆಗಳ ಅವಶ್ಯಕತೆ ಇಲ್ಲ

**ಪಾಕಿಸ್ತಾನವು ಭಯೋತ್ಪಾದನೆಗೆ ನೀಡುತ್ತಿರುವ ಬೆಂಬಲ ನಿಲ್ಲಿಸದಿದ್ದರೆ, ಭವಿಷ್ಯದಲ್ಲಿ ಭಾರತದ ಕಡೆಯಿಂದ ಭಾರೀ ಅಪಾಯವನ್ನು ಎದುರಿಸಲಿದೆ ಎಂದು ಅಮೆರಿಕಕ್ಕೆ ಪಾಕಿಸ್ತಾನದ ಮಾಜಿ ರಾಯಭಾರಿ ಹುಸೇನ್ ಹಕ್ಕಾನಿ ಎಚ್ಚರಿಕೆ ನೀಡಿದ್ದಾರೆ. ಪಾಕಿಸ್ತಾನವು ತನ್ನ ನೆಲದಲ್ಲಿರುವ ಭಯೋತ್ಪಾದಕ ಸಂಘಟನೆಗಳನ್ನು ಮುಚ್ಚಬೇಕು. ಪಾಕಿಸ್ತಾನಕ್ಕೆ ಲಷ್ಕರ್, ಜೈಶ್ ಮುಂತಾದ ಉಗ್ರ ಸಂಘಟನೆಗಳ ಅವಶ್ಯಕತೆ ಇಲ್ಲ. ಪಾಕಿಸ್ತಾನ ಉಗ್ರವಾದದಿಂದ ಬೆನ್ನು ತಿರುಗಿಸಿದರೆ ಮಾತ್ರ, ಭಾರತದ ಆಕ್ರಮಣದಿಂದ ಪಾರಾಗಬಹುದು ಎಂದು ಹುಸೇನ್ ಹಕ್ಕಾನಿ ಸಲಹೆ ನೀಡಿದ್ದಾರೆ.**

- ಪಾಕಿಸ್ತಾನ ಉಗ್ರವಾದ ಪೋಷಣೆಯನ್ನು ನಿಲ್ಲಿಸಬೇಕು ಎಂದ ಅಮೆರಿಕಕ್ಕೆ ಪಾಕಿಸ್ತಾನದ ಮಾಜಿ ರಾಯಭಾರಿ ಹುಸೇನ್ ಹಕ್ಕಾನಿ
- ಪಾಕಿಸ್ತಾನಕ್ಕೆ ಲಷ್ಕರ್ ಮತ್ತು ಜೈಶ್ ನಂತಹ ಭಯೋತ್ಪಾದಕ ಸಂಘಟನೆಗಳ ಅವಶ್ಯಕತೆ ಇಲ್ಲ ಎಂದ ಮಾಜಿ ರಾಯಭಾರಿ

## ಬ್ರಹ್ಮೋಸ್ ದಾಳಿ ಒಪ್ಪಿಕೊಂಡ ಪಾಕ್‌ನ ನಿವೃತ್ತ ಏರ್ ಮಾರ್ಷಲ್



**ಇಸ್ಲಾಮಾಬಾದ್:** ಆಪರೇಷನ್ ಸಿಂಧೂರ ಕಾರ್ಯಾಚ ರಣೆ ವೇಳೆ ಪಾಕಿಸ್ತಾನದ ಮೇಲೆ ಭಾರತ ಬ್ರಹ್ಮೋಸ್ ದಾಳಿ ಮಾಡಿದೆ. ಆದರೆ, ಪಾಕಿಸ್ತಾನ ಸೇನಾ ಮುಖ್ಯಸ್ಥ ಮುನೀರ್ ಇದನ್ನು ಒಪ್ಪಿಕೊಳ್ಳುತ್ತಿಲ್ಲ ಎಂದು ಪಾಕ್ ನಿವೃತ್ತ ಏರ್ ಮಾರ್ಷಲ್ ಮಸೂದ್ ಅಕ್ತರ್ ತಿಳಿಸಿದ್ದಾರೆ. ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ಭಾರತ ನಡೆಸಿದ ಆಪರೇಷನ್ ಸಿಂಧೂರದ ಅಡಿಯಲ್ಲಿ ಪಾಕ್‌ನ 9 ಉಗ್ರರ ನೆಲೆಗಳು ಸೇರಿದಂತೆ ಕರಾಚಿ ಬಳಿಯಿರುವ ಭೋಲಾರಿಯ ವಾಯುನೆಲೆ ಮೇಲೆ ಬ್ರಹ್ಮೋಸ್ ಕ್ಷಿಪಣಿ ದಾಳಿಯಾಗಿದೆ. ಮೊದಲು ಇದೇ ಜಾಗವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದಾರೆ.

**ವಾಯುನೆಲೆಯ:** ಹ್ಯಾಂಗರ್‌ಗೂ ಹಾನಿಯಾಗಿದೆ. ಜೊತೆಗೆ ವಾಯುಪಡೆ ಎಚ್ಚರಿಕೆ, ನಿಯಂತ್ರಣ ವ್ಯವಸ್ಥೆಯ ವಿಮಾನವು ಕೂಡ ಇದೇ ಸಮಯದಲ್ಲಿ ಪತನಗೊಂಡಿದೆ ಎಂದು ಅವರು ಒಪ್ಪಿ ಕೊಂಡಿದ್ದಾರೆ. ದಾಳಿಯ ಬಗ್ಗೆ ಮಾಹಿತಿ ಬಿಚ್ಚಿಟ್ಟ ಅವರು, ಪಾಕಿಸ್ತಾನದ ವಾಯುನೆಲೆಗಳ ಪೈಕಿ ಭೋಲಾರಿಯು ಒಂದು. ಇದು ಭಾರತ-ಪಾಕಿಸ್ತಾನ ಅಂತರರಾಷ್ಟ್ರೀಯ ಗಡಿ ಯಿಂದ 270 ಕಿ.ಮೀ ದೂರದಲ್ಲಿದೆ.

ಭಾರತದ ಪಡೆಗಳು ಒಂದರ ನಂತರ ಒಂದ ರಂತೆ ನಾಲ್ಕು ಬ್ರಹ್ಮೋಸ್ ಕ್ಷಿಪಣಿಗಳನ್ನು ಹಾರಿಸಿ ದಾಳಿ ನಡೆಸಿವೆ. ದಾಳಿಯ ವೇಳೆ ಒಂದು ಕ್ಷಿಪಣಿ ಭೋಲಾರಿ ವಾಯುನೆಲೆಯ ಹ್ಯಾಂಗರ್‌ಗೆ ಡಿಕ್ಕಿ ಹೊಡೆದಿದ್ದು, ಸಾವು-ನೋವುಗಳು ಕೂಡ ವರದಿಯಾಗಿವೆ. ಪಾಕಿಸ್ತಾನದ ಮೂರು ವಾಯು ನೆಲೆಗಳಾದ ಉತ್ತರ ವಾಯು ಕಮಾಂಡ್. ಕೇಂದ್ರ ವಾಯುನೆಲೆ, ದಕ್ಷಿಣ ವಾಯುನೆಲೆಗಳ ಅಡಿಯಲ್ಲಿರುವ ವಾಯು ನೆಲೆಗಳ ಮೇಲೆ ಭಾರತ ದಾಳಿ ನಡೆಸಿದೆ. ಅಲ್ಲದೆ ಮ್ಯಾಕ್ಸ್‌ರ್ ಟೆಕ್ನಾಲಜೀಸ್ ಬಿಡುಗಡೆ ಮಾಡಿದ ಸ್ಯಾಟ್‌ಲೈಟ್ ಚಿತ್ರಗಳಲ್ಲಿ ದಾಳಿಯಾಗಿರುವುದು ಸಾಬೀತಾಗಿದ್ದು, ಹಾನಿಯ ದೃಶ್ಯಗಳನ್ನು ತೋರಿ ಸಿದೆ. ಆದರೆ ಪಾಕಿಸ್ತಾನ ಸೇನಾ ಮುಖ್ಯಸ್ಥ ಮುನೀರ್ ಇದನ್ನು ಒಪ್ಪಿಕೊಳ್ಳುತ್ತಿಲ್ಲ ಎಂದು ಅವರು ಕಿಡಿಕಾರಿದ್ದಾರೆ. ಬ್ರಹ್ಮೋಸ್ ಇಂಡೋ-ರಷ್ಯಾದ ಸೂಪರ್‌ನಿಕ್ ಕ್ರೂಸ್ ಕ್ಷಿಪಣಿ ಯಾಗಿದ್ದು, ಇದನ್ನು ಭೂ. ವಾಯು, ಜಲ ಮೂರು ಸೇನೆ ಬಳಸಬಹುದಾಗಿದೆ. ಭಾರತವು -30 ಯುದ್ಧ ವಿಮಾನದಿಂದ ಬ್ರಹ್ಮೋಸ್ ಕ್ಷಿಪಣಿಯನ್ನು ಬಳಸಿದೆ ಎನ್ನಲಾಗಿದೆ.

### ಸುಮಾರು ಶೇ.20ರಷ್ಟು ನಾಶ

**ಮಾಹಿತಿ ಪ್ರಕಾರ, ಈ ದಾಳಿಯಿಂದಾಗಿ ಸ್ಕ್ವಾಡ್ರನ್ ಲೀಡರ್ ಉಸ್ಮಾನ್ ಯೂಸುಫ್ ಮತ್ತು ನಾಲ್ವರು ವಾಯುಪಡೆ ಸಿಬ್ಬಂದಿ ಸೇರಿದಂತೆ 50 ಜನರು ಸಾವನ್ನಪ್ಪಿದ್ದಾರೆ. ಜೊತೆಗೆ ಪಾಕಿಸ್ತಾನಿ ವಿಮಾನಗಳು ನಾಶವಾಗಿವೆ. ಅದಲ್ಲದೇ ಪಾಕ್ ವಾಯುಪಡೆಯ ಮೂಲಸೌಕರ್ಯದ ಸುಮಾರು ಶೇ.20ರಷ್ಟು ನಾಶವಾಗಿದೆ ಎಂದು ವರದಿಯಾಗಿದೆ.**

## ಭಾರತ-ಅಫ್ಘಾನ್ ಸಂಬಂಧ ಕೆಡಿಸಲು ಪಾಕ್‌ಗೆ ಸಾಧ್ಯವಿಲ್ಲ



**ನವದೆಹಲಿ:** ಭಾರತ, ಅಫ್ಘಾನಿಸ್ತಾನದ ನಡುವಿನ ಸಂಬಂಧ ವನ್ನು ಹಾಳು ಮಾಡಲು ಪಾಕಿಸ್ತಾನಕ್ಕೆ ಬಿಡುವುದಿಲ್ಲ ಎಂದು ವಿದೇ ಶಾಂಗ ಸಚಿವ ಎಸ್ ಜೈಶಂಕರ್ ಹೇಳಿದ್ದಾರೆ. ಜೈಶಂಕರ್, ಅಫ್ಘಾನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ನಡುವಿನ ಮಾತುಕತೆ ಸಂದರ್ಭದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ. ತಾಲಿಬಾನ್ ಅಫ್ಘಾನಿಸ್ತಾನವನ್ನು ವಶ ಪಡಿಸಿಕೊಂಡ ನಂತರ ಜೈಶಂಕರ್ ಮತ್ತು ಮುತ್ತಕಿ ನೇರವಾಗಿ ಮಾತನಾಡುತ್ತಿರುವುದು ಇದೇ ಮೊದಲು. ಈ ಮಾತುಕತೆಗಳು ಎರಡೂ ರಾಷ್ಟ್ರಗಳಿಗೆ ಮತ್ತು ಪ್ರಾದೇಶಿಕ ಸ್ಥಿರತೆಗೆ ಕಾರ್ಯತಂತ್ರದ ಮಹತ್ವವನ್ನು ಹೊಂದಿವೆ. ತಾಲಿಬಾನ್ ಆಳ್ವಿಕೆಯಲ್ಲಿರುವ ಅಫ್ಘಾನಿಸ್ತಾನವು ಐಸಿಸ್-ಕೆ. ತೆಹ್ರಿಕ್-ಇ-ತಾಲಿಬಾನ್ ಪಾಕಿ ಸ್ತಾನ್, ಅಲ್-ಖೈದಾದಂತಹ ಉಗ್ರಗಾಮಿ ಗುಂಪುಗಳಿಗೆ ಕೇಂದ್ರವಾಗಿ ಉಳಿ ದಿದೆ. ಜೊತೆಗೆ, ಅಫ್ಘಾನಿಸ್ತಾನವು ಚೀನಾಕ್ಕೆ ಹತ್ತಿರವಾಗುತ್ತಿದೆ. ಚೀನಾ ಕಂಪನಿಗಳಿಗೆ ಗಣಿಗಾರಿಕೆ ಗುತ್ತಿಗೆ ಗಳನ್ನು ಪಾಕಿಸ್ತಾನ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಲಷ್ಕರ್-ಎ-ತೊಯ್ಬಾ, ಜೈಶ್-ಎ-ಮೊಹಮ್ಮದ್, ನಂತಹ ಗುಂಪು ಗಳು ಸೇರಿದಂತೆ ಪಾಕಿಸ್ತಾನ ಪ್ರಾಯೋಜಿತ ಭಯೋ ತ್ಪಾದನೆಗೆ ಅಫ್ಘಾನ್ ಪ್ರದೇಶವನ್ನು ಬಳಸದಂತೆ ತಡೆಯಲು ತಾಲಿಬಾನ್ ಬದ್ಧವಾಗಿದೆ ಎಂದು ಮೂಲಗಳು ತಿಳಿಸಿವೆ. ಪಾಕಿಸ್ತಾನವು ತಮ್ಮ ದೇಶಗಳ ನಡುವೆ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಲು ಬಿಡುವುದಿಲ್ಲ ಎಂದು ಇಬ್ಬರೂ ನಾಯಕರು ಪರ ಸ್ಪರ ಭರವಸೆ ನೀಡಿದರು.

ತಾಲಿಬಾನ್ ಅಫ್ಘಾನಿಸ್ತಾನ ಸುರಕ್ಷಿತ, ಸುಭದ್ರವಾಗಿದೆ. ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಅಫ್ಘಾನ್ ರಕ್ಷಣಾ ಸಚಿವಾಲಯದ ವಕ್ತಾರರನ್ನು ಉಲ್ಲೇಖಿಸಿ ಖಾಮಾ ಪ್ರೆಸ್ ವರದಿ ಮಾಡಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಖಂಡಿಸಿದ್ದಕ್ಕಾಗಿ ಅವರಿಗೆ ಧನ್ಯವಾದಗಳು. ಅಫ್ಘಾನಿಸ್ತಾನದ ಜನರೊಂದಿಗೆ ನಮ್ಮ ಸಾಂಪ್ರದಾಯಿಕ ಸ್ನೇಹ ಮತ್ತು ಅವರ ಅಭಿವೃದ್ಧಿ ಅಗತ್ಯಗಳಿಗೆ ನಿರಂತರ ಬೆಂಬಲದ ಕುರಿತು ಮಾತುಕತೆ ನಡೆಸಲಾಯಿತು. ಉಭಯ ದೇಶಗಳ ಸಹಕಾರವನ್ನು ಮುಂದಕ್ಕೆ ಕೊಂಡೊಯ್ಯುವ ಮಾರ್ಗಗಳು, ವಿಧಾನಗಳ ಕುರಿತು ಚರ್ಚಿ ಸಲಾಯಿತು ಎಂದು ಮುತ್ತಕಿ ಬರೆದುಕೊಂಡಿದ್ದಾರೆ.

## ಕಾಂಗ್ರೆಸ್ 'ಟರ್ಕಿ' ಪ್ರೀತಿ ಕುರಿತು ವ್ಯಾಪಕ ಚರ್ಚೆ



**ನವದೆಹಲಿ:** ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಮ್ಮ ಬಳಿ ಹಣವೇ ಇಲ್ಲ ಎಂದು ಮೊಸಳೆ ಕಣ್ಣೀರು ಹಾಕಿದ್ದ ಕಾಂಗ್ರೆಸ್ 2019ರಲ್ಲೇ ಟರ್ಕಿಯಲ್ಲಿ ಸಾಗರೋತ್ತರ ಕಚೇರಿ ತೆರೆಯಲು ಹಣ ಎಲ್ಲಿಂದ ತಂದಿತ್ತು ಎಂಬ ಬಗ್ಗೆ ಬಿಸಿ ಬಿಸಿ ಚರ್ಚೆ ಆರಂಭವಾಗಿದೆ. ಇದರ ಜೊತೆಗೆ ಟರ್ಕಿ, ಕಾಂಗ್ರೆಸ್ ನಡುವಿನ ಸಂಬಂಧಗಳ ಬಗ್ಗೆ ಪ್ರಶ್ನೆಗಳ ಸುರಿಮಳೆ ಶುರುವಾಗಿದೆ. ಅದು 2019ರ ಸಮಯ ಕಾಶ್ಮೀರ ಕುರಿತು ವಿಶ್ವಸಂಸ್ಥೆಯಲ್ಲಿ ಟರ್ಕಿ ಪಾಕಿಸ್ತಾನಕ್ಕೆ ಬೆಂಬಲ ನೀಡಿದ ಕೆಲವೇ ದಿನಗಳಲ್ಲಿ ಕಾಂಗ್ರೆಸ್ ಟರ್ಕಿಯಲ್ಲಿ ತನ್ನ ಸಾಗರೋತ್ತರ ಕಚೇರಿಯನ್ನು ತೆರೆದಿತ್ತು. ಮೊಹಮ್ಮದ್ ಯೂಸುಫ್ ಖಾನ್ ಎಂಬುವವರು ಟರ್ಕಿಯಲ್ಲಿ ಈ ಕಚೇರಿಯ ನೇತೃತ್ವ ವಹಿಸಿದ್ದಾರೆ. ಇಂಡಿಯನ್ ಓವರ್‌ಸೀಸ್ ಕಾಂಗ್ರೆಸ್ ಎಂಬುದು ಕಾಂಗ್ರೆಸ್ ಬೆಂಬಲಿಗರ ಗುಂಪಾಗಿದ್ದು, ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅನ್ನು ವಿದೇಶಗಳಲ್ಲಿ ಪ್ರಚಾರ ಮಾಡುತ್ತಾರೆ. ರಾಹುಲ್ ಗಾಂಧಿಯವರ ಆಪ್ತ ಮಿತ್ರ ಸ್ಯಾಮ್ ಪಿತ್ರೋಡಾ ಐಒಸಿಯ ಅಧ್ಯಕ್ಷರಾಗಿದ್ದಾರೆ. ಟರ್ಕಿಯಲ್ಲಿ ಕಚೇರಿ ಆರಂಭ, ಟರ್ಕಿಯರನ್ನೇ ಅಧ್ಯಕ್ಷರನ್ನಾಗಿ ಮಾಡುವ ನಿಲುವು ವಿವಾದಕ್ಕೆ ಕಾರಣವಾಗಿತ್ತು. ಆದರೆ ಈಗ ಟರ್ಕಿ, ಭಾರತದ ಸಂಬಂಧ ಹಳಸಿರುವಾಗ ಮತ್ತೆ ಕಾಂಗ್ರೆಸ್ ಬಗ್ಗೆ ಬೊಟ್ಟು ಮಾಡಿ ತೋರಿಸಲಾಗುತ್ತಿದೆ.

ಹಾಗಾದರೆ ಅಂದು ಟರ್ಕಿಗೆ ಹೋಗಿ ಕಚೇರಿ ತೆರೆ ಯಲು ಕಾಂಗ್ರೆಸ್‌ಗೆ ಹಣ ಎಲ್ಲಿಂದ ಬಂದು ಎಂದು ಪ್ರಶ್ನೆ ಮಾಡಲಾಗುತ್ತಿದೆ. ಹಾಗಾದರೆ ಟರ್ಕಿಯೇ ಕಾಂಗ್ರೆಸ್‌ಗೆ ಸಹಾಯ ಮಾಡಿತ್ತೇ ಎನ್ನುವ ಪ್ರಶ್ನೆ ಉದ್ಭ ವಿಸಿದೆ. ಪತ್ರಿಕಾ ಗೋಷ್ಠಿಯಲ್ಲಿ ಕಾಂಗ್ರೆಸ್ ನಾಯಕ ರಾದ ಜೈರಾಮ್ ರಮೇಶ್, ಪವನ್ ಖೇರಾ ಅವರನ್ನು ಟರ್ಕಿಯ ಬಹಿಷ್ಕಾರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದಾಗ, ಅವರು ತಕ್ಷಣಕ್ಕೆ ಯಾವುದೇ ಸ್ಪಷ್ಟ ಉತ್ತರ ವನ್ನು ನೀಡಲು ಸಾಧ್ಯವಾಗಲಿಲ್ಲ. ಈ ವಿಷಯವಾಗಿ ಬಿಜೆಪಿ ಅವರ ಮೇಲೆ ದಾಳಿ ಮಾಡಿತ್ತು.

## ನೀರವ್ ಮೋದಿ ಜಾಮೀನು ಅರ್ಜಿ ತಿರಸ್ಕರಿಸಿದ ಲಂಡನ್ ಹೈಕೋರ್ಟ್



**ನವದೆಹಲಿ:** ಪಂಜಾಬ್ ನ್ಯಾಷನಲ್ ಬ್ಯಾಂಕ್ ವಂಚನೆ ಪ್ರಕರಣದಲ್ಲಿ ಭಾರತೀಯ ನ್ಯಾಯಾಲಯಗಳನ್ನು ಎದುರಿಸಲು ತನ್ನನ್ನು ಗಡಿಪಾರು ಮಾಡುವುದನ್ನು ವಿರೋಧಿಸಿ ಆರು ವರ್ಷಗಳಿಗೂ ಹೆಚ್ಚು ಕಾಲ ಯುಕೆ ಜೈಲಿನಲ್ಲಿ ಜೈಲಿನಲ್ಲಿದ್ದ ವಜ್ರದ ವ್ಯಾಪಾರಿ ನೀರವ್ ಮೋದಿ ಸಲ್ಲಿಸಿದ್ದ ಹೊಸ ಜಾಮೀನು ಅರ್ಜಿಯನ್ನು ಲಂಡನ್ ಹೈ ಕೋರ್ಟ್ ತಿರಸ್ಕರಿಸಿದೆ.ಈ ಪ್ರಕರಣದಲ್ಲಿ ತನ್ನ ಚಿಕ್ಕಪ್ಪ ಮೆಹುಲ್ ಚೋಕ್ಸಿ ಜೊತೆ ಕೈಜೋಡಿಸಿದ ಆರೋಪ ಅವರ ಮೇಲಿದೆ.54 ವರ್ಷದ ಅವರ ಕಾನೂನು ಸಲಹೆಗಾರರು ಸಮಯದ ಉಲ್ಲಂಘನೆ, ಲಂಡನ್ ಜೈಲಿನಲ್ಲಿ ಅವರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಿದ ಕಾರಣ ಜಾಮೀನು ನೀಡುವಂತೆ ವಾದಿಸಿದರು.

ಆದಾಗ್ಯೂ, ನ್ಯಾಯಮೂರ್ತಿ ಮೈಕೆಲ್ ಫೋರ್ಡ್ ಹ್ಯಾಮ್ ಅವರು ರಾಯಲ್ ಕೋರ್ಟ್ಸ್ 9 ಆಫ್ ಜಸ್ಟೀಸ್‌ನಲ್ಲಿ ನೀರವ್ ಅವರಿಗೆ ವಿಮಾನ ಹಾರಾಟದ ಅಪಾಯವಿದೆ ಮತ್ತು ಅವರ ಪ್ರಕರಣದಲ್ಲಿ ಸಾಕ್ಷಿಗಳ ಮೇಲೆ ಪ್ರಭಾವ ಬೀರಲು ಅವರ ಬಳಿ ಹಣವಿದೆ ಎಂದು ತೀರ್ಪು ನೀಡಿದರು.

ಕ್ರೌನ್ ಪ್ರಾಸಿಕ್ಯೂಷನ್ ಸರ್ವಿಸ್ ವಕೀಲರು ಜಾಮೀನು ವಾದಗಳನ್ನು ಬಲವಾಗಿ ವಿರೋಧಿಸಿದರು, ಈ ಉದ್ದೇಶಕ್ಕಾಗಿ ಲಂಡನ್‌ಗೆ ಪ್ರಯಾಣಿಸಿದ ತನಿಖಾಧಿಕಾರಿಗಳು, ಕಾನೂನು ಅಧಿಕಾರಿ ಗಳನ್ನು ಒಳಗೊಂಡ ಬಲವಾದ ಸಿಬಿಐ ತಂಡವು ಅವರಿಗೆ ಉತ್ತಮ ವಾಗಿ ಸಹಾಯ ಮಾಡಿತು ಎಂದು ಕೇಂದ್ರ ತನಿಖಾ ದಳ ನವದೆಹಲಿಯಲ್ಲಿ ಹೇಳಿಕೆಯಲ್ಲಿ ತಿಳಿಸಿದೆ.

ಭಾರತದಲ್ಲಿ ನೀರವ್ ವಿರುದ್ಧ ಮೂರು ಸೆಟ್‌ಗಳ ಕ್ರಿಮಿನಲ್ ಮೊಕದ್ದಮೆಗಳಿವೆ ಪಂಜಾಬ್ ನ್ಯಾಷನಲ್ ಬ್ಯಾಂಕ್ ಮೇಲಿನ ವಂಚನೆಯ ಸಿಬಿಐ ಪ್ರಕರಣ, ಆ ವಂಚನೆಯ ಆದಾಯದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಇಡಿ ಪ್ರಕರಣ, ಸಿಬಿಐ ವಿಚಾರಣೆಯಲ್ಲಿ ಸಾಕ್ಷ್ಯಗಳು, ಸಾಕ್ಷಿಗಳೊಂದಿಗೆ ಹಸ್ತಕ್ಷೇಪ ಮಾಡಿದ ಆರೋಪವನ್ನು ಒಳಗೊಂಡ ಮೂರನೇ ಸೆಟ್ ಕ್ರಿಮಿನಲ್ ಮೊಕದ್ದಮೆ ಗಳಿವೆ. ಮಾರ್ಚ್ 19, 2019 ರಂದು ಅವರನ್ನು ಹಸ್ತಾಂತರ ವಾರಂಟ್ ಮೇಲೆ ಬಂಧಿಸಲಾಯಿತು, ಆಗಿನ ಯುಕೆ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಏ. 2021ರಲ್ಲಿ ಅವರನ್ನು ಹಸ್ತಾಂತರಿಸಲು ಆದೇಶಿಸಿದರು. ನೀರವ್ ಅವರು ಈ ಪ್ರಕರಣದಲ್ಲಿ ಲಂಡನ್‌ನ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಕಾನೂನು ಮೇಲೆ ಮೇಲ್ಮನವಿ ಗಳನ್ನು ಪೂರ್ಣಗೊಳಿಸಿದ್ದಾರೆ ಮತ್ತು ಹಿಂದಿನ ಹಲವಾರು ಜಾಮೀನು ಅರ್ಜಿಗಳನ್ನು ಸಲ್ಲಿಸಿದ್ದಾರೆ.

**ಒಂದು ವರ್ಷದ ಹಿಂದೆ ಮೇ 2024 ರಲ್ಲಿ ಲಂಡನ್ ವೆಸ್ಟ್ಮಿನಿಸ್ಟರ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಅವರ ಕೊನೆಯ ಪ್ರಯತ್ನವಾಗಿತ್ತು. ಈ ವರ್ಷದ ಆರಂಭದಲ್ಲಿ, ಅವರು ಥೇಮ್ ಸೈಡ್ ಜೈಲಿನಿಂದ ವಿಡಿಯೋ ಲಿಂಕ್ ಮೂಲಕ ಲಂಡನ್ ಹೈಕೋರ್ಟ್‌ನ ಮತ್ತೊಂದು ವಿಚಾರಣೆಗೆ ಹಾಜರಾಗಿದ್ದರು, ಬ್ಯಾಂಕ್ ಆಫ್ ಇಂಡಿಯಾ ಅವರೊಂದಿಗೆ ಸಂಪರ್ಕ ಹೊಂದಿದ ದುಬೈ-ಸಂಯೋಜಿತ ಕಂಪನಿಯು ಬಾಕಿ ಇರುವ 8 ಮಿಲಿಯನ್ ಗಿಂತಲೂ ಹೆಚ್ಚಿನ ಮೊತ್ತದ ಸಾಲವನ್ನು ಮರುಪಾವತಿಸುವುದನ್ನು ತಡೆಯುವಂತೆ ಕೋರಿದರು.**

## ಶಸ್ತ್ರಾಸ್ತ್ರ ಖರೀದಿಗೆ ಹೆಚ್ಚುವರಿ 50 ಸಾವಿರ ಕೋಟಿ ನೀಡಲು ಮುಂದಾದ ಕೇಂದ್ರ



**ನವದೆಹಲಿ:** ಉಗ್ರರ ವಿರುದ್ಧ ಸಮರ ಸಾರಿರುವ ಭಾರತ ಮುಂದಿನ ಬಜೆಟ್‌ನಲ್ಲಿ 50 ಸಾವಿರ ಕೋಟಿ ರೂ.ಅನ್ನು ರಕ್ಷಣಾ ಬಜೆಟ್‌ನಲ್ಲಿ ಮೀಸಲಿಡುವ ಸಾಧ್ಯತೆ ಇದೆ.ಇದರಲ್ಲಿ ಹೊಸ ಶಸ್ತ್ರಾಸ್ತ್ರ, ಮದ್ದುಗುಂಡುಗಳ ಖರೀದಿ, ತಂತ್ರಜ್ಞಾನಕ್ಕೆ ಹೆಚ್ಚಿನ ಹಣವನ್ನು ಬಳಸಲು ಯೋಜನೆ ಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಆಪರೇಷನ್ ಸಿಂಧೂರ್ ಶಕ್ತಿ ಪ್ರದರ್ಶನಕ್ಕೆ ಪಾಕಿ ಸ್ತಾನ ಕಂಗಾಲಾಗಿದೆ. ಈ ಭಯ ಕಂಡು ಭಾರತವು ಸಂಭ್ರಮ ಪಟ್ಟಿದೆ. ಇದೇ ಕಾರಣಕ್ಕೆ ಭಾರತ ಪಾಕಿಸ್ತಾನವನ್ನು ಮತ್ತಷ್ಟು ಅಶಾಂತಗೊಳಿಸಲು ಸಿದ್ಧತೆಗಳನ್ನು ಮಾಡಿಕೊಂಡಿದೆ. ಮೂಲಗಳ ಪ್ರಕಾರ ಭಾರತ ಸರ್ಕಾರ ಆಪರೇಷನ್ ಸಿಂಧೂರ್‌ಗಾಗಿ ರಕ್ಷಣಾ ಬಜೆಟ್‌ಗೆ ಹೆಚ್ಚುವರಿಯಾಗಿ 50,000 ಕೋಟಿ ರೂ.ಗಳನ್ನು ಸೇರಿಸಬಹುದು. ಅದರ ಪ್ರಸ್ತಾವನೆ ಈಗಾಗಲೇ ಸಿದ್ಧವಾಗಿದೆ. ಸರ್ಕಾರ ಈ ಹೆಚ್ಚುವರಿ ಮೊತ್ತವನ್ನು ಅನುಮೋದಿಸಿದರೆ, 2025-26ರ ಆರ್ಥಿಕ ವರ್ಷದಲ್ಲಿ ಒಟ್ಟು ರಕ್ಷಣಾ ಬಜೆಟ್ 7 ಲಕ್ಷ ಕೋಟಿ ರೂ.ಗಳನ್ನು ದಾಟುತ್ತದೆ. ಇದರಿಂದ ಮುಂದೆ ಮಂಡನೆಯಾಗುವ ಬಜೆಟ್ ನಲ್ಲಿ ರಕ್ಷಣಾ ಬಜೆಟ್ ಹೆಚ್ಚಿನ ಶಕ್ತಿ ಪಡೆಯುವ ಸಾಧ್ಯತೆಯಿದೆ.

ಆಪರೇಷನ್ ಸಿಂದೂರ್ ಅನಂತರ ಹೊಸ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳ ಖರೀದಿ, ತಂತ್ರಜ್ಞಾನಕ್ಕೆ ಹೆಚ್ಚಿನ ಖರ್ಚು ಮಾಡಲು ನಿರ್ದೇಶಿಸಲಾಗಿದೆ ಎನ್ನಲಾಗಿದೆ. ಸಂಸತ್ತಿನ ಚಳಿ ಗಾಲದ ಅಧಿವೇಶನದಲ್ಲಿ ಇದಕ್ಕೆ ಅನುಮೋದನೆ ಸಿಗುವ ಸಾಧ್ಯತೆ ಇದೆ. ಹೆಚ್ಚುವರಿ ಹಣ ಸಿಗುವುದರಿಂದ ಸಶಸ್ತ್ರ ಪಡೆಗಳ ಅಗತ್ಯತೆಗಳು, ಅಗತ್ಯ ಖರೀದಿಗಳು ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಪ್ರಯೋಜನ ಸಿಗಲಿದೆ.ಇದಲ್ಲದೆ, ಈ ಹಣವನ್ನು ಸೇನೆಯ ಇತರ ಅಗತ್ಯಗಳನ್ನು ಪೂರೈಸಲು ಸಹ ಬಳಸಲಾಗುತ್ತದೆ. ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ 50 ಸಾವಿರ ಕೋಟಿ ರೂ.ಗಳ ಹಂಚಿಕೆಗೆ ಅನುಮೋದನೆ ಸಿಗುವ ನಿರೀಕ್ಷೆಯಿದೆ.

**ರಕ್ಷಣಾ ಬಜೆಟ್ ನಿರಂತರವಾಗಿ ಹೆಚ್ಚುತ್ತಿದೆ:** ವಾಸ್ತವವಾಗಿ, 2014 ರಲ್ಲಿ ಅಧಿಕಾರಕ್ಕೆ ಬಂದ ನಂತರ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ರಕ್ಷಣೆಯನ್ನು ತನ್ನ ಕೇಂದ್ರಬಿಂದುವನ್ನಾಗಿ ಮಾಡಿಕೊಂಡಿದೆ. ಮೊದಲ ವರ್ಷದಲ್ಲಿ ಮೋದಿ ಸರ್ಕಾರ ರಕ್ಷಣಾ ಸಚಿವಾಲಯಕ್ಕೆ 2.29 ಲಕ್ಷ ಕೋಟಿ ರೂ.ಗಳನ್ನು ಹಂಚಿಕೆ ಮಾಡಿತು, ಇದು ಕಳೆದ ದಶಕದಲ್ಲಿ ಹಂಚಿಕೆ ಮಾಡಿದ್ದಕ್ಕಿಂತ ಮೂರು ಪಟ್ಟು ಹೆಚ್ಚು. ಈ ಬಾರಿ ಭಾರತದ ಒಟ್ಟು ಬಜೆಟ್‌ನ ಶೇ. 13 ರಷ್ಟು ಭಾಗವನ್ನು ರಕ್ಷಣೆಗೆ ಮೀಸಲಿಡಲಾಗಿದೆ. ಇದು ಎಲ್ಲಾ ಸಚಿವಾಲಯಗಳಲ್ಲಿ ಅತ್ಯಧಿಕವಾಗಿದೆ. ಪಾಕಿಸ್ತಾನ ದೊಂದಿಗಿನ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ ಮಿಲಿಟರಿ ಸನ್ನದ್ಧತೆಗೆ ಈ ಒತ್ತು ನೀಡಲಾಗುತ್ತಿದೆ.

## ಟಿಎಂಸಿ ನಿರ್ಧಾರವನ್ನು ಖಂಡಿಸಿದ ಬಿಜೆಪಿ

**ಕೊಲ್ಕತ್ತ:** ಪ್ರತಿಭಟನಾ ನಿರತ ಶಾಲಾ ಶಿಕ್ಷಕರ ವಿರುದ್ಧ ಟಿಎಂಸಿ ಸರ್ಕಾರ ನಡೆಸಿದ ಲಾಠಿ ಚಾರ್ಜ್ ಕ್ರೌರ್ಯದ ಪರಮಾವಧಿಯಾಗಿತ್ತು ಎಂದು ಬಿಜೆಪಿ ಟೀಕಿಸಿದೆ. ರಾಜ್ಯ ಶಿಕ್ಷಣ ಇಲಾಖೆಯ ಪ್ರಧಾನ ಕಚೇರಿ ಬಳಿ ಪ್ರತಿಭಟನಾ ನಿರತ ಶಾಲಾ ಶಿಕ್ಷಕರ ಮೇಲೆ, ಪೊಲೀಸರು ಲಾಠಿ ಚಾರ್ಜ್ ಮಾಡಿದ್ದರು.

2016ರಲ್ಲಿ ಶಾಲಾ ಶಿಕ್ಷಕರ ನೇಮಕಾತಿಗಾಗಿ ಜರುಗುವ ಎಸ್‌ಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣ ರಾಗಿದ್ದವರ ನೇಮಕಾತಿಯನ್ನು ಕೋರ್ಟ್ ತಡೆ ಹಿಡಿದ ಕಾರಣ, ನಿರುದ್ಯೋಗಿಗಳಾಗಿರುವ ಶಾಲಾ ಶಿಕ್ಷಕರು ಪ್ರತಿಭಟನೆ ನಡೆಸುತ್ತಿದ್ದರು. ಪ್ರತಿಭಟನಾ ನಿರತ ಶಿಕ್ಷಕರ ಮೇಲಿನ ದಾಳಿಯನ್ನು, ಪಶ್ಚಿಮ ಬಂಗಾಳ ವಿರೋಧ ಪಕ್ಷದ ನಾಯಕ, ಬಿಜೆಪಿ ಶಾಸಕ ಸುವೆಂದು ಅಧಿಕಾರಿ ಖಂಡಿಸಿದ್ದಾರೆ.

ಇದು ಪಶ್ಚಿಮ ಬಂಗಾಳದಲ್ಲಿರುವ ಸರ್ವಾಧಿ ಕಾರಿ ಧೋರಣೆ, ಇಲ್ಲಿನ ಸರ್ಕಾರವು ಭ್ರಷ್ಟರನ್ನು ರಕ್ಷಿಸುತ್ತಿರುವುದನ್ನು ತೋರಿಸುತ್ತಿದೆ ಎಂದು ಕಿಡಿ ಕಾರಿದ್ದಾರೆ. ಚಿನ್ನದ ಪದಕ ಪಡೆದಿದ್ದವರು ಕೂಡ ನಿನ್ನೆಯ ಪ್ರತಿಭಟನೆಯ ವೇಳೆ ಕಣ್ಣೀರು ಹಾಕುತ್ತಿದ್ದರು. ಇದಕ್ಕೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಅವರ ಸಚಿವರೇ ನೇರ ಹೊಣೆಯಾಗಿದ್ದಾರೆ ಎಂದು ಆರೋಪಿಸಿದರು.

ಶಿಕ್ಷಣ ಇಲಾಖೆಯ ಪ್ರಧಾನ ಕಚೇರಿಯ ಒಳಗಡೆ, ಪ್ರತಿಭಟನಾಕಾರರು ನುಸುಳಲು ಪ್ರಯತ್ನಪಟ್ಟಿದ್ದರಿಂದ, ಅದನ್ನು ತಪ್ಪಿಸಲು ಲಾಠಿ ಚಾರ್ಜ್ ಮಾಡಬೇಕಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯಲ್ಲಿ 19 ಜನ ಪೊಲೀಸ್ ಸೇರಿದಂತೆ ಪ್ರತಿಭಟನಾ ನಿರತ ಹಲ ವರಿಗೆ ಗಂಭೀರ ಗಾಯವಾಗಿದೆ.

# ಮತ್ತೆ ಕೊರೋನಾ ಭೀತಿ ಶುರು, ಹೊಸ ಸೋಂಕು ಪತ್ತೆ

### ಕೋವಿಡ್‌ನಿಂದಾಗಿ ಆಸ್ಪತ್ರೆಗೆ ದಾಖಲಾಗುವವರ ಪ್ರಕರಣಗಳು ಸುಮಾರು ಶೇ.30 ರಷ್ಟು ಹೆಚ್ಚಳ



ಪಾಸಿಟಿವ್ ದರವು ದ್ವಿಗುಣ

**ಸಿಂಗಾಪುರ:** ಏಷ್ಯಾದ ಹಲವು ಭಾಗಗಳಲ್ಲಿ ಹೊಸ ಸೋಂಕು ಹರಡುತ್ತಿರುವುದರಿಂದ ಹಾಂಗ್ ಕಾಂಗ್, ಸಿಂಗಾಪುರದ ಆರೋಗ್ಯ ಅಧಿಕಾರಿಗಳು ಕೋವಿಡ್ -19 ಪ್ರಕರಣಗಳಲ್ಲಿ ತೀವ್ರ ಏರಿಕೆಯ ಬಗ್ಗೆ ಎಚ್ಚರಿಕೆ ನೀಡಿದ್ದಾರೆ ಎಂದು ಬ್ಲೂಮ್ ಬರ್ಗ್ ವರದಿ ಮಾಡಿದೆ. ಹಾಂಗ್ ಕಾಂಗ್‌ನ ಆರೋಗ್ಯ ರಕ್ಷಣಾ ಕೇಂದ್ರದ ಸಾಂಕ್ರಾಮಿಕ ರೋಗ ಶಾಖೆಯ ಮುಖ್ಯಸ್ಥ ಆಲ್ಬರ್ಟ್ ಅವರು, ನಗರದಲ್ಲಿ ಕೋವಿಡ್ -19 ಚಟುವಟಿಕೆ ಈಗ ಸಾಕಷ್ಟು ಹೆಚ್ಚಾಗಿದೆ ಎಂದು ಸ್ಥಳೀಯ ಮಾಧ್ಯಮಗಳಿಗೆ ತಿಳಿಸಿ ದ್ದಾರೆ. ಕೋವಿಡ್ -19ಗೆ ಧನಾತ್ಮಕವಾಗಿ ಸಾಬೀತಾದ ಉಸಿರಾಟದ ಮಾದರಿಗಳ ಸಂಖ್ಯೆ ಕಳೆದ ವರ್ಷ ಉತ್ತುಂಗದಲ್ಲಿತ್ತು. ತೀವ್ರ ಪ್ರಕರಣಗಳು, ಸಾವಿನ ಸಂಖ್ಯೆ ಗರಿಷ್ಠ ಮಟ್ಟವನ್ನು ತಲುಪಿತು, ಮೇ 3ರವರೆಗಿನ ವಾರದಲ್ಲಿ 31 ತೀವ್ರ ಪ್ರಕರಣಗಳು ದಾಖಲಾಗಿವೆ. ಈ ಮೇ ತಿಂಗಳಲ್ಲಿ ಸುಮಾರು ಒಂದು ವರ್ಷದ ಪ್ರಕರಣಗಳ ಕುರಿತು ದೇಶದ ಆರೋಗ್ಯ ಸಚಿವಾಲಯವು ತನ್ನ ಮೊದಲ ನವೀಕರಣವನ್ನು ವರದಿ ಮಾಡಿದೆ. ಮೇ 3ಕ್ಕೆ ಕೊನೆಗೊಂಡ ವಾರದಲ್ಲಿ ಕೋವಿಡ್ ಪ್ರಕರಣಗಳು ಶೇ. 28 ರಷ್ಟು ಹೆಚ್ಚಾಗಿದ್ದು, ಹಿಂದಿನ ವಾರಕ್ಕಿಂತ ಸುಮಾರು 14,200 ಕ್ಕೆ ತಲುಪಿದೆ. ಕೋವಿಡ್‌ನಿಂದಾಗಿ ಆಸ್ಪತ್ರೆಗೆ ದಾಖಲಾಗುವವರ ಪ್ರಕರಣಗಳು ಸುಮಾರು ಶೇ.30 ರಷ್ಟು ಹೆಚ್ಚಾಗಿದೆ.ನಿರ್ದಿಷ್ಟ ಏರಿಕೆ ಕಂಡು ಬಂದರೆ ಮಾತ್ರ ಸಿಂಗಾಪುರ ಪ್ರಕರಣಗಳ ಸಂಖ್ಯೆ ಯನ್ನು ವರದಿ ಮಾಡುತ್ತದೆ. ಜನಸಂಖ್ಯೆಯಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗುವುದರ ಪ್ರತಿಫಲ ನವಾಗಿರಬಹುದು ಆದರೆ ಹೊಸ ವೈರಸ್ ತಳಿಗಳು ಹೆಚ್ಚು ಸಾಂಕ್ರಾಮಿಕ, ಹೆಚ್ಚು ಗಂಭೀರ ಕಾಯಿಲೆಗೆ ಕಾರಣವಾಗುತ್ತವೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ಆರೋಗ್ಯ ಸಚಿವಾಲಯ ಸೂಚಿಸಿದೆ. ಹಾಂಗ್ ಕಾಂಗ್ ಪಾಪ್ ತಾರೆ ಈಸನ್ ಚಾನ್ ಅವರಿಗೆ ಕೋವಿಡ್ ಪಾಸಿಟಿವ್ ಇರುವುದು ಕಂಡುಬಂದಿದ್ದು, ಅವರ ತೈವಾನ್ ಸಂಗೀತ ಕಚೇರಿಗಳನ್ನು ಮುಂದೂಡಬೇಕಾಯಿತು ಎಂದು ಅವರ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆ ವೀಬೊದಲ್ಲಿ ತಿಳಿಸಿದೆ.

ಚೀನಾ ಕೂಡ ಕೋವಿಡ್‌ನ ಹೊಸ ಅಲೆಯನ್ನು ಅನುಭವಿ ಸುತ್ತಿದೆ ಎಂದು ಬ್ಲೂಮ್‌ಬರ್ಗ್ ವರದಿ ಮಾಡಿದೆ, ಇದು ಕಳೆದ ಬೇಸಿಗೆಯ ಉತ್ತುಂಗವನ್ನು ತಲುಪುವ ನಿರೀಕ್ಷೆಯಿದೆ.

ಮೇ 4 ರವರೆಗಿನ ಐದು ವಾರಗಳಲ್ಲಿ ಚೀನಾದ ಜನರಲ್ಲಿ ಕೋವಿಡ್ ಪರೀಕ್ಷಾ ಪಾಸಿಟಿವ್ ದರವು ದ್ವಿಗುಣಗೊಂಡಿದೆ. ಈ ವರ್ಷ ಥೈಲ್ಯಾಂಡ್‌ನ ರೋಗ ನಿಯಂತ್ರಣ ಇಲಾಖೆಯಿಂದ ಎರಡು ಪ್ರಮುಖ ಕೋವಿಡ್ ಏಕಾಏಕಿ ವರದಿಯಾಗಿದೆ, ಕಳೆದ ಏಪ್ರಿಲ್‌ನಲ್ಲಿ ಜನರನ್ನು ಜನ ಸಂದಣಿಯಲ್ಲಿ ಒಟ್ಟುಗೂಡಿಸುವ ಸಾಂಗ್‌ಕ್ರಾನ್ ಹಬ್ಬದ ನಂತರ ಪ್ರಕರಣಗಳು ಹೆಚ್ಚುತ್ತಿವೆ.

### ಕಾಲಕಾಲಕ್ಕೆ ಸೋಂಕಿನ ಅಲೆ

**ಏಷ್ಯಾದಾದ್ಯಂತ, ಕೋವಿಡ್ ಸೋಂಕುಗಳು ತಿಂಗಳುಗಳಿಂದ ಹೆಚ್ಚುತ್ತಿವೆ, ಕಾಲಕಾಲಕ್ಕೆ ಸೋಂಕಿನ ಅಲೆಗಳು ಮರುಕಳಿಸುತ್ತಿವೆ. ಆರೋಗ್ಯ ಅಧಿಕಾರಿಗಳು ಪ್ರತಿಯೊಬ್ಬರೂ ತಮ್ಮ ಲಸಿಕೆಗಳನ್ನು ತೆಗೆದುಕೊಳ್ಳುವಂತೆ ನೆನಪಿಸುತ್ತಿದ್ದಾರೆ, ವಿಶೇಷವಾಗಿ ಹೆಚ್ಚಿನ ಅಪಾಯದಲ್ಲಿ ರುವವರಿಗೆ ಬೂಸ್ಟರ್ ಚುಚ್ಚುಮದ್ದುಗಳನ್ನು ಪಡೆಯ ಬೇಕು. ಬೇಸಿಗೆಯಲ್ಲಿ ಕೋವಿಡ್ ಪ್ರಕರಣಗಳಲ್ಲಿ ಇತ್ತೀಚೆಗೆ ಕಂಡುಬಂದ ಏರಿಕೆ, ಇತರ ವೈರಸ್‌ಗಳು ಸಾಮಾನ್ಯವಾಗಿ ದುರ್ಬಲಗೊಳ್ಳುವುದರಿಂದ, ಬೇಸಿಗೆಯಲ್ಲಿಯೂ ಕೋವಿಡ್ ಸಾಂಕ್ರಾಮಿಕವಾಗಿ ಉಳಿಯುತ್ತದೆ ಎಂದು ತೋರಿಸುತ್ತದೆ.**

### ಕೊಳಚೆ ನೀರಿನಲ್ಲಿ ಹೆಚ್ಚಿನ ಕೋವಿಡ್

**ಪ್ರಸ್ತುತ ಸ್ಪೈಕ್ ಹಿಂದಿನ ಎರಡು ವರ್ಷಗಳಲ್ಲಿನ ಅತಿ ದೊಡ್ಡ ಏಕಾಏಕಿಗಳಷ್ಟು ದೊಡ್ಡದಲ್ಲದಿದ್ದರೂ, ಇತರ ಸೂಚಕಗಳು ವೈರಸ್ ಹರಡುತ್ತಿದೆ ಎಂದು ತೋರಿಸುತ್ತವೆ ಎಂದು ವರದಿಯಾಗಿದೆ. ಕೊಳಚೆ ನೀರಿನಲ್ಲಿ ಹೆಚ್ಚಿನ ಕೋವಿಡ್-19 ಪತ್ತೆಯಾಗಿದ್ದು, ಕೋವಿಡ್ ಲಕ್ಷಣಗಳೊಂದಿಗೆ ಹೆಚ್ಚಿನ ಜನರು ಆಸ್ಪತ್ರೆಗಳು, ಚಿಕಿತ್ಸಾಲ ಯಗಳಿಗೆ ಹೋಗುತ್ತಿದ್ದಾರೆ. ಸಿಂಗಾಪುರದಲ್ಲಿ ಕೋವಿಡ್ ಪ್ರಕರಣಗಳ ಉಲ್ಬಣ ಏಷ್ಯಾದ ಮತ್ತೊಂದು ಜನದಟ್ಟಣೆಯ ನಗರವಾದ ಸಿಂಗಾಪುರವು ಸಹ ಹೆಚ್ಚಿನ ಕೋವಿಡ್ ಪ್ರಕರಣಗಳನ್ನು ವರದಿ ಮಾಡುತ್ತಿದೆ.**

## ಮಿನಿ ನ್ಯೂಸ್

### ಜಾರ್ಖಂಡ್‌ನಲ್ಲಿ ಸಿಡಿಲು ಬಡಿದು ಸಿಆರ್‌ಪಿಎಫ್ ಅಧಿಕಾರಿ ಸಾವು

**ರಾಂಚಿ:** ಜಾರ್ಖಂಡ್‌ನಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಯ ವೇಳೆ ಸಿಡಿಲು ಬಡಿದು ಸಿಆರ್‌ಪಿಎಫ್ ಅಧಿಕಾರಿ ಯೊಬ್ಬರು ಸಾವನ್ನಪ್ಪಿದ್ದಾರೆ. ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಕೆರಿಬುರು ಗ್ರಾಮದಲ್ಲಿ ರಾತ್ರಿ 10.30 ರ ಸುಮಾರಿಗೆ ಈ ಘಟನೆ ನಡೆದಿದೆ. ಸಿಆರ್‌ಪಿಎಫ್ 6 ನೇ ಬೆಟಾಲಿಯನ್‌ಗೆ ಸೇರಿದ ಕಮಾಂಡೆಂಟ್‌ಎಂ. ಪ್ರಬೋಸಿಂಗ್(46) ಮೃತ ಅಧಿಕಾರಿ. ಸಹಾಯಕ ಕಮಾಂಡೆಂಟ್ ಎಸ್. ಕೆ. ಮಂಡಲ್ ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಅರಣ್ಯ ಪ್ರದೇಶದಲ್ಲಿ ಭಾರೀ ಮಳೆಯ ನಡುವೆ ಕೇಂದ್ರ ಮೀಸಲು ಪೊಲೀಸ್ ಪಡೆ ಸಿಬ್ಬಂದಿ , ಅಧಿಕಾರಿಗಳು ಕಾರ್ಯಾಚರಣೆಯಲ್ಲಿದ್ದಾಗ ಈ ದುರಂತ ನಡೆದಿದೆ.ಎಂ. ಪ್ರಬೋಸಿಂಗ್ ಅವರು ಮಣಿ ಪುರದ ಪಶ್ಚಿಮ ಇಂಫಾಲ್ ಜಿಲ್ಲೆಯವರಾಗಿದ್ದು, ನಕ್ಸಲ್ ವಿರೋಧಿ ಕಾರ್ಯಾಚರಣೆಗಾಗಿ ಅರಣ್ಯ ಪ್ರದೇಶದಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಗಳನ್ನು ಇವರು ಮುನ್ನಡೆಸುತ್ತಿದ್ದರು.

### ಮರಾಠಾ ಮೀಸಲಾತಿ ಸಂಬಂಧಿಸಿದ ವಿಚಾರಣೆಗೆ ವಿಶೇಷ ನ್ಯಾಯಪೀಠ

**ಮುಂಬೈ:** ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಮರಾಠಾ ಮೀಸಲಾತಿ ಒದಗಿಸುವ ಕಾನೂನಿನ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸುವ ಅರ್ಜಿಗಳನ್ನು ವಿಚಾರಣೆ ನಡೆಸಲು ಬಾಂಬೆ ಹೈಕೋರ್ಟ್ ಇಂದು ಮೂವರು ನ್ಯಾಯಾಧೀಶರ ವಿಶೇಷ ಪೀಠವನ್ನು ರಚಿಸಿದೆ. ಮಹಾರಾಷ್ಟ್ರದ ಜನಸಂಖ್ಯೆಯ ಸುಮಾರು ಮೂರನೇ ಒಂದು ಭಾಗದಷ್ಟು ಇರುವ ಮರಾಠಾ ಸಮುದಾಯಕ್ಕೆ ಶಿಕ್ಷಣ, ಸರ್ಕಾರಿ ಉದ್ಯೋಗಗಳಲ್ಲಿ ಶೇ.10 ರಷ್ಟು ಮೀಸಲಾತಿಯನ್ನು ಒದಗಿಸಿದ 2024ರ ಕಾನೂನು ಕಳೆದ ವರ್ಷ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಯ ಸಮಯದಲ್ಲಿ ರಾಜಕೀಯ ಚರ್ಚೆಯ ಮುಂಚೂಣಿಯಲ್ಲಿತ್ತು. ಶುಕ್ರವಾರ ಹೊರಡಿಸಿದ ನೋಟಿಸ್‌ನಲ್ಲಿ, ನ್ಯಾಯಮೂರ್ತಿಗಳಾದ ರವೀಂದ್ರ ಘುಗೆ, ಎನ್ ಜಿ ಜಮಾದಾರ್, ಸಂದೀಪ್ ಮಾರ್ನೆ ಅವರನ್ನೊಳಗೊಂಡ ಪೂರ್ಣ ಪೀಠವು ಮಹಾರಾಷ್ಟ್ರ ರಾಜ್ಯ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿ ಕಾಯ್ದೆ, 2024 ಕ್ಕೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು ಮತ್ತು ಅರ್ಜಿಗಳನ್ನು ಆಲಿಸಲು ಮತ್ತು ನಿರ್ಧರಿಸಲು ರಚಿಸಲಾಗಿದೆ ಎಂದು ಹೈಕೋರ್ಟ್ ತಿಳಿಸಿದೆ.

ಆದಾಗ್ಯೂ, ನೋಟಿಸ್‌ನಲ್ಲಿ ಅರ್ಜಿಗಳನ್ನು ವಿಚಾರಣೆ ಮಾಡುವ ದಿನಾಂಕವನ್ನು ಉಲ್ಲೇಖಿಸಿಲ್ಲ ಅಥವಾ ನಿರ್ದಿಷ್ಟಪಡಿಸಿಲ್ಲ. ಕಳೆದ ವರ್ಷ, ಮಾಜಿ ಹೈಕೋರ್ಟ್ 9 ಮುಖ್ಯ ನ್ಯಾಯಮೂರ್ತಿ ಡಿ ಕೆ ಉಪಾಧ್ಯಾಯ ನೇತೃತ್ವದ ಪೂರ್ಣ ಪೀಠವು ಮರಾಠರು ಹಿಂದುಳಿದ ಸಮುದಾಯವಲ್ಲ, ಅವರಿಗೆ ಮೀಸಲಾತಿಯ ಪ್ರಯೋಜನಗಳು ಬೇಕಾಗುತ್ತವೆ ಎಂಬ ಕಾರಣಕ್ಕೆ ಕಾನೂನನ್ನು ಪ್ರಶ್ನಿಸಿ ಸಲ್ಲಿಸಲಾದ ಹಲವಾರು ಅರ್ಜಿಗಳ ವಿಚಾರಣೆಯನ್ನು ಪ್ರಾರಂಭಿಸಿತ್ತು. ಮಹಾರಾಷ್ಟ್ರವು ಈಗಾಗಲೇ ಕೋಟಾದ ಮೇಲಿನ ಶೇ. 50 ರ ಮಿತಿಯನ್ನು ದಾಟಿದೆ ಎಂದು ಅರ್ಜಿಗಳು ಹೇಳಿಕೊಂಡಿವೆ. ಆದರೆ, ಈ ವರ್ಷದ ಜನವರಿಯಲ್ಲಿ ಸಿಜೆ ಉಪಾಧ್ಯಾಯ ಅವರನ್ನು ದೆಹಲಿ ಹೈಕೋರ್ಟ್‌ಗೆ ವರ್ಗಾಯಿಸಿದ ನಂತರ ವಿಚಾರಣೆ ಸ್ಥಗಿತಗೊಂಡಿತು.ಮೇ 14 ರಂದು, ಸುಪ್ರೀಂ ಕೋರ್ಟ್ ಬಾಂಬೆ ಹೈಕೋರ್ಟ್‌ಗೆ ವಿಶೇಷ ಪೀಠವನ್ನು ರಚಿಸಿ ಈ ವಿಷಯವನ್ನು ತುರ್ತಾಗಿ ಆಲಿಸುವಂತೆ ನಿರ್ದೇಶನ ನೀಡಿತು.

### ಹರೇ ಕೃಷ್ಣ ಗಿರಿ ದೇವಸ್ಥಾನ: ಇಸ್ಕಾನ್ ಬೆಂಗಳೂರಿಗೆ ಸೇರಿದ್ದು; ಸುಪ್ರೀಂ


**ನವದೆಹಲಿ:** ಇಸ್ಕಾನ್ ಬೆಂಗಳೂರು, ಇಸ್ಕಾನ್ ಮುಂಬೈ ನಡುವಿನ 25 ವರ್ಷಗಳ ಹಳೆಯ ಆಸ್ತಿ ವಿವಾದವನ್ನು ಶುಕ್ರವಾರ ಬಗೆಹರಿಸಿರುವ ಸುಪ್ರೀಂ ಕೋರ್ಟ್, ಬೆಂಗಳೂರಿನ ಹರೇ ಕೃಷ್ಣಗಿರಿಯ ದೇವಸ್ಥಾನವು ಇಸ್ಕಾನ್-ಬೆಂಗಳೂರು ಸಂಸ್ಥೆಗೆ ಸೇರಿದ್ದು ಎಂದು ತೀರ್ಪು ನೀಡಿದೆ. ಬೆಂಗಳೂರಿನಲ್ಲಿರುವ ಐತಿಹಾಸಿಕ ಹರೇ ಕೃಷ್ಣ ದೇವಸ್ಥಾನದ ಹಕ್ಕಿನ ಕುರಿತು ಇಸ್ಕಾನ್ ಮುಂಬೈ ಪರವಾಗಿ ತೀರ್ಪು ನೀಡಿದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಇಸ್ಕಾನ್ ಬೆಂಗಳೂರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿದೆ.

ಕರ್ನಾಟಕದಲ್ಲಿ ನೋಂದಣಿ ಆಗಿರುವ ಇಸ್ಕಾನ್ ಬೆಂಗಳೂರು ದಶಕಗಳಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ, ಬೆಂಗಳೂರಿನ ದೇವಾಲಯದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದೆ. ಇಲ್ಲಿ ಇಸ್ಕಾನ್ ಮುಂಬೈಗೆ ಯಾವುದೇ ಅಧಿಕಾರ ಇಲ್ಲ ಎಂದು ಅರ್ಜಿಯಲ್ಲಿ ವಾದಿಸಲಾಗಿತ್ತು. 1860ರ ರಾಷ್ಟ್ರೀಯ ಸಂಘಗಳ ನೋಂದಣಿ ಕಾಯ್ದೆ ಮತ್ತು ಬಾಂಬೆ ಸಾರ್ವಜನಿಕ ಟ್ರಸ್ಟ್ ಕಾಯ್ದೆ 1950ರ ಅಡಿಯಲ್ಲಿ ಇಸ್ಕಾನ್ ಮುಂಬೈ ನೋಂದಣಿಯಾಗಿದೆ. ಇಸ್ಕಾನ್ ಬೆಂಗಳೂರು ಕೇವಲ ತನ್ನ ಶಾಖೆಯಾಗಿದೆ, ಈ ಆಸ್ತಿಯು ತನ್ನ ವ್ಯಾಪ್ತಿಗೆ ಸೇರಿದೆ' ಎಂದು ಇಸ್ಕಾನ್ ಮುಂಬೈ ವಾದಿಸಿತ್ತು.

### ಬಾಲಕಿ ಮೇಲೆ ಅತ್ಯಾಚಾರ: ಕೇರಳದ ವ್ಯಕ್ತಿಗೆ ಎರಡು ಜೀವಾವಧಿ ಶಿಕ್ಷೆ

**ಪಾಲಕ್ಕಾಡ್:** 2022ರಲ್ಲಿ ತನ್ನ ಸಂಬಂಧಿ 15 ವರ್ಷದ ಬಾಲಕಿ ಮೇಲೆ ಆಕೆಯ ನಿವಾಸದಲ್ಲೇ ಅತ್ಯಾಚಾರ ಎಸಗಿ ಗರ್ಭಿಣಿಯನ್ನಾಗಿ ಮಾಡಿದ ಆರೋಪದ ಮೇಲೆ ಕೇರಳದ ನ್ಯಾಯಾಲಯವು ಶುಕ್ರವಾರ ವ್ಯಕ್ತಿಯೊಬ್ಬನಿಗೆ ಎರಡು ಜೀವಾವಧಿ ಶಿಕ್ಷೆ ವಿಧಿಸಿದೆ. ಪಟ್ಟಾಂಬಿಯ ತ್ವರಿತಗತಿಯ ವಿಶೇಷ ನ್ಯಾಯಾಲಯದ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಸಂಜು ಟಿ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ ಮತ್ತು ಐಪಿಸಿಯ ವಿವಿಧ ನಿಬಂಧನೆಗಳ ಅಡಿಯಲ್ಲಿ ಆ ವ್ಯಕ್ತಿಗೆ 43 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದ್ದಾರೆ ಎಂದು ವಿಶೇಷ ಸರ್ಕಾರಿ ವಕೀಲ ನಿಶಾ ವಿಜಯಕುಮಾರ್ ತಿಳಿಸಿದ್ದಾರೆ. 49 ವರ್ಷದ ವ್ಯಕ್ತಿ ಮೊದಲು 43 ವರ್ಷಗಳ ಕಠಿಣ ಜೈಲು ಶಿಕ್ಷೆಯನ್ನು ಅನುಭವಿಸಬೇಕು ಮತ್ತು ನಂತರ ಪೊಕ್ಸೊ ಕಾಯ್ದೆಯ ಪ್ರತ್ಯೇಕ ನಿಬಂಧನೆಗಳ ಅಡಿಯಲ್ಲಿ ಅವನ ಜೀವಾವಧಿ ಶಿಕ್ಷೆಯು ಪ್ರಾರಂಭವಾಗುತ್ತದೆ ಎಂದು ನ್ಯಾಯಾಲಯವು ನಿರ್ದೇಶಿಸಿರುವುದಾಗಿ ಎಸ್‌ಪಿಪಿ ಹೇಳಿದ್ದಾರೆ.

ನ್ಯಾಯಾಲಯವು ಅಪರಾಧಿಗೆ 4 ಲಕ್ಷ ದಂಡವನ್ನೂ ವಿಧಿಸಿದೆ. ಆ ಮೊತ್ತವನ್ನು ಸಂತ್ರಸ್ತೆಗೆ ನೀಡಬೇಕೆಂದೂ ನ್ಯಾಯಾಲಯ ನಿರ್ದೇಶಿಸಿದೆ. ಇದಲ್ಲದೆ, ಸಂತ್ರಸ್ತೆಗೆ ಹೆಚ್ಚುವರಿ ಪರಿಹಾರವನ್ನು ನೀಡುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿದೆ ಎಂದು ಪ್ರಾಸಿಕ್ಯೂಟರ್ ತಿಳಿಸಿದ್ದಾರೆ. ಪ್ರಾಸಿಕ್ಯೂಷನ್ ಪ್ರಕಾರ, ಸಂತ್ರಸ್ತೆ ಮೇಲೆ ಆರೋಪಿಯು ಆಕೆಯ ನಿವಾಸದಲ್ಲೇ ಯಾರೂ ಇಲ್ಲದ ಸಮಯದಲ್ಲಿ ಅತ್ಯಾಚಾರ ಎಸಗಿದ್ದ. ಬಳಿಕ, ಬಾಲಕಿ ಗರ್ಭಿಣಿಯಾಗಿದ್ದಳು. ವಿಚಾರಣೆಯ ಸಮಯದಲ್ಲಿ, ಆರೋಪಿ ತಪ್ಪಿತಸ್ಥನೆಂದು ನಿರ್ಧರಿಸಲು ನ್ಯಾಯಾಲಯವು 20 ಸಾಕ್ಷಿಗಳು, 35 ದಾಖಲೆಗಳನ್ನು ಪರಿಶೀಲಿಸಿತು ಎಂದು ಎಸ್‌ಪಿಪಿ ಹೇಳಿದ್ದಾರೆ.



# ಹರಿ ಹರ ವೀರ ಮಲ್ಲು ರಿಲೀಸ್ ಡೇಟ್ ಫಿಕ್ಸ್?

ಪವನ್ ಕಲ್ಯಾಣ್ ಅವರು ಕೊನೆಗೂ ಒಪ್ಪಿಕೊಂಡ ಸಿನಿಮಾವನ್ನು ಪೂರ್ಣಗೊಳಿಸಿದ್ದಾರೆ. 'ಹರಿ ಹರ ವೀರ ಮಲ್ಲು' ಸಿನಿಮಾದ ಹೊಸ ಬಿಡುಗಡೆ ದಿನಾಂಕವನ್ನು ಚಿತ್ರತಂಡ ತಿಳಿಸಿದೆ. ರಾಜಕೀಯದಲ್ಲಿ ಪವನ್ ಕಲ್ಯಾಣ್ ಬ್ಯುಸಿಯಿದ್ದ ಹಿನ್ನೆಲೆ ಈ ಚಿತ್ರ ಅರ್ಧಕ್ಕೆ ನಿಂತಿತ್ತು. ಕೊನೆಗೂ ಬಿಡುವು ಮಾಡಿಕೊಂಡು 'ಹರಿ ಹರ ವೀರ ಮಲ್ಲು' ಚಿತ್ರವನ್ನು ನಟ ಮುಗಿಸಿಕೊಟ್ಟಿದ್ದಾರೆ. ಮೇ 9ರಂದು ಬಿಡುಗಡೆಯಾಗಬೇಕಿದ್ದ ಈ ಸಿನಿಮಾ ಜೂನ್ 12ರಂದು ರಿಲೀಸ್ ಆಗಲಿದೆ. ಇದನ್ನು ಚಿತ್ರತಂಡ ಅಧಿಕೃತವಾಗಿ ತಿಳಿಸಿದೆ. ಇದಕ್ಕೆ ಅಭಿಮಾನಿಗಳಿಂದ ಉತ್ತಮ ರೆಸ್ಪಾನ್ಸ್ ಸಿಕ್ಕಿತ್ತು. ಇದೀಗ ಬಿಡುಗಡೆ ಘೋಷಣೆ ಮಾಡಿ ಗುಡ್ ನ್ಯೂಸ್ ಕೊಟ್ಟಿರೋದು ನಟನ ಫ್ಯಾನ್ಸ್‌ಗೆ ಖುಷಿ ಕೊಟ್ಟಿದೆ. ಈ ಸಿನಿಮಾದಲ್ಲಿ ಪವನ್ ಜೊತೆ ನಿಧಿ ಅಗರ್ವಾಲ್, ಬಾಬಿ ಡಿಯೋಲ್ ಸೇರಿದಂತೆ ಅನೇಕರು ನಟಿಸಿದ್ದಾರೆ. ಶ್ರೀಲೀಲಾ ಜೊತೆಗಿನ ಉಸ್ತಾದ್ ಭಗತ್ ಸಿಂಗ್ ಚಿತ್ರಗಳು ಪವನ್ ಕಲ್ಯಾಣ್ ಕೈಯಲ್ಲಿದೆ. ಇದರ ಬಗ್ಗೆ ಅದ್ಯಾವಾಗ ಅಪ್‌ಡೇಟ್ ಸಿಗಲಿದೆ ಎಂಬುದನ್ನು ಕಾದುನೋಡಬೇಕಿದೆ.



# ದಿಶಾ ಮೈಮಾಟಕ್ಕೆ ಪಡ್ಡೆ ಹುಡುಗರು ಬೋಲ್ಡ್

ಬಿಕಿನಿ ತೊಟ್ಟು ಸೆಲ್ಫಿ ಕ್ಲಿಕ್ಕಿಸಿದ ನಟಿ

ಬಾಲಿವುಡ್‌ನ ಮೋಸ್ಟ್ ಬ್ಯೂಟಿಫುಲ್ ನಟಿಯರಲ್ಲಿ ಒಬ್ಬರಾಗಿರುವ ದಿಶಾ ಪಟಾನಿ ಸೋಶಿಯಲ್ ಮೀಡಿಯಾದಲ್ಲಿ ಸದಾ ಆಕ್ಟೀವ್. ಜೊತೆಗೆ ಯಾವಾಗಲೂ ಕ್ರೇಜ್ ಕ್ರಿಯೇಟ್ ಮಾಡೋದ್ರಲ್ಲಿ, ಮಾದಕ ನೋಟದ ಫೋಟೋ ಹಂಚಿಕೊಂಡು ಹಲ್‌ಚಲ್ ಎಬ್ಬಿಸೋದ್ರಲ್ಲಿ ಮುಂಚೂಣಿಯಲ್ಲಿರುವ ನಟಿ. ಈಗ ಹೊಸ ಬೋಲ್ಡ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ.

32 ವರ್ಷದ ದಿಶಾ ತಮ್ಮ ಇನ್‌ಸ್ಟಾ ಖಾತೆಯಲ್ಲಿ ಬೆಡ್‌ರೂಮಿನಲ್ಲಿ ಬಿಕಿನಿ ಧರಿಸಿರೋ ಸೆಲ್ಫಿ ಫೋಟೋವೊಂದನ್ನ ಹಂಚಿಕೊಂಡಿದ್ದಾರೆ. ಇದರೊಂದಿಗೆ ಆನೆ ಮುಂದೆ ಕುಳಿತು ಫೋಟೋ ತೆಗೆಯುತ್ತಿರುವ, ತಮ್ಮ ಮುದ್ದಿನ ಬೆಕ್ಕು, ನಾಯಿಗಳ ಫೋಟೋಗಳನ್ನೂ ಹಂಚಿಕೊಂಡಿದ್ದಾರೆ. ಆದ್ರೆ ಕೊನೆಯಲ್ಲಿ ಕನ್ನಡದ ಸಪ್ತ ಸಾಗರದಾಚೆಯೆಲ್ಲೋ ಸಿನಿಮಾ ನೆನಪಿಸುವಂತೆ 'ಹಾಗೇ ಸುಮ್ಮನೆ ಸಾಗರದ ಮುಂದೆ ಕೂತು, ಆ ಅಲೆಗಳ ಸದ್ದು ಕೇಳಬೇಕು' ಎಂದು ಕೈ ಬರಹದ ಚೀಟಿಯ ಫೋಟೋವನ್ನೂ ಹಂಚಿಕೊಂಡಿದ್ದಾರೆ.

ನಟಿ ದಿಶಾ ಪಟಾಣಿ ಮೈಮಾಟ ನೋಡಿ ನೆಟ್ಟಿಗರು ಬೆರಗಾಗಿದ್ದಾರೆ. ಪಡ್ಡೆ ಹುಡುಗರ ನಿದ್ದೆಯಂತೂ ಹಾಳಾಗಿದೆ. ಸಿನಿಮಾಗಳಲ್ಲಿ ಅಲ್ಲದೇ ತನ್ನ ಹಾಟ್ ಬ್ಯೂಟಿ ಮೂಲಕ ಸೋಶಿಯಲ್ ಮೀಡಿಯಾದಲ್ಲಿ ಫಾಲೋವರ್ಸ್ ಬೆಳೆಸಿಕೊಳ್ಳುವಲ್ಲಿ ದಿಶಾ ಮುಂಚೂಣಿಯಲ್ಲಿದ್ದಾರೆ. ಅದಕ್ಕೆ ಆಗಾಗ್ಗೆ ಸೋಶಿಯಲ್ ಮೀಡಿಯಾಗೆ ಬೆಂಕಿ ಹೆಚ್ಚುವಂತಹ ಫೋಟೊಗಳನ್ನ ಹಂಚಿಕೊಳ್ತಾರೆ. ಡಾರ್ಲಿಂಗ್ ಪ್ರಭಾಸ್ ಅಭಿನಯದ ಕಲ್ಕಿ 2898 ಸಿನಿಮಾದಲ್ಲಿ ದಿಶಾ ಪಟಾನಿ ಕಾಣಿಸಿಕೊಂಡಿದ್ದಾರೆ.



# ಅಮ್ಮನ ಸೀರೆ ಗೌನ್ ಮಾಡಿದ ದಿಶಾ ಮದನ್

ಕಾನ್ ಫೆಸ್ಟಿವಲ್‌ನಲ್ಲಿ ಕನ್ನಡತಿ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಫ್ರಾನ್ಸ್‌ನಲ್ಲಿ ಕಾನ್ ಫಿಲ್ಮ್ ಫೆಸ್ಟಿವಲ್‌ಗೆ ಅದ್ದೂರಿಯಾಗಿ ಚಾಲನೆ ಸಿಕ್ಕಿದೆ. ಅತೀ ದೊಡ್ಡ ಚಲನಚಿತ್ರೋತ್ಸವಕ್ಕೆ ದೇಶ ವಿದೇಶದ ನಟ-ನಟಿಯರು ಭಾಗಿಯಾಗುತ್ತಾರೆ. ಇದೀಗ ಈ ಚಲನಚಿತ್ರೋತ್ಸವದಲ್ಲಿ ಕನ್ನಡ ಕಿರುತೆರೆ ನಟಿ ದಿಶಾ ಮದನ್ ಕೂಡ ಭಾಗಿಯಾಗಿದ್ದಾರೆ. ಈ ಬಗ್ಗೆ ನಟಿ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ಅಮ್ಮನ ಸೀರೆಯನ್ನೇ ಗೌನ್ ಮಾಡಿ ಧರಿಸಿದ್ದಾರೆ. ಅಮ್ಮ ಸಿಲ್ಕ್ ಸೀರೆಗೆ ಹೊಸ ರೂಪ ಕೊಟ್ಟು ಸ್ಟೈಲೀಶ್ ಆದ ಗೌನ್ ಮಾಡಿಸಿ ಅದನ್ನು ನಟಿ ಧರಿಸಿದ್ದಾರೆ. ಅದಷ್ಟೇ ಅಲ್ಲ, 2017ರಲ್ಲಿ ತಮ್ಮ ಮದುವೆಯಲ್ಲಿ ಧರಿಸಿದ ಸೀರೆಯನ್ನು ಈ ಕಾರ್ಯಕ್ರಮದಲ್ಲೂ ನಟಿ ತೊಟ್ಟಿದ್ದಾರೆ. ಈ ಬಗ್ಗೆ ಪೋಸ್ಟ್ ಮಾಡಿ, ನನ್ನ ಮದುವೆಯ ಸೀರೆಗಳಲ್ಲಿ ಇದು ಕೂಡ ಒಂದಾಗಿದೆ. ಇದು ಕೇವಲ ಫ್ಯಾಷನ್ ಅಲ್ಲ, ಅದಕ್ಕೂ ಹೆಚ್ಚಾಗಿ ಒಂದು ಆಳವಾದ ಎಮೋಷನ್ಸ್ ಇದೆ ಎಂದು ದಿಶಾ ಬರೆದುಕೊಂಡಿದ್ದಾರೆ.

ಈ ಚಲನಚಿತ್ರೋತ್ಸವ ಮೇ 13ರಿಂದ 24ರವರೆಗೆ ಇದು ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಭಾಗಿಯಾಗಲು ಫಿಲ್ಮ್ ಫೆಸ್ಟಿವಲ್ ಟೀಮ್ ಅಳೆದು ತೂಗಿ ಕೆಲವೇ ಕೆಲವು ತಾರೆಯರಿಗೆ ಮಾತ್ರ ಆಮಂತ್ರಣ ನೀಡುತ್ತಾರೆ. ಕನ್ನಡತಿ ದಿಶಾಗೆ ಈ ಸಿನಿಮಾ ಹಬ್ಬಕ್ಕೆ ಬರಲು ಬಂಪರ್ ಅವಕಾಶ ಸಿಕ್ಕಿದೆ. ಆಹ್ವಾನ ಪತ್ರ ನೀಡಲಾಗಿದೆ. ಈ ಬಗ್ಗೆ ನಟಿ ವಿಡಿಯೋ ಮೂಲಕ ತಿಳಿಸಿದ್ದರು. ದಿಶಾ ಮದನ್ ಹುಟ್ಟಿ ಬೆಳೆದಿದ್ದು ಬೆಂಗಳೂರಲ್ಲಿ. ನಟಿಯ 3ನೇ ವರ್ಷ ಹುಟ್ಟುಹಬ್ಬದ ಸಮಯದಲ್ಲಿ ಅವರನ್ನು ಡ್ಯಾನ್ಸ್ ತರಬೇತಿಗೆ ಸೇರಿಸಲಾಯಿತು.



# ರಾವಣ ಯಶ್ ಪತ್ನಿಯಾಗಿ ಕಾಜಲ್ ಅಗರ್ವಾಲ್

ರಾಕಿಂಗ್ ಸ್ಟಾರ್ ಯಶ್ ಅವರು 'ಟಾಕ್ಸಿಕ್' ಸಿನಿಮಾ ಕೆಲಸದ ನಡುವೆ 'ರಾಮಾಯಣ' ಸಿನಿಮಾದಲ್ಲೂ ನಟಿಸುತ್ತಿದ್ದಾರೆ. ಇದೀಗ ಅವರ 'ರಾಮಾಯಣ' ಸಿನಿಮಾ ಬಗ್ಗೆ ಇಂಟ್ರೆಸ್ಟಿಂಗ್ ಅಪ್‌ಡೇಟ್‌ವೊಂದು ಸಿಕ್ಕಿದೆ. ಯಶ್ ಜೊತೆ ಖ್ಯಾತ ನಟಿ ಕಾಜಲ್ ಅಗರ್ವಾಲ್ ಕೂಡ ನಟಿಸುತ್ತಾರೆ ಎನ್ನಲಾದ ಸುದ್ದಿಯೊಂದು ಹರಿದಾಡುತ್ತಿದೆ. 'ರಾಮಾಯಣ'ದಲ್ಲಿ ರಾಮನಾಗಿ ರಣಬೀರ್ ಕಪೂರ್, ಸೀತೆಯ ಪಾತ್ರದಲ್ಲಿ ಸಾಯಿ ಪಲ್ಲವಿ ನಟಿಸುತ್ತಿದ್ದಾರೆ. ರಾಮನ ಮುಂದೆ ರಾವಣನಾಗಿ ಯಶ್ ಘರ್ಜಿಸಲಿದ್ದಾರೆ. ಸದ್ಯದ ಹಾಟ್ ಟಾಪಿಕ್ ಏನಪ್ಪಾ ಅಂದ್ರೆ, ರಾವಣ ಯಶ್‌ಗೆ ಮಡದಿಯಾಗಿ ಕಾಜಲ್ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ. ಮಂಡೋದರಿ ಪಾತ್ರದಲ್ಲಿ 'ಮಗಧೀರ' ಬೆಡಗಿ ನಟಿಸಲಿದ್ದಾರೆ ಎಂದು ಹೇಳಲಾಗ್ತಿದೆ. ಮೂಲಗಳ ಪ್ರಕಾರ, ಈಗಾಗಲೇ ಕಾಜಲ್ ಮಂಡೋದರಿ ಪಾತ್ರಕ್ಕೆ ಲುಕ್ ಟೆಸ್ಟ್ ಕೊಟ್ಟಿದ್ದು, ಚಿತ್ರೀಕರಣಕ್ಕೂ ಭಾಗಿಯಾಗಿದ್ದಾರೆ ಎನ್ನಲಾಗಿದೆ. ಆದರೆ ಈ ಬಗ್ಗೆ ಚಿತ್ರತಂಡವೇ ಖಾತ್ರಿಪಡಿಸಬೇಕಿದೆ. ಅದೇನೇ ಇರಲಿ ಈ ಸುದ್ದಿ ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ. 'ರಾಮಾಯಣ' ಸಿನಿಮಾವನ್ನು ಎರಡು ಭಾಗಗಳಲ್ಲಿ ತರೋದಾಗಿ ಈಗಾಗಲೇ ಚಿತ್ರತಂಡ ತಿಳಿಸಿದೆ. 2026ರಲ್ಲಿ ಸಿನಿಮಾ ರಿಲೀಸ್ ಆಗಲಿದೆ.



# ನಟಿ ಬ್ಯಾಗ್ ಕದ್ದ ಆರೋಪಿ ಅರೆಸ್ಟ್

'ಭಜರಂಗಿ' ಖ್ಯಾತಿಯ ನಟಿ ರುಕ್ಮಿಣಿ ವಿಜಯ್‌ಕುಮಾರ್ ಅವರ 10 ಲಕ್ಷ ಡೈಮಂಡ್ ರಿಂಗ್, 9 ಲಕ್ಷ ಮೌಲ್ಯದ ರಿಂಗ್ ಕದ್ದ ಆರೋಪಿ ಮಹಮ್ಮದ್ ಮಸ್ತಾನ್‌ನನ್ನು ಬೆಂಗಳೂರಿನ ಕಬ್ಬನ್ ಪಾರ್ಕ್ ಪೊಲೀಸರು ಬಂಧಿಸಿದ್ದಾರೆ. ನಟಿ ರುಕ್ಮಿಣಿ ಅವರ ಬ್ಯಾಗ್‌ನಲ್ಲಿ ದುಬಾರಿ ವಸ್ತುಗಳನ್ನು ಕದ್ದ ಕ್ಯಾಬ್ ಚಾಲಕನಾಗಿದ್ದ ಮಹಮ್ಮದ್ ಈಗ ಪೊಲೀಸರ ಅತಿಥಿಯಾಗಿದ್ದಾನೆ. ಈ ಘಟನೆ ಮೇ 11ರಂದು ಬೆಳಗ್ಗೆ ನಟಿ ವಾಕಿಂಗ್‌ಗೆ ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ಚಿನ್ನಸ್ವಾಮಿ ಸ್ಟೇಡಿಯಂ ಬಳಿಯ ಗೇಟ್ ನಂ.18 ಬಳಿ ರುಕ್ಮಿಣಿ ತಮ್ಮ ಕಾರನ್ನು ನಿಲ್ಲಿಸಿದ್ದರು. ತಮ್ಮ ಕಾರಿನ ಒಳಗೆ ದುಬಾರಿ ಬೆಲೆಯ ಹ್ಯಾಂಡ್‌ಬ್ಯಾಗ್, ಪರ್ಸ್, ಎರಡು ಡೈಮಂಡ್ ರಿಂಗ್, ರೊಲೆಕ್ಸ್ ವಾಚ್ ಇಟ್ಟುಹೋಗಿದ್ದರು. ಆದರೆ, ಅವರು ವಾಕಿಂಗ್ ಹೋಗುವಾಗ ತಮ್ಮ ಕಾರನ್ನು ಲಾಕ್ ಮಾಡುವುದನ್ನು ಮರೆತುಬಿಟ್ಟಿದ್ದರು. ಇದನ್ನು ಕ್ಯಾಬ್ ಚಾಲಕ ಗಮನಿಸಿದ್ದ, ಕಾರಿನೊಳಗಿನ ವಸ್ತುಗಳನ್ನು ಕದ್ದು ಪರಾರಿ ಆಗಿದ್ದ. ಈ ಘಟನೆ ನಡೆದ ಬೆನ್ನಲ್ಲೇ ನಟಿ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಕೂಡಲೇ ಪೊಲೀಸರು ತನಿಖೆ ಕೈಗೊಂಡಿದ್ದರು. ಇದೀಗ ಕ್ಯಾಬ್ ಚಾಲಕನನ್ನು ಬಂಧಿಸಿ ಕದ್ದ ದುಬಾರಿ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ. 1,50,000 ರೂ. ಮೌಲ್ಯದ ಬ್ಯಾಗ್, 75000 ಮೌಲ್ಯದ ಪರ್ಸ್, 10 ಲಕ್ಷ ಮೌಲ್ಯದ ಡಬಲ್ ಬ್ಯಾಂಡೆಡ್ ಡೈಮಂಡ್ ರಿಂಗ್, 9 ಲಕ್ಷ ಮೌಲ್ಯದ ರೊಲೆಕ್ಸ್ ವಾಚ್, 3 ಲಕ್ಷ ಮೌಲ್ಯದ ಡೈಮಂಡ್ ರಿಂಗ್ ಸೇರಿ ಒಟ್ಟು 23 ಲಕ್ಷ ಮೌಲ್ಯದ ವಸ್ತುಗಳು ವಶಕ್ಕೆ ಪಡೆಯಲಾಗಿದೆ.



# 10 ವರ್ಷಗಳ ಇತಿಹಾಸ ಬದಲಿಸುತ್ತಾ ಆರ್‌ಸಿಬಿ

ಕೆಕೆಆರ್ ವಿರುದ್ಧ ಸತತ 5 ಸೋಲು

ಒಂದು ವಾರದ ವಿರಾಮದ ನಂತರ ಮೇ 17 ರಿಂದ ಐಪಿಎಲ್ 2025 ಮತ್ತೆ ಪ್ರಾರಂಭವಾಗಲಿದೆ. ಈ ದಿನ, ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ನಡುವೆ ಪಂದ್ಯ ನಡೆಯಲಿದೆ. ಈ ಲೀಗ್ ಹಂತದ ಪಂದ್ಯದಲ್ಲಿ ಆರ್‌ಸಿಬಿ ಗೆದ್ದರೆ, ಪ್ಲೇಆಫ್‌ನಲ್ಲಿ ಅದರ ಸ್ಥಾನ ದೃಢವಾಗುತ್ತದೆ. ಆದರೆ ಈ ಸೀಸನ್‌ನಲ್ಲಿ ತವರಿನಲ್ಲಿ ಹೆಚ್ಚು ಪಂದ್ಯಗಳನ್ನು ಸೋತಿರುವ ಆರ್‌ಸಿಬಿಗೆ, ತವರಿನಲ್ಲಿ ಕೆಕೆಆರ್ ವಿರುದ್ಧದ ಕಳಪೆ ದಾಖಲೆ ಮತ್ತೊಂದು ತಲೆನೋವಾಗಿ ಪರಿಣಮಿಸಿದೆ. ವಾಸ್ತವವಾಗಿ 2015 ರಿಂದ ಆರ್‌ಸಿಬಿ ಈ ಮೈದಾನದಲ್ಲಿ ಕೋಲ್ಕತ್ತಾ ವಿರುದ್ಧ ನಿರಂತರವಾಗಿ ಸೋಲುತ್ತಿದೆ. ಅಂದರೆ ಶನಿವಾರ ಪ್ಲೇಆಫ್‌ನಲ್ಲಿ ಸ್ಥಾನ ಪಡೆಯಬೇಕಾದರೆ, ಆರ್‌ಸಿಬಿ 10 ವರ್ಷಗಳ ಹಳೆಯ ಇತಿಹಾಸವನ್ನು ಬದಲಾಯಿಸಬೇಕಾಗುತ್ತದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರದರ್ಶನ ಉತ್ತಮವಾಗಿಲ್ಲ. ಈ ಮೈದಾನದಲ್ಲಿ ಆಡಿರುವ ಕಳೆದ 5 ಪಂದ್ಯಗಳಲ್ಲಿ ಆರ್‌ಸಿಬಿ ವಿರುದ್ಧ ಕೋಲ್ಕತ್ತಾ ಮೇಲುಗೈ ಸಾಧಿಸಿದೆ. 2015 ರಿಂದ, ಆರ್‌ಸಿಬಿ ತನ್ನ ತವರು ನೆಲದಲ್ಲಿ ಒಮ್ಮೆಯೂ ಕೆಕೆಆರ್ ತಂಡವನ್ನು ಸೋಲಿಸಲು ಸಾಧ್ಯವಾಗಿಲ್ಲ. ಅದೇ ಸಮಯದಲ್ಲಿ, ಈ ಮೈದಾನದಲ್ಲಿ ಎರಡೂ ತಂಡಗಳ ಒಟ್ಟಾರೆ ದಾಖಲೆಯ ಬಗ್ಗೆ ಮಾತನಾಡಿದರೆ, ಇಲ್ಲೂ ಸಹ ಆರ್‌ಸಿಬಿ ಹಿಂದುಳಿದಿದೆ. ಚಿನ್ನಸ್ವಾಮಿಯಲ್ಲಿ ಇಲ್ಲಿಯವರೆಗೆ ಉಭಯ ತಂಡಗಳ ನಡುವೆ 12 ಪಂದ್ಯಗಳು ನಡೆದಿದ್ದು, ಬೆಂಗಳೂರು ಕೇವಲ 4 ಪಂದ್ಯಗಳನ್ನು ಗೆದ್ದಿದ್ದರೆ, ಕೋಲ್ಕತ್ತಾ 8 ಪಂದ್ಯಗಳನ್ನು ಗೆದ್ದಿದೆ. ಇದಲ್ಲದೆ, ಐಪಿಎಲ್‌ನಲ್ಲಿ ಇಲ್ಲಿಯವರೆಗೆ ಉಭಯ ತಂಡಗಳ ನಡುವೆ 35 ಪಂದ್ಯಗಳು ನಡೆದಿದ್ದು, ಇದರಲ್ಲಿಯೂ ಆರ್‌ಸಿಬಿಯ ಪ್ರದರ್ಶನ ನಿರಾಶಾದಾಯಕವಾಗಿದೆ. ಕೆಕೆಆರ್ ವಿರುದ್ಧ 15 ಪಂದ್ಯಗಳಲ್ಲಿ ಗೆಲುವು ಸಾಧಿಸಿರುವ ಆರ್‌ಸಿಬಿ, 20 ಪಂದ್ಯಗಳಲ್ಲಿ ಸೋಲು ಅನುಭವಿಸಿದೆ. ಆದಾಗ್ಯೂ, ಈ ಸೀಸನ್‌ನಲ್ಲಿ ರಜತ್ ಪಾಟಿದಾರ್ ನಾಯಕತ್ವದಲ್ಲಿ, ಆರ್‌ಸಿಬಿ ಅನೇಕ ಹಳೆಯ ದಾಖಲೆಗಳನ್ನು ಮುರಿದಿದೆ. ಅದು 17 ವರ್ಷಗಳ ನಂತರ ಚೆಪಾಕ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮತ್ತು 10 ವರ್ಷಗಳ ನಂತರ ವಾಂಖೆಡೆಯಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸುವಲ್ಲಿ ಯಶಸ್ವಿಯಾಗಿದೆ. ಇದೀಗ ಕೋಲ್ಕತ್ತಾ ವಿರುದ್ಧವೂ ಅದೇ ಪ್ರದರ್ಶನ ನೀಡುವ ಇರಾದೆಯಲ್ಲಿ ಆರ್‌ಸಿಬಿ ಇದೆ. ಐಪಿಎಲ್ 2025 ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಅದ್ಭುತ ಪ್ರದರ್ಶನ ನೀಡಿದೆ. ತಂಡದ ಎಲ್ಲಾ ಆಟಗಾರರು ಫಾರ್ಮ್‌ನಲ್ಲಿದ್ದಾರೆ. ಆರ್‌ಸಿಬಿ ಇದುವರೆಗೆ 11 ಪಂದ್ಯಗಳನ್ನು ಆಡಿದ್ದು, 8 ಪಂದ್ಯಗಳನ್ನು ಗೆಲುವು ಸಾಧಿಸಿ 16 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

# ಐಪಿಎಲ್ ತೊರೆದ ಆಸ್ಟ್ರೇಲಿಯಾ ವೇಗಿ

3.5 ಕೋಟಿ ರೂ. ತ್ಯಾಗ ಮಾಡಲು ಸಿದ್ಧ

ಐಪಿಎಲ್ ದ್ವಿತೀಯಾರ್ಧ ಮೇ 17 ರಿಂದ ಮತ್ತೆ ಪ್ರಾರಂಭವಾಗಲಿದೆ. ಇದಕ್ಕೂ ಮುನ್ನ, ಭಾರತ ಮತ್ತು ಪಾಕಿಸ್ತಾನದ ಗಡಿಯಲ್ಲಿ ಉದ್ವಿಗ್ನತೆ ಉಂಟಾಗಿದ್ದರಿಂದ ಬಿಸಿಸಿಐ ಪಂದ್ಯಾವಳಿಯನ್ನು ಒಂದು ವಾರ ಸ್ಥಗಿತಗೊಳಿಸಿತ್ತು. ವಾಸ್ತವವಾಗಿ, ಮೇ 8, 2025 ರಂದು, ಧರ್ಮಶಾಲಾದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯವನ್ನು ಇದ್ದಕ್ಕಿದ್ದಂತೆ ನಿಲ್ಲಿಸಲಾಯಿತು. ಇದಕ್ಕೆ ಕಾರಣ ಗಡಿಯಲ್ಲಿ ಹೆಚ್ಚುತ್ತಿದ್ದ ಉದ್ವಿಗ್ನತೆ ಮತ್ತು ಡ್ರೋನ್ ದಾಳಿ. ಇದರಿಂದಾಗಿ ಅನೇಕ ವಿದೇಶಿ ಆಟಗಾರರು ತಮ್ಮ ದೇಶಕ್ಕೆ ಹಿಂದಿರುಗಿದ್ದರು. ಈ ಆಟಗಾರರಲ್ಲಿ ಕೆಲವರು ಲೀಗ್‌ನ ಉಳಿದ ಪಂದ್ಯಗಳಿಂದ ಹಿಂದೆ ಸರಿಯಲು ನಿರ್ಧರಿಸಿದ್ದಾರೆ. ಅವರುಗಳಲ್ಲಿ ಆಸ್ಟ್ರೇಲಿಯಾದ ಪ್ರಮುಖ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಕೂಡ ಒಬ್ಬರು.


**ಕಡಿಮೆ ವೇತನ ಪಡೆಯಲಿರುವ ಸ್ಟಾರ್ಕ್:** ಡೆಲ್ಲಿ ಕ್ಯಾಪಿಟಲ್ಸ್ ತಂಡದ ವೇಗಿ ಮಿಚೆಲ್ ಸ್ಟಾರ್ಕ್ ಉಳಿದ ಐಪಿಎಲ್ ಪಂದ್ಯಗಳನ್ನು ಆಡದಿರಲು ನಿರ್ಧರಿಸಿದ್ದಾರೆ. ಉಳಿದ ಪಂದ್ಯಗಳಿಂದ ಹಿಂದೆ ಸರಿಯುವ ನಿರ್ಧಾರದ ಬಗ್ಗೆ ಸ್ಟಾರ್ಕ್ ತಮ್ಮ ಫ್ರಾಂಚೈಸ್ ಡೆಲ್ಲಿ ಕ್ಯಾಪಿಟಲ್ಸ್‌ಗೆ ತಿಳಿಸಿದ್ದಾರೆ ಎಂದು ಹಲವಾರು ವರದಿಗಳು ಹೇಳಿವೆ. ವರದಿಗಳ ಪ್ರಕಾರ, ಈ ನಿರ್ಧಾರಕ್ಕಾಗಿ ಸ್ಟಾರ್ಕ್ ಸುಮಾರು 400,000 ಡಾಲರ್, ಅಂದರೆ ಸರಿಸುಮಾರು 3.5 ಕೋಟಿ ರೂಪಾಯಿಗಳನ್ನು ತ್ಯಾಗ ಮಾಡಲು ಸಿದ್ಧರಿದ್ದಾರೆ. ಕೋಡ್ ಸ್ಪೋರ್ಟ್ಸ್ ವರದಿಯ ಪ್ರಕಾರ, ಐಪಿಎಲ್‌ನ ನಿಯಮಗಳಲ್ಲಿ ಒಂದಾದ ಆಟಗಾರನು ಸೀಸನ್‌ನ ಎಲ್ಲಾ ಪಂದ್ಯಗಳನ್ನು ಆಡದಿದ್ದರೆ, ಆ ತಂಡವು ಆಟಗಾರರ ವೇತನವನ್ನು ಕಡಿತಗೊಳಿಸುವ ಅಧಿಕಾರವನ್ನು ಹೊಂದಿರುತ್ತದೆ. ಈ ನಿಯಮದ ಪ್ರಕಾರ, ಈ ಹಣವನ್ನು ಮಿಚೆಲ್ ಸ್ಟಾರ್ಕ್ ಅವರ ಸಂಬಳದಿಂದ ಕಡಿತಗೊಳಿಸಲಾಗುತ್ತದೆ. ಐಪಿಎಲ್ 2025 ರ ಹರಾಜಿನಲ್ಲಿ ಮಿಚೆಲ್ ಸ್ಟಾರ್ಕ್ ಅವರನ್ನು ಖರೀದಿಸಲು ಮುಂಬೈ ಇಂಡಿಯನ್ಸ್, ಕೆಕೆಆರ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಆರ್‌ಸಿಬಿ ಪೈಪೋಟಿ ನಡೆಸಿದ್ದವು. ಆದರೆ ಕೊನೆಯಲ್ಲಿ, ಡೆಲ್ಲಿ ಕ್ಯಾಪಿಟಲ್ಸ್ 11.75 ಕೋಟಿ ರೂ.ಗೆ ಸ್ಟಾರ್ಕ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿತು. ಈಗ ಸ್ಟಾರ್ಕ್ ಈ ಮೊತ್ತದಿಂದ 3.5 ಕೋಟಿ ರೂ.ಗಳನ್ನು ಬಿಟ್ಟುಕೊಡಬೇಕಾಗುತ್ತದೆ.

ಮಿಚೆಲ್ ಸ್ಟಾರ್ಕ್ ಐಪಿಎಲ್ 2025 ರಲ್ಲಿ ಒಟ್ಟು 11 ಪಂದ್ಯಗಳನ್ನು ಆಡಿದ್ದಾರೆ. ಈ ಅವಧಿಯಲ್ಲಿ, ಅವರು 10.16 ರ ಎಕಾನಮಿಯಲ್ಲಿ ರನ್ ಬಿಟ್ಟುಕೊಟ್ಟು 14 ವಿಕೆಟ್‌ಗಳನ್ನು ಪಡೆದಿದ್ದರು. ಅಲ್ಲದೆ ಸ್ಟಾರ್ಕ್ ಒಂದೇ ಪಂದ್ಯದಲ್ಲಿ 5 ವಿಕೆಟ್ ಕಬಳಿಸುವ ಮೂಲಕ ದಾಖಲೆ ಕೂಡ ನಿರ್ಮಿಸಿದ್ದರು.



# ಮಕ್ಕಳಂತೆ ಈಜಾಡಿದ ಡೇವಿಡ್!

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸ್ಟಾರ್ ಬ್ಯಾಟರ್ ಟಿಮ್ ಡೇವಿಡ್ ಚಿನ್ನಸ್ವಾಮಿ ಮೈದಾನದ ನೀರಿನಲ್ಲಿ ಈಜಾಡಿದ್ದಾರೆ. ಬೆಂಗಳೂರಿನಲ್ಲಿ ಈಗ ರಾತ್ರಿ ಭಾರೀ ಮಳೆ ಸುರಿಯುತ್ತಿದೆ. ಆರ್‌ಸಿಬಿ ತಂಡ ಮೈದಾನದಲ್ಲಿ ಅಭ್ಯಾಸ ನಡೆಸುತ್ತಿದ್ದಾಗ ಜೋರಾಗಿ ಸುರಿದಿದೆ.



ಮಳೆದ ಸುರಿದ ಹಿನ್ನೆಲೆಯಲ್ಲಿ ಆಟಗಾರರು ಡ್ರೆಸ್ಸಿಂಗ್ ಕೊಠಡಿ ಸೇರಿದ್ದರೆ ಟಿಮ್ ಡೇವಿಡ್ ಮೈದಾನದಲ್ಲಿ ನಿಂತಿದ್ದ ನೀರಿನಲ್ಲ ಈಜಾಡಿದ್ದಾರೆ. ಡೇವಿಡ್ ಈಜಾಡುತ್ತಿರುವ ವಿಡಿಯೋವನ್ನು ಆರ್‌ಸಿಬಿ ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿದೆ. ಆಸ್ಟ್ರೇಲಿಯಾದ ಟಿಮ್ ಡೇವಿಡ್ ಅವರನ್ನು ಆರ್‌ಸಿಬಿ ಹರಾಜಿನಲ್ಲಿ 3 ಕೋಟಿ ರೂ. ನೀಡಿ ಖರೀದಿಸಿತ್ತು. ಮೊದಲ ಬಾರಿಗೆ ಐಪಿಎಲ್ ಪ್ರತಿನಿಧಿಸುತ್ತಿರುವ ಡೇವಿಟ್ 11 ಪಂದ್ಯಗಳಿಂದ 186 ರನ್ ಹೊಡೆದಿದ್ದಾರೆ.

ಆಪರೇಷನ್ ಸಿಂಧೂರ ಕಾರ್ಯಾಚರಣೆಯ ನಂತರ ಸ್ಥಗಿತಗೊಂಡಿದ್ದ ಐಪಿಎಲ್ ಪಂದ್ಯಗಳು ಮೇ 17 ರಿಂದ ಆರಂಭವಾಗಲಿದೆ. ಶನಿವಾರ ಬೆಂಗಳೂರಿನಲ್ಲಿ ಆರ್‌ಸಿಬಿ ಮತ್ತು ಕೋಲ್ಕತ್ತಾ ಮಧ್ಯೆ ಪಂದ್ಯ ನಡೆಯಲಿದೆ. ಈಗಾಗಲೇ 16 ಅಂಕ ಗಳಿಸಿರುವ ಆರ್‌ಸಿಬಿ ನಾಳಿನ ಪಂದ್ಯ ಗೆದ್ದರೆ ಪ್ಲೇ ಆಫ್ ಪ್ರವೇಶಿಸಿದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

# ರೋಹಿತ್ ಶರ್ಮಾ ಸ್ಟ್ಯಾಂಡ್ ಉದ್ಘಾಟನೆ

ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಭಾರತೀಯ ಕ್ರಿಕೆಟ್‌ಗೆ ಅನೇಕ ಉತ್ತಮ ಕ್ಷಣಗಳನ್ನು ನೀಡಿದ್ದಾರೆ. ಕಳೆದ 18 ವರ್ಷಗಳಿಂದ, ರೋಹಿತ್ ವಿಶ್ವ ಕ್ರಿಕೆಟ್‌ನಲ್ಲಿ ಭಾರತದ ಘನತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇದೀಗ ವೃತ್ತಿಜೀವನದಿಂದ ತೆರೆ ಮರೆಗೆ ಸರಿಯುತ್ತಿರುವ ರೋಹಿತ್‌ಗೆ ಭಾರತದಲ್ಲಿ ಮಾತ್ರವಲ್ಲದೆ ವಿಶ್ವ ಕ್ರಿಕೆಟ್‌ನಲ್ಲಿ ಕೆಲವೇ ಆಟಗಾರರಿಗೆ ಸಿಕ್ಕಿರುವ ಗೌರವ ಅವರಿಗೆ ಸಿಕ್ಕಿದೆ. ಮುಂಬೈ ಕ್ರಿಕೆಟ್ ಅಸೋಸಿಯೇಷನ್ ಐತಿಹಾಸಿಕ ವಾಂಖೆಡೆ ಕ್ರೀಡಾಂಗಣದ ಒಂದು ಸ್ಟ್ಯಾಂಡ್ ಅನ್ನು ಹಿಟ್‌ಮ್ಯಾನ್‌ಗೆ ಅರ್ಪಿಸಿದೆ. ಮೇ 16, ಶುಕ್ರವಾರದಂದು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ರೋಹಿತ್ ಶರ್ಮಾ ಸ್ಟ್ಯಾಂಡ್ ಅನ್ನು ಉದ್ಘಾಟಿಸಲಾಗಿದೆ.

**ರೋಹಿತ್ ಶರ್ಮಾ ಸ್ಟ್ಯಾಂಡ್ ಉದ್ಘಾಟನೆ**

ಮೇ 16, ಶುಕ್ರವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ರೋಹಿತ್ ಶರ್ಮಾ ಸ್ಟ್ಯಾಂಡ್ ಅನ್ನು ಉದ್ಘಾಟಿಸಲಾಯಿತು. ಮುಂಬೈ ಕ್ರಿಕೆಟ್ ಅಸೋಸಿಯೇಷನ್ (ಎಂಸಿಎ) ಕೆಲವು ದಿನಗಳ ಹಿಂದೆ ಟಿ20 ವಿಶ್ವಕಪ್ ಮತ್ತು ಚಾಂಪಿಯನ್ಸ್ ಟ್ರೋಫಿ ಗೆದ್ದ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಅವರನ್ನು ಈ ರೀತಿ ಗೌರವಿಸಲು ಬಯಸುವುದಾಗಿ ಘೋಷಿಸಿತ್ತು. ಐಪಿಎಲ್ ಪಂದ್ಯದ ಸಮಯದಲ್ಲಿ ರೋಹಿತ್ ಶರ್ಮಾ ಸ್ಟ್ಯಾಂಡ್ ಅನ್ನು ಉದ್ಘಾಟಿಸಲು ಎಂಸಿಎ ಯೋಜಿಸಿತ್ತು. ಆದರೆ ಪಂದ್ಯಾವಳಿಯನ್ನು ಅರ್ಧಕ್ಕೆ ನಿಲ್ಲಿಸಬೇಕಾದ್ದರಿಂದಾಗಿ ಅದನ್ನು ಮುಂದೂಡಲಾಯಿತು.




# ಗುಜರಾತ್, ಆರ್‌ಸಿಬಿಗೂ ಟಿಕೆಟ್ ಖಚಿತವಾಗಿಲ್ಲ

7 ತಂಡಗಳ ಪ್ಲೇಆಫ್ ಲೆಕ್ಕಾಚಾರ

ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯಿಂದಾಗಿ ಒಂದು ವಾರ ಸ್ಥಗಿತಗೊಳಿಸಲಾಗಿದ್ದ ಐಪಿಎಲ್ 2025 ಮತ್ತೆ ಪ್ರಾರಂಭವಾಗಲಿದೆ. ಈ ಸೀಸನ್‌ನಲ್ಲಿ ಪ್ರತಿಯೊಂದು ಪಂದ್ಯವೂ ಎಲ್ಲಾ ತಂಡಗಳಿಗೆ ಮಾಡು ಇಲ್ಲವೇ ಮಡಿ ಎಂಬ ಹಂತ ತಲುಪಿದೆ. ಅಗ್ರ ಏಳು ತಂಡಗಳಲ್ಲಿ ಪ್ಲೇಆಫ್ ತಲುಪುವ ಹೋರಾಟ ತೀವ್ರಗೊಂಡಿದೆ. ಇದರಲ್ಲಿ ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಪ್ಲೇಆಫ್‌ಗೆ ಕೇವಲ ಒಂದು ಗೆಲುವಿನಿಂದ ದೂರದಲ್ಲಿವೆ.

ಆದರೆ ಈ ಪ್ರಯಾಣವು ಇತರ ಐದು ತಂಡಗಳಿಗೆ ತುಂಬಾ ಕಷ್ಟಕರವಾಗಿರುತ್ತದೆ.

ಈ ಸೀಸನ್‌ನಲ್ಲಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಗುಜರಾತ್ ಟೈಟಾನ್ಸ್‌ಗೆ ಪ್ಲೇಆಫ್ ತಲುಪಲು ಕೇವಲ ಒಂದು ಗೆಲುವು ಮಾತ್ರ ಬೇಕಾಗಿದೆ. ಜಿಟಿಗೆ ಇನ್ನೂ ಮೂರು ಪಂದ್ಯಗಳು ಉಳಿದಿವೆ. ಇದರಲ್ಲಿ ಒಂದು ಪಂದ್ಯ ಗೆದ್ದರೆ 18 ಅಂಕಗಳನ್ನು ಪಡೆಯುವ ಮೂಲಕ ಸುಲಭವಾಗಿ ಪ್ಲೇಆಫ್ ತಲುಪುತ್ತದೆ. ಆದಾಗ್ಯೂ, ಈ ಸಮಯದಲ್ಲಿ ಗುಜರಾತ್ ತಂಡ ರನ್ ರೇಟ್ ಮೇಲೆ ವಿಶೇಷ ಗಮನ ಹರಿಸಬೇಕಾಗುತ್ತದೆ, ಏಕೆಂದರೆ ರನ್ ರೇಟ್ ವಿಚಾರದಲ್ಲಿ ಗಿಲ್ ಪಡೆ ಮುಂಬೈ ಇಂಡಿಯನ್ಸ್ ಗಿಂತ ಹಿಂದಿದ್ದಾರೆ.



ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೇ 17 ರಂದು ತನ್ನ ತವರು ಮೈದಾನದಲ್ಲಿ ಕೆಕೆಆರ್ ತಂಡವನ್ನು ಎದುರಿಸಲಿದೆ. ಈ ಸೀಸನ್‌ನಲ್ಲಿ ಅದರಲ್ಲೂ ತವರಿನಲ್ಲಿ ಆರ್‌ಸಿಬಿ ದಾಖಲೆ ತುಂಬಾ ಕಳಪೆಯಾಗಿದೆ. ಆದಾಗ್ಯೂ ಆರ್‌ಸಿಬಿ ಪ್ಲೇಆಫ್ ತಲುಪಲು ಕೇವಲ ಒಂದು ಗೆಲುವು ಮಾತ್ರ ಅಗತ್ಯವಿದ್ದು, ತಂಡಕ್ಕೆ ಇನ್ನು ಮೂರು ಪಂದ್ಯಗಳು ಉಳಿದಿವೆ. ಆದಾಗ್ಯೂ, ಎರಡು ಗೆಲುವುಗಳು ಸಹ ಆರ್‌ಸಿಬಿಗೆ ಮೊದಲ ಎರಡು ಸ್ಥಾನಗಳಲ್ಲಿ ಸ್ಥಾನ ನೀಡುವುದನ್ನು ಖಾತರಿಪಡಿಸುವುದಿಲ್ಲ. ಏಕೆಂದರೆ ಇತರ ಎರಡು ತಂಡಗಳಾದ ಜಿಟಿ ಮತ್ತು ಪಿಬಿಕೆಎಸ್ 20 ಅಥವಾ ಹೆಚ್ಚಿನ ಅಂಕಗಳನ್ನು ಪಡೆಯುವ ಅವಕಾಶ ಹೊಂದಿವೆ.

**ಪಂಜಾಬ್ 2 ಪಂದ್ಯ ಗೆಲ್ಲಲೇಬೇಕು:** ಪಂಜಾಬ್ ಕಿಂಗ್ಸ್ ಪ್ಲೇಆಫ್ ತಲುಪಲು ಎರಡು ಪಂದ್ಯಗಳನ್ನು ಗೆಲ್ಲಲೇಬೇಕು. ಪಿಬಿಕೆಎಸ್ ಪ್ರಸ್ತುತ 11 ಪಂದ್ಯಗಳಲ್ಲಿ 15 ಅಂಕಗಳನ್ನು ಹೊಂದಿದೆ. ಅಂತಹ ಪರಿಸ್ಥಿತಿಯಲ್ಲಿ ಯಾವುದೇ ಬೆಲೆ ತೆತ್ತಾದರೂ ಎರಡು ಪಂದ್ಯಗಳನ್ನು ಗೆಲ್ಲಲೇಬೇಕಾಗುತ್ತದೆ. ಒಂದು ವೇಳೆ ಕೇವಲ ಒಂದು ಪಂದ್ಯವನ್ನು ಗೆದ್ದರೆ, ಐದು ತಂಡಗಳು 17 ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಬಹುದಾದ್ದರಿಂದ ಪ್ಲೇಆಫ್ ತಲುಪುವುದು ಪಂಜಾಬ್‌ಗೆ ಸುಲಭವಲ್ಲ. ಒಂದು ವೇಳೆ ಪಂಜಾಬ್, ರಾಜಸ್ಥಾನ್ ರಾಯಲ್ಸ್ ತಂಡವನ್ನು ಸೋಲಿಸಿ, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಮುಂಬೈ ಇಂಡಿಯನ್ಸ್ ವಿರುದ್ಧ ಸೋತರೆ, ಮತ್ತು ಡೆಲ್ಲಿ, ಗುಜರಾತ್ ತಂಡವನ್ನು ಸೋಲಿಸಿ ಮುಂಬೈ ವಿರುದ್ಧ ಸೋತರೆ, ಆರ್‌ಸಿಬಿ, ಗುಜರಾತ್, ಮುಂಬೈ, ಡೆಲ್ಲಿ ಮತ್ತು ಪಂಜಾಬ್ ಎಲ್ಲಾ ತಂಡಗಳು 17 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆಯಬಹುದು.

ಆದಾಗ್ಯೂ, ಪಂಜಾಬ್, ಡೆಲ್ಲಿ ತಂಡವನ್ನು ಸೋಲಿಸಿ ಇನ್ನೆರಡು ಪಂದ್ಯಗಳಲ್ಲಿ ಸೋತರೆ, ಅವರು 17 ಅಂಕಗಳೊಂದಿಗೆ ಅರ್ಹತೆ ಪಡೆಯಬಹುದು,

ಏಕೆಂದರೆ ಆ ಸಂದರ್ಭದಲ್ಲಿ ಮುಂಬೈ ಅಥವಾ ಡೆಲ್ಲಿ ತಂಡಗಳಲ್ಲಿ ಒಂದು ತಂಡ ಮಾತ್ರ 17 ಅಥವಾ ಹೆಚ್ಚಿನ ಅಂಕಗಳನ್ನು ಪಡೆಯಬಹುದು ಏಕೆಂದರೆ ಈ ಎರಡೂ ತಂಡಗಳು ಪರಸ್ಪರ ಪಂದ್ಯವನ್ನು ಆಡಬೇಕಿದೆ. ಪಂಜಾಬ್ ಕಿಂಗ್ಸ್ ಮೂರು ಪಂದ್ಯಗಳಲ್ಲಿ ಸೋತರೂ ಸಹ, ಪ್ಲೇಆಫ್ ತಲುಪುವ ಭರವಸೆ ಇನ್ನೂ ಇರುತ್ತದೆ, ಆದರೆ ಇದಕ್ಕಾಗಿ ಇತರ ತಂಡಗಳನ್ನು ಅವಲಂಬಿಸಬೇಕಾಗುತ್ತದೆ.

**ಮುಂಬೈಗೂ ಅಗ್ನಿಪರೀಕ್ಷೆ:** ಮುಂಬೈ ಇಂಡಿಯನ್ಸ್ ತಂಡ 12 ಪಂದ್ಯಗಳಿಂದ 14 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಈಗ ಪ್ಲೇಆಫ್ ತಲುಪಲು ಮುಂಬೈ ತಂಡ ತನ್ನ ಎರಡೂ ಪಂದ್ಯಗಳನ್ನು ಗೆಲ್ಲಲೇಬೇಕು. ಇದಲ್ಲದೆ ಮುಂಬೈ ಇತರ ತಂಡಗಳ ಫಲಿತಾಂಶಗಳನ್ನು ಸಹ ಅವಲಂಬಿಸಬೇಕಾಗುತ್ತದೆ. ಆದಾಗ್ಯೂ ಮುಂಬೈ ತಂಡದ ರನ್ ರೇಟ್ ಅತ್ಯುತ್ತಮವಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966